ಜನಪದ ಕಾವ್ಯ ಸಂಪಾದನೆಗಳ ಹಿಂದಿನ ತಾತ್ವಿಕತೆ

(ಪ್ರಾತಿನಿಧಿಕ ಪಠ್ಯಗಳು)

(ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರೌಢಪ್ರಬಂಧ)

ಸಂಶೋಧಕರು
ನಿಶಾಂತ ಎಂ.

ಮಾರ್ಗದರ್ಶಕರು
ಡಾ.ವೆಂಕಟೇಶ ಇಂದ್ವಾಡಿ
ಸಹ ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೪

ಜನಪದ ಕಾವ್ಯ ಸಂಪಾದನೆಗಳ ಹಿಂದಿನ ತಾತ್ವಿಕತೆ

(ಪ್ರಾತಿನಿಧಿಕ ಪಠ್ಯಗಳು)

(ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸುತ್ತಿರುವ ಪ್ರೌಢಪ್ರಬಂಧ)

ಸಂಶೋಧಕರು
ನಿಶಾಂತ ಎಂ.

ಮಾರ್ಗದರ್ಶಕರು
ಡಾ.ವೆಂಕಟೇಶ ಇಂದ್ವಾಡಿ
ಸಹ ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೪

ಘೋಷಣಾ ಪತ್ರ

ಜನಪದ ಕಾವ್ಯ ಸಂಪಾದನೆಗಳ ಹಿಂದಿನ ತಾತ್ವಿಕತೆ(ಪ್ರಾತಿನಿಧಿಕ ಪಠ್ಯಗಳು) ಎಂಬ ಪ್ರೌಢಪ್ರಬಂಧವನ್ನು **ಡಾ.ವೆಂಕಟೇಶ ಇಂದ್ವಾಡಿ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸುತ್ತಿದ್ದೇನೆ. ಈ ಪ್ರೌಢಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗ ಎಲ್ಲಿಯೂ ಪ್ರಕಟಗೊಳಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ನಿಶಾಂತ ಎಂ.
ಸಂಶೋಧಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ: ವಿದ್ಯಾರಣ್ಯ
ದಿನಾಂಕ:

ಮಾರ್ಗದರ್ಶಕರ ಪ್ರಮಾಣ ಪತ್ರ

ಜನಪದ ಕಾವ್ಯ ಸಂಪಾದನೆಗಳ ಹಿಂದಿನ ತಾತ್ವಿಕತೆ ಎಂಬ ಪ್ರೌಢ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ **ಶ್ರೀ ನಿಶಾಂತ ಎಂ.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಪ್ರೌಢಪ್ರಬಂಧವು ಮೂಲವಾಗಿದ್ದು, ಈ ಮೊದಲು ಇದನ್ನು ಯಾವುದೇ ಪದವಿಗಾಗಿ ಇಲ್ಲವೆ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ವೆಂಕಟೇಶ ಇಂದ್ವಾಡಿ
ಮಾರ್ಗದರ್ಶಕರು ಹಾಗೂ ಸಹ ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ: ವಿದ್ಯಾರಣ್ಯ
ದಿನಾಂಕ:

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ಮಹತ್ವ, ವಿಧಾನ ಹಾಗೂ ವ್ಯಾಪ್ತಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ಮಹತ್ವ, ವಿಧಾನ ಹಾಗೂ ವ್ಯಾಪ್ತಿ

ಪ್ರಸ್ತಾವನೆ

ಜಾನಪದವು ಒಂದು ವಿಶಾಲವಾದ ಅಧ್ಯಯನ ಕ್ಷೇತ್ರ. ಇದರ ಪದದ ಅರ್ಥವ್ಯಾಪ್ತಿಯೂ ವಿಸ್ತೃತವಾಗಿದೆ. ಪ್ರತಿಯೊಂದು ರಾಷ್ಟ್ರವೂ ಶ್ರೀಮಂತ ಸಾಹಿತ್ಯ ಪರಂಪರೆಯನ್ನು ಹೊಂದಿರುತ್ತದೆ. ಜೊತೆಗೆ ಅಪೂರ್ವವಾದ ಜನಪದ ಸಾಹಿತ್ಯವನ್ನು ತನ್ನ ಕಣಜದಲ್ಲಿ ತುಂಬಿಕೊಂಡಿರುತ್ತದೆ.

ಜಾನಪದ ಎಂದರೆ ತಲೆಮಾರಿನಿಂದ ತಲೆಮಾರಿಗೆ, ಬಾಯಿಯಿಂದ ಬಾಯಿಗೆ ಹರಿದು ಬರುವ ಮೌಖಿಕ ಸಂಪ್ರದಾಯ. ಈ ಜಾನಪದವನ್ನು ಮೊದಲಬಾರಿಗೆ ೧೮೪೬ ರಲ್ಲಿ ಡಬ್ಲೂ.ಜಿ.ಥಾಮ್ಸ್ ಅವರು Folklore ಎನ್ನುವ ಪದದಿಂದ ಕರೆದರು. ಥಾಮ್ಸ್ ಜನಪದವನ್ನು ಕುರಿತು ಆಯಾ ದೇಶದ ಸಂಸ್ಕೃತಿಯ ಮೂಲಸತ್ವವನ್ನು ಹಾಗೂ ವೈಶಿಷ್ಟ್ಯವನ್ನು ಬಳಸಿಕೊಂಡು ಬಂದಿರುವವರು ನಗರಗಳಲ್ಲಿರುವ ಜನರಲ್ಲ, ಹಳ್ಳಿಗಳಲ್ಲಿ ಮಣ್ಣಿಗೆ ಹತ್ತಿರವಾಗಿರುವ ಜನಸಾಮಾನ್ಯರು' ಎಂಬುದಾಗಿ ಹೇಳುತ್ತಾರೆ.

ವಿವಿಧ ಪ್ರಕಾರವನ್ನು ಜಾನಪದ ಒಳಗೊಂಡಿದೆ. ಕಥೆ, ಗಾದೆ, ಒಗಟು, ಕಥನಗೀತೆ, ಕಾವ್ಯಗಳು ಇದರಲ್ಲಿ ಪ್ರಮುಖವಾಗಿವೆ. ಈ ಕಾವ್ಯ ಪ್ರಕಾರದಲ್ಲಿ ಕಥೆಯು ಸಹ ಸೇರಿಕೊಂಡಿದ್ದು. ಕಥನ ಕಾವ್ಯಗಳು ಎಂದು ಇದನ್ನು ಕರೆಯಬಹುದಾಗಿದೆ.

ಕರ್ನಾಟಕದಲ್ಲಿ ಜಾನಪದ ಅಧ್ಯಯನ ಆರಂಭವಾದದ್ದು ಇತ್ತೀಚೆಗೆ. ಭಾರತದ ಇತರೆಡೆಗಳಲ್ಲಿರುವಂತೆ ಇಲ್ಲಿಯೂ ಜಾನಪದ ಸಂಗ್ರಹ ಕುರಿತ ಆಸಕ್ತಿ ಕುದುರಿದುದು ನವೋದಯ ಸಾಹಿತ್ಯ ಸಂದರ್ಭದ ಜೊತೆಯಲ್ಲಿಯೇ. ಕನ್ನಡ ನವೋದಯ ಸಾಹಿತ್ಯಕ್ಕೆ ಪಾಶ್ಚಾತ್ಯ ಸಾಹಿತ್ಯ ಸಂಪರ್ಕ ಕಾರಣವಾದಂತೆ ಕರ್ನಾಟಕ ಜಾನಪದ ಅಧ್ಯಯನ ಆರಂಭಕ್ಕೂ ಪಾಶ್ಚಾತ್ಯ ಅಧ್ಯಯನಕಾರರೇ ಕಾರಣವಾಗಿದ್ದಾರೆ. ಕಳೆದ ಶತಮಾನದ ಆರಂಭದಿಂದಲೂ ಅನೇಕ ಪಾಶ್ಚಾತ್ಯ ವಿದ್ವಾಂಸರು, ಮಿಷನರಿಗಳು ಭಾರತಕ್ಕೆ ಬಂದು ಬೇರೆ ಬೇರೆ ಉದ್ದೇಶಗಳಿಗಾಗಿ ನಾನಾ

ಬಗೆಯ ಸಂಶೋಧನಾ ಕಾರ್ಯ ಕೈಗೊಂಡಂತೆ, ಜಾನಪದ ಸಂಗ್ರಹಣೆಗೂ ತೊಡಗಿದರು. ೧೮೦೦ರ ಸುಮಾರಿನಲ್ಲೇ ಲಾವಣಿ ಸಂಗ್ರಹ ಕಾರ್ಯವನ್ನು ಪಾಶ್ಚಾತ್ಯ ವಿದ್ವಾಂಸರು ನಡೆಸಿದ್ದಕ್ಕೆ ಆಧಾರಗಳಿವೆ. ಜಾನ್ ಲೇಡನ್, ಕಿಟಲ್, ಮೆಕೆಂಜಿ. ಅಬ್ಬೆ ಮೊದಲಾದ ವಿದ್ವಾಂಸರು ಜಾನಪದದ ವಿವಿಧ ಪ್ರಕಾರಗಳನ್ನು ಸಂಗ್ರಹಿಸಿ ಕರ್ನಾಟಕ ಸಂಸ್ಕೃತಿಯ ಅಧ್ಯಯನಕ್ಕೆ ಉತ್ತಮ ತಳಹದಿಯನ್ನು ಹಾಕಿದ್ದಾರೆ.

ಕನ್ನಡ ಸಂಸ್ಕೃತಿಯನ್ನು ಅಧ್ಯಯನ ಮಾಡುವವರಿಗೆ ಜಾನಪದ ಆಕರವಾಗಿದೆ. ಇದು ಸಮಗ್ರ ಜೀವನದ ನೆಲೆಯನ್ನು ಹೊಂದಿರುವ ಒಂದು ಬೃಹತ್ ಕ್ಷೇತ್ರವಾಗಿದೆ. ಬ್ರಿಟಿಷರು ಬರುವುದಕ್ಕೂ ಮೊದಲು ಜಾನಪದದ ತಿಳುವಳಿಕೆ ಇರಲಿಲ್ಲ. ಜಾನಪದ ಸಾಹಿತ್ಯವಿದ್ದರೂ ಇದನ್ನು ಕುರಿತ ಅಧ್ಯಾಯಗಳು ಭಾರತದಲ್ಲಿ ಮೂಡಿರಲಿಲ್ಲ. ಜಾನಪದವನ್ನು ಗುರುತಿಸುವುದಕ್ಕೆ ಬ್ರಿಟಿಷರು ಬರಬೇಕಾಯಿತು. ಉದಾಹರಣೆಗೆ ರಾಯಭಾರಿಯಾಗಿ ಬಂದ ಫ್ಲೀಟ್ ಲಾವಣಿಗಳನ್ನು ಸಂಗ್ರಹಣೆ ಮಾಡಿದ್ದಾನೆ.

ನವೋದಯ ಕಾಲಘಟ್ಟದ ಸಂದರ್ಭದಲ್ಲಿ ಕವಿಗಳ ಕಳಕಳಿಯಿಂದ ಜಾನಪದ ಆಸಕ್ತಿಯಿಂದ ಬೆಳೆಯುತ್ತ ಬಂದಿತು. ಜನಪದವನ್ನು ಕುರಿತು ಬಿ.ಎಂ.ಶ್ರೀ ಅವರು "ಜನವಾಣಿ ಬೇರು ಕವಿವಾಣಿ ಹೂ" ಎಂಬುದಾಗಿ ಕರೆದರು. ಈ ಕಾಲಘಟ್ಟದಲ್ಲಿ ಭಾವಗೀತೆಗಳೇ ಪ್ರಧಾನವಾಗಿ ಇದರಿಂದ ಜನಪದ ಗೀತೆಗಳು ತಮ್ಮ ಅಸ್ತಿತ್ವವನ್ನು ಪಡೆದುಕೊಂಡಿರಲಿಲ್ಲ. ನಂತರ ಬಂದಂತಹ ಹಲಸಂಗಿ ಗೆಳೆಯರು, ಗೊರೂರು, ಕರಾಕೃ, ಕಾಪಸೆ ರೇವಪ್ಪ ಮುಂತಾದವರು ತಮ್ಮ ಸ್ಥಳೀಯ ಸಾಹಿತ್ಯ ಅಧ್ಯಯನ ಮಾಡಬೇಕು ಎಂಬುದನ್ನು ಅರಿತು ಜಾನಪದ ಶೋಧನ ಕಾರ್ಯವನ್ನು ಆರಂಭಿಸಿದರು. ಇದಕ್ಕಿಂತ ಮುಂಚಿತವಾಗಿ ಫ್ಲೀಟರು ಲಾವಣಿಗಳನ್ನು ಸಂಗ್ರಹ ಮಾಡಿದ್ದನ್ನು ಗಮನದಲ್ಲಿಟ್ಟುಕೊಂಡ ಕನ್ನಡ ಕವಿ ಪರಂಪರೆಯು ನಮ್ಮ ಜನ, ನಮ್ಮ ಊರು, ಮಣ್ಣಿಗೆ ಹತ್ತಿರವಾಗಿರುವಂತಹ ನಮ್ಮ ಸಂಸ್ಕೃತಿಯ ಸಾಹಿತ್ಯವನ್ನು ಸಂಪಾದನೆ ಮಾಡಬೇಕು ಹಾಗೂ ಶ್ರಮಜೀವಿಗಳ ನಾಲಿಗೆಯ ಮೇಲೆ ಇರುವಂತಹ ನೂರಾರು ಗೀತೆಗಳನ್ನು ಸಂಗ್ರಹಿಸಬೇಕು ಎಂದು ಜನಪದ ಸಂಪಾದನೆಯ ಕಾರ್ಯದಲ್ಲಿ ತೊಡಗಿದರು.

ಸಂಪಾದನೆಯ ಕಾರ್ಯದಲ್ಲಿ ತೊಡಗಿದ ಅರ್ಚಕ ರಂಗಸ್ವಾಮಿಯವರು ಜಾನಪದ ಕುರಿತು "ನಾವು ಇಂಗ್ಲೀಶ್ ಸಾಹಿತ್ಯವನ್ನು ನಮ್ಮ ಮಾತೃಭಾಷೆಯನ್ನಾಗಿ ಮಾಡಿಕೊಳ್ಳಲು ಸಾಧ್ಯವಿಲ್ಲ. ಕನ್ನಡ ಸಂಸ್ಕೃತಿ ಜಾನಪದವನ್ನು ತಳದಿಂದ ಕಟ್ಟುವ ದೃಷ್ಟಿ ಇರುವವರಿಗೆ ಗೊತ್ತು, ತಾನು ಎಲ್ಲಿಂದ ಹೇಗೆ ತನ್ನ ಸಂಸ್ಕೃತಿ ಜಾನಪದ ಅನನ್ಯತೆಯನ್ನು ಪ್ರತಿಪಾದಿಸಿಕೊಳ್ಳಬೇಕು ಎಂದು ಅನ್ಯ ತಾಯಿಯಲ್ಲವೆಂಬುದನ್ನು ಕಂಡುಕೊಳ್ಳುವ ಸಾಮಾನ್ಯಜ್ಞಾನವೊಂದಿದ್ದರೆ ಸಾಕು ತಾಯಿಯನ್ನು ಕಂಡುಕೊಳ್ಳಬಹುದು" ಎಂಬುದಾಗಿ ಹೇಳಿದ್ದಾರೆ.

ಜಾನಪದ ಕಾವ್ಯಗಳ ಸಂಪಾದನೆ

ನವೋದಯ ಕಾಲಘಟ್ಟದಲ್ಲಿ ತೀವ್ರವಾಗಿ ಜಾನಪದ ಕಾವ್ಯ ಕಥೆ, ಗಾದೆ, ಒಗಟು ಲಾವಣಿಗಳನ್ನು ಸಂಗ್ರಹ ಮಾಡಲಾಯಿತು ಈ ರೀತಿಯ ಸಂಪಾದನೆಯ ಕಾರ್ಯದ ಹಿಂದಿನ ತಾತ್ವಿಕತೆಯನ್ನು ನಂತರ ಅಧ್ಯಯನಕ್ಕೆ ಒಳಪಡಿಸಲಾಹಿತು. ಸಾಹಿತ್ಯ ಎಂದರೆ ಸಾಂಪ್ರದಾಯಿಕ ಸಾಹಿತ್ಯ ಚರಿತ್ರೆಯನ್ನು ಕಟ್ಟಿಕೊಡುವ ಕಾರಣ ಮಾತ್ರವಲ್ಲ, ಇದರಾಚೆಗೆ ಅಪಾರವಾದ ಜಾನಪದ ಸಾಹಿತ್ಯ ಇದೆ. ರಂ.ಶ್ರೀ ಮುಗಳಿ ಲಿಖಿತ ರೂಪದ ಆಧಾರದ ಸಹಾಯದಿಂದ ಸಾಹಿತ್ಯವನ್ನು ಆರಂಭಿಸುತ್ತಾರೆ. ಜಾನಪದ ಮೂಲಗಳು ಇದ್ದರೂ ಅಧ್ಯಯನ ಮಾಡಲಿಲ್ಲ. ಶ್ರೀ ವಿಜಯನ ಕವಿರಾಜಮಾರ್ಗದಲ್ಲಿಯೇ ಜನಪದ ಬಗ್ಗೆ ಉಲ್ಲೇಖವನ್ನು ನೀಡಿದ್ದಾನೆ. "ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತಮತಿಗಳ್" ಎಂಬುದಾಗಿ ಹೇಳಿದ್ದಾನೆ. ಅಪಾರವಾದ ಜಾನಪದ ಸಾಹಿತ್ಯವನ್ನು ಹೊರಗಿಟ್ಟು ಕನ್ನಡ ಸಾಹಿತ್ಯ ಚರಿತ್ರೆ ಸೃಷ್ಟಿಯಾಯಿತು. ಇದರಿಂದ ಜಾನಪದ ಕುರಿತಂತಹ ನಿರ್ಲಕ್ಷ್ಯ ಕಂಡುಬರುತ್ತದೆ.

ಮೊದಲು ಜಾನಪದ ಸಂಪಾದನೆಯ ಕಾರ್ಯವು ಕರ್ನಾಟಕದಲ್ಲಿ ೧೯೨೦ರ ಸುಮಾರಿನಲ್ಲಿ ಪ್ರಾರಂಭವಾಯಿತು. ಈ ಸಮಯದಲ್ಲಿ ಅನೇಕ ಜನ ವಿದ್ವಾಂಸರು ಸಂಪಾದನ ಕಾರ್ಯದಲ್ಲಿ ತೊಡಗಿದರು ಅವರಲ್ಲಿ ಹಲಸಂಗಿ ಗೆಳೆಯರು, ಮೊದಲಿಗರು, ಮಧುರಚನ್ನ, ಕಾಪಸೆ ರೆವಪ್ಪ, ಸಿಂಪಿ ಲಿಂಗಣ್ಣ ಈ ಮೂರು ಜನ ಸ್ನೆಹಿತರು ಗರತಿಯ ಹಾಡು ಜನಪದ ಗೀತೆಗಳನ್ನು ಸಂಗ್ರಹಿಸಿದರು. ಅರ್ಚಕ ರಂಗಸ್ವಾಮಿ ಅವರು ಹುಟ್ಟಿದ ಹಳ್ಳಿಯಲ್ಲಿ ಜಾನಪದ ಮಹತ್ವವನ್ನು ತಿಳಿಸಿದರು 'ಹಳ್ಳಿಯ ಹಾಡು' ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಸಂಗ್ರಹಿಸಿದರು, ಕಾಪಸೆ ರೇವಪ್ಪ ಅವರು 'ಮಲ್ಲಿಗೆ ದಂಡೆ' ಹೀಗೆ ಸಂಗ್ರಹಣೆಯ ಕಾರ್ಯವು ಮುಂದುವರೆಯುತ್ತದೆ. ಇನ್ನೂ ಅನೇಕ ವಿದ್ವಾಂಸರು ಇದೇ ಮಾರ್ಗವನ್ನು ಅನುಸರಿಸಿದರು. ಮತ್ತಿಘಟ್ಟ ಕೃಷ್ಣಮೂರ್ತಿ, ಕ.ರಾ.ಕೃ ವೀರಣ್ಣದಂಡೆ, ಜಿ.ಶಂ.ಪ, ಹಾ.ಮಾ.ನಾ, ದೆ.ಜವರೇಗೌಡ, ಗದ್ಗಿಗಿಮಠ, ಎಂ.ಎಸ್. ಲಠ್ಥೆ, ಬೀರಾದಾರ್ ಮುಂತಾದವರು ಜಾನಪದ ಸಂಪಾದನೆಯ ಕಾರ್ಯದಲ್ಲಿ ತೊಡಗಿದರು. ಬಿ.ಎಂ.ಶ್ರೀ, ಬೇಂದ್ರೆ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಎಚ್.ಎಲ್.ನಾಗೇಗೌಡ ಮುಂತಾದವರು ಜಾನಪದ ಸಾಹಿತ್ಯ ಸಂಪಾದನೆಯ ಕಾರ್ಯದ ಜೊತೆಯಲ್ಲಿ ಪ್ರಸ್ತಾವನೆ ರೂಪದಲ್ಲಿ ಸಂಪಾದನೆಯ ಹಿಂದಿನ ತಾತ್ವಿಕತೆಯನ್ನು ಚರ್ಚಿಸುತ್ತಾರೆ.

ನಂತರದ ದಿನಗಳಲ್ಲಿ ಜಾನಪದ ವಿದ್ವಾಂಸರು ಪ್ರಧಾನವಾಗಿ ಜಾನಪದವನ್ನು ಅಧ್ಯಯನ ಮಾಡುವುದಕ್ಕೆ ಆರಂಭಿಸಿದರು. ಜೀ ಶಂ. ಪರಮಶಿವಯ್ಯ ಅವರು ಜಾನಪದ ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿದರು. ಖಂಡಕಾವ್ಯಗಳನ್ನು ಸಂಗ್ರಹಿಸಿದರು. ಕಥನ ಗೀತೆಗಳು,

ದಕ್ಷಿಣ ಕರ್ನಾಟಕದ ವಿವಿಧ ಜಾನಪದ ಗೀತೆಗಳ ಸಂಗ್ರಹಣೆ ಮಾಡಿದರು, ಕ್ಯಾತನಹಳ್ಳಿ ರಾಮಣ್ಣನವರು ಲಾವಣಿಗಳನ್ನು ಚಕ್ಕರೆ ಶಿವಶಂಕರ್ ಮೈಲಾರಲಿಂಗನ ಕಾವ್ಯ, ಪಿ.ಕೆ.ರಾಜಶೇಖರ್ ಕೇಶವನ್‌ಪ್ರಸಾದ್, ಹಿ.ಚಿ ಬೋರಲಿಂಗಯ್ಯ ಅವರು ಮಲೆಮಹಾದೇಶ್ವರ ಕಾವ್ಯ, ಮಂಟೇಸ್ವಾಮಿ ಕಾವ್ಯ, ಸೋಲಿಗರು ಮತ್ತು ನಿಲಗಾರರ ಸಮುದಾಯದ ಕಾವ್ಯಗಳನ್ನು ಸಂಗ್ರಹಿಸಿದರು. ಹೀಗೆ ಜಾನಪದ ಕಾವ್ಯಗಳ ಸಂಪಾದನೆಯ ಕಾರ್ಯ ನಡೆಯುತ್ತಾ ಸಾಗಿದೆ.

ಅಧ್ಯಯನದ ಉದ್ದೇಶ ಮತ್ತು ಮಹತ್ವ

ಜಾನಪದಕ್ಕೆ ನಿರ್ದಿಷ್ಟವಾದ ಕಾಲ ಮತ್ತು ಭೌತಿಕ ಚೌಕಟ್ಟನ್ನು ಗುರುತಿಸುವುದು ಕಷ್ಟ. ಮೊದಲು ಸಂಪಾದಕ ಸಾಹಿತ್ಯಕ್ಕೆ ವಿರಾಮ ಕೊಟ್ಟು ಅದನ್ನು ವಿಶ್ಲೇಷಣೆಯನ್ನು ಮಾಡಿದರೆ ನವೋದಯ ಪೂರ್ವದಲ್ಲಿ ಕೂಡ ಲಿಖಿತ ಸಾಹಿತ್ಯದ ಆಧಾರವಾಗಿಟ್ಟುಕೊಂಡೆ ಸಾಹಿತ್ಯವನ್ನು ಅಧ್ಯಯನ ಮಾಡಿದ್ದಾರೆ ಆದರೆ ಸಾಹಿತ್ಯಕ್ಕೆ ಜಾನಪದವೇ ಮೂಲ ಬೇರು. ಸಾಹಿತ್ಯ ಪ್ರಕಾರದಲ್ಲಿ ಸಣ್ಣಕಥೆ, ಕಾವ್ಯ ಇರುವಂತೆಯೇ ಜಾನಪದದಲ್ಲಿಯೂ ಇದೇ ರೀತಿಯ ಪ್ರಕಾರಗಳಿರುವುದನ್ನು ಗಮನಿಸಬಹುದು. ಜಾನಪದದಿಂದಲೇ ಸಾಹಿತ್ಯದ ಎಲ್ಲಾ ಪ್ರಕಾರಗಳಿಗೆ ಪ್ರೇರಣೆಯಾಗಿರುವುದು.

ಜಾನಪದ ಕಾವ್ಯಗಳ ಸಂಪಾದನೆಯಲ್ಲಿ ಕಾವ್ಯ ಮತ್ತು ಕಾವ್ಯದ ಸಂಪಾದನೆ ಆಯ್ಕೆ ಉದ್ದೇಶಗಳು ಈ ಕೆಳಗಿನಂತಿವೆ.

- ಜಾನಪದ ಸಾಹಿತ್ಯದಲ್ಲಿ ವಿವಿಧ ರೀತಿಯ ಆಚರಣೆಗಳು, ಸಂಪ್ರದಾಯಗಳನ್ನು ಗಮನಿಸಬಹುದು. ಆದರೆ ಈ ಎಲ್ಲಾ ಅಂಶಗಳು ಜಾನಪದ ಪ್ರಕಾರದಲ್ಲಿ ಮುಖ್ಯವಾಗಿದ್ದರೂ, ಜಾನಪದ ಕ್ಷೇತ್ರದಲ್ಲಿ ಕಾವ್ಯ ಪ್ರಕಾರಗಳಿಗೆ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ. ಆದ್ದರಿಂದ ಕಾವ್ಯಗಳ ಸಂಪಾದನೆಯ ಮಹತ್ವವಾಗಿರುವುದರಿಂದ ಅಧ್ಯಯನ ಮಾಡಲಾಗುತ್ತಿದೆ.
- ಜಾನಪದ ಕಾವ್ಯಗಳ ಸಂಪಾದನೆ ಹಿಂದಿನ ತಾತ್ವಿಕತೆ ಕುರಿತು ಅಧ್ಯಯನ ಮಾಡಿರುವವರು ತುಂಬಾ ಕಡಿಮೆ. ಆದ್ದರಿಂದ ಈ ಅಧ್ಯಯನವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ
- ನಮ್ಮ ಲಿಖಿತ ಸಾಹಿತ್ಯ ಪರಂಪರೆಗೆ ಮೂಲ ಜಾನಪದ ಸಾಹಿತ್ಯ. ಆದ್ದರಿಂದ ಹೆಚ್ಚಿನ ಆದ್ಯತೆಯನ್ನು ಕಾವ್ಯದ ಸಂಪಾದನೆ ಕುರಿತ ಅಧ್ಯಯನಕ್ಕೆ ನೀಡಲಾಗಿದೆ.
- ಜಾನಪದ ಕಾವ್ಯದ ಸೃಷ್ಟಿಗೆ ಅನೇಕ ಕಾರಣಗಳಿವೆ. ಅದು ಸಮುದಾಯದ ಪ್ರಶ್ನೆಗಳು ಇರಬಹುದು, ಸಂಸ್ಕೃತಿಯ ಪ್ರಶ್ನೆಗಳು ಇರಬಹುದು. ಅವನತಿಯ ಹಂತದಲ್ಲಿರುವ ಒಂದು ಸಮುದಾಯದ ಒಬ್ಬ ಸಾಂಸ್ಕೃತಿಕ ನಾಯಕನನ್ನು ಇಟ್ಟುಕೊಂಡು ಅವನ ಸುತ್ತ ಕಥೆಯನ್ನು ಕಟ್ಟಿ ಕಾವ್ಯವನ್ನು ರಚನೆ ಮಾಡುವ ಸಾಧ್ಯತೆ ಇರುತ್ತದೆ. ಇದು ಅನೇಕ ಸಾಂಸ್ಕೃತಿಕ

ಚಿಕ್ಕಟ್ಟುಗಳನ್ನು ಒಳಗೊಂಡಿರುತ್ತದೆ. ಆದ್ದರಿಂದ ಹೀಗೆ ಸೃಷ್ಟಿಯಾದ ಸಾಹಿತ್ಯ ಕುರಿತು ಸಂಪಾದನೆ ಮಾಡಲು ಕಾರಣಗಳು ಇರಬಹುದು. ಇದರ ಹಿಂದಿನ ತಾತ್ವಿಕತೆಯನ್ನು ಗುರುತಿಸುವುದಕ್ಕಾಗಿ, ಈ ಮೂಲಕ ಕನ್ನಡ ಸಾಹಿತ್ಯದ ದಿಕ್ಕು ದೆಸೆಗಳನ್ನು ಗುರುತಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

- ನವೋದಯ ಕಾಲಘಟ್ಟದಲ್ಲಿ ಜಾನಪದವನ್ನೂ ಕೂಡ ಸಾಹಿತ್ಯ ಎಂದು ಪರಿಗಣಿಸಿ ಆ ಮೂಲಕ ಜಾನಪದ ಸಾಹಿತ್ಯವನ್ನು ಅಧ್ಯಯನ ಶಿಸ್ತಿಗೆ ರೂಪಿಸಲಾಯಿತು.

ಅಧ್ಯಯನದ ವಿಧಾನ

ಯಾವುದೇ ಅಧ್ಯಯನವನ್ನು ಕೈಗೊಂಡಾಗ ಅದಕ್ಕೆ ವಿಧಾನ ಮುಖ್ಯವಾಗುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಜಾನಪದ ಕಾವ್ಯಗಳ ಸಂಪಾದನೆಯ ಹಿಂದಿನ ತಾತ್ವಿಕತೆಯನ್ನು ಎರಡು ವಿಧಾನಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ. ಯಾವುದೆ ಜಾನಪದ ಕಾವ್ಯ ರಚನೆಯಾಗುವಾಗ ಅದರ ಹಿಂದಿನ ಒತ್ತಡಗಳು ಅನಿವಾರ್ಯತೆಗಳು ಯಾವುವು ಎಂಬುದು ಒಂದಾದರೆ, ಎರಡನೆಯದಾಗಿ ಅವುಗಳ ಸಂಪಾದನೆಗಿರುವ ತಾತ್ವಿಕತೆಯ ಸ್ವರೂಪ ಯಾವುದು ಎಂಬುದನ್ನು ಗುರುತಿಸುವುದು ಈ ವಿಧಾನವನ್ನು ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

೧. ಪಠ್ಯದ ಹುಟ್ಟುವಿಕೆಯ ಹಿಂದಿನ ತಾತ್ವಿಕತೆ ಏನು ಎಂಬುದನ್ನು ತಿಳಿಯುವುದು.

೨. ಕಾವ್ಯದ ತಾತ್ವಿಕತೆ ಮತ್ತು ಸಂಪಾದನೆಯ ಹಿಂದಿನ ತಾತ್ವಿಕತೆ ಅರಿಯುವುದು.

೩. ಜಾನಪದ ಕಾವ್ಯಗಳ ಸಂಪಾದನೆಯ ಹಿಂದಿನ ತಾತ್ವಿಕತೆ ಏನು? ಅದು ಸಂಪಾದಕರ ಹಾಗೂ ಕಾವ್ಯದ ಹಿಂದಿನ ದೃಷ್ಟಿಕೋನ ಹೇಗೆ? ಎಂಬುದನ್ನು ತಿಳಿಯುವುದು.

೪. ಸಂಪಾದನೆಗಳು ಕಾಲಘಟ್ಟದಿಂದ ಕಾಲಘಟ್ಟಕ್ಕೆ ಯಾವ ವಿಧಾನದಲ್ಲಿ ಹೇಗೆ ಬದಲಾವಣೆ ಗಳಾದವು, ಹೇಗೆ ಬದಲಾವಣೆಗಳಾದವು ಮತ್ತು ಅವುಗಳ ಹಿಂದಿನ ತಾತ್ವಿಕತೆಯನು ಗುರುತಿಸುವುದು ಅಧ್ಯಯನದ ವಿಧಾನವಾಗಿದೆ.

೫. ಜಾನಪದ ಅಧ್ಯಯನ ಇತ್ತೀಚಿನ ಒಲವುಗಳನ್ನು ಗುರುತಿಸುವುದು .

೬. ಮೌಖಿಕ ಕಾವ್ಯ ಪಠ್ಯವಾಗುವಂತಹ ಕ್ರಮ ಹೇಗೆ ಎಂದು ತಿಳಿಯುದು.

ಅಧ್ಯಯನದ ವ್ಯಾಪ್ತಿ

ಜಾನಪದ ಕಾವ್ಯ ಸಂಪಾದನೆಯ ಹಿಂದಿನ ತಾತ್ವಿಕತೆ ವಿಷಯಕ್ಕೆ ಸಂಬಂಧಪಟ್ಟಂತೆ ಈ ಹಿಂದೆ ಇದಕ್ಕೆ ಪೂರಕವಾಗಿ ಅಧ್ಯಯನ ಮಾಡಿರುವ ಅಂದರೆ ಜಾನಪದ ಕಾವ್ಯಗಳ ಸಂಪಾದನೆಯು

ಅಧ್ಯಾಯ ಎರಡು

ಈವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ಎರಡು

ಈವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಮನುಷ್ಯನು ಸಮಾಜ ಸಂಸ್ಕೃತಿಯನ್ನು, ಸಮುದಾಯದ ಸಂಬಂಧಗಳನ್ನು ಅರ್ಥ ಮಾಡಿಕೊಳ್ಳಲು ಮಾನವೀಯತೆಯ ವಿವಿಧ ಅಭ್ಯಾಸಗಳ ಮೂಲಕ ಮತ್ತು ಬೇರೆ ಬೇರೆ ವಿಧಾನಗಳನ್ನು ಶೋಧಿಸಿದ್ದಾನೆ. ಈ ರೀತಿಯ ಅನೇಕ ಕ್ರಮಗಳನ್ನು ತನ್ನ ಜೀವನದ ನಾನಾ ಕಡೆಯಿಂದ ಮತ್ತೊಂದು ಕಡೆಗೆ ತನ್ನ ಜೀವನ ಕೇಂದ್ರವನ್ನು ಅರಸಿಕೊಂಡು ಅನುಕೂಲವಾಗುವಂತಹ ಪರಿಸರದಲ್ಲಿ ಜೀವಿಸಲು ಪ್ರಾರಂಭಿಸಿದನು. ಹೀಗೆ ನೆಲೆ ನಿಂತ ಸಮುದಾಯಗಳು ತನ್ನದೆಯಾದ ಸಂಸ್ಕೃತಿಯನ್ನು ರೂಪಿಸಿಕೊಂಡು ವಿವಿಧ ಸಂಸ್ಕೃತಿಯ ಶಾಖೆಗಳಾಗಿ ರೂಪಿತವಾಗುತ್ತಾ ಬಂದವು. ಯಾವುದೇ ಸಂಸ್ಕೃತಿಯು ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿರುತ್ತದೆ. ಇದು ಆಯಾಯ ಪ್ರದೇಶದ ದೇಶೀಯ ಪರಿಕರಗಳ ಮೂಲಕ ತನ್ನ ಅರ್ಥದಿಂದ ಮುಂಚಲಿಸಿ ತಾನು ನೆಲೆಸಿದ ಪರಿಸರದ ವಿಶಿಷ್ಟ್ಯತೆಗಳನ್ನು ಮೈಗೂಡಿಸಿಕೊಂಡು ಕಥೆ, ಗಾದೆ, ಒಗಟು, ಕಾವ್ಯ, ಕಥನಕಾವ್ಯ, ಪುರಾಣ, ಐತಿಹ್ಯ, ವಿವಿಧ ರೀತಿಯ ಅಭಿವ್ಯಕ್ತಿ ವಿಶಿಷ್ಟತೆಯನ್ನು ಪಡೆದುಕೊಳ್ಳುತ್ತದೆ.

ಮೊಟ್ಟ ಮೊದಲು ಜಾನಪದ ಅಧ್ಯಯನ ಕಾರ್ಯ ನಡೆದದ್ದು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ. ಜಾನಪದವು ಜನರ ನಡುವೆಯೇ ಬೆಳೆದುಕೊಂಡು ಬಂದು ಜೀವನದ ಉದ್ದಕ್ಕೂ ಮನುಷ್ಯನ ಜೊತೆಯಲ್ಲಿಯೇ ಇರುವಂತಹ ಹಿರಿಯ ಸಂಸ್ಕೃತಿಯೇ ಜಾನಪದ. ಆರಂಭದ ಅವಧಿಯಲ್ಲಿ ಜಾನಪದವನ್ನು ಗುರುತಿಸುವಂತಹ ಕೆಲಸವನ್ನು ಮಾಡಿದವರು ಪಾಶ್ಚಿಮಾತ್ಯ ರಾಷ್ಟ್ರದ ವಿದ್ವಾಂಸರು ಈ ಸಂಸ್ಕೃತಿಯನ್ನು ಮೊದಲ ಬಾರಿಗೆ ಜಾನಪದ ಎಂದು ಕರೆದವನು ಡಬ್ಲ್ಯೂ ಜಿ. ಥಾಮ್ಸ್.

ಮನುಷ್ಯ ಜೀವಿಯ ಉಗಮದ ನಂತರ ಭೂಮಿಯ ಮೇಲೆ ನೆಲೆಯನ್ನು ಕಂಡುಕೊಂಡು ಹಂತ ಹಂತವಾಗಿ ತನ್ನ ಜೀವನವನ್ನು ರೂಪಿಸಿಕೊಳ್ಳುತ್ತ ತನ್ನ ಶೈಲಿಯನ್ನು, ಬದಲಾವಣೆಯನ್ನು ಮಾಡಿಕೊಳ್ಳುತ್ತಾ ಬಂದನು. ಮೊದಲು ಏಕಾಂಗಿಯಾಗಿದ್ದವನು ನಂತರ ಸಮುದಾಯ ಕಟ್ಟಿಕೊಂಡು

ಮಾನವೀಯ ಸಂಬಂಧವನ್ನು ಅರಿಯುತ್ತ ಈ ಸಂಬಂಧಗಳಿಗೆ ಭಾವನೆಯನ್ನು ತುಂಬುತ್ತ ಸಂಘ ಜೀವಿಯಾಗಿ ಸಮುದಾಯದ ಜೊತೆಯಲ್ಲಿಯೇ ಬೆಳೆಯುತ್ತಾ ಬಂದನು. ಪ್ರಕೃತಿಯ ವಿವಿಧ ವಿಸ್ಮಯಗಳನ್ನು ಕಂಡು ಅದನ್ನು ನಿಯಂತ್ರಿಸಲಾಗದೆ ಅವುಗಳನ್ನು ಪೂಜಿಸತೊಡಗಿದ. ಇದರಿಂದ ದೇವರು 'ದೆವ್ವ' ಎಂಬ ಕಲ್ಪನೆಯು ರೂಢಿಯಾಯಿತು. ನಂತರ ದಿನಗಳಲ್ಲಿ ಆಚರಣೆಯಾಗಿ ಮುಂದುವರಿಯುತ್ತಾ ಮಾನವರ ಜೀವನದಲ್ಲಿ ಅನೇಕ ಬದಲಾವಣೆಗಳಾದವು. ಮಾನವರ ಬೇಟೆ, ಪಶುಸಂಗೋಪನೆ, ಕೃಷಿ ಕಾರ್ಯಗಳಲ್ಲಿ ತೊಡಗಿ ಜೀವನ ನಡೆಸ ತೊಡಗಿದರು. ಈ ಮೂಲದಿಂದಲೇ ಜಾನಪದ ಹುಟ್ಟುವಿಕೆಯು ಆರಂಭವಾಯಿತು ಎಂಬುದಾಗಿ ತಿಳಿಯಬಹುದು. ಜನರು ತಮ್ಮ ದಿನನಿತ್ಯದ ಅವಧಿಯಲ್ಲಿ ಕೆಲಸ ಕಾರ್ಯಗಳಲ್ಲಿ ತೊಡಗಿದಾಗ ತಮ್ಮ ಬೇಸರಿಕೆಯನ್ನು ಕಳೆಯುವುದಕ್ಕಾಗಿ ಗೀತೆ, ಹಾಗೂ ಪದಗಳನ್ನು ಹಾಡುತ್ತಿದ್ದರು. ಇದು ದಿನದಿಂದ ದಿನಕ್ಕೆ, ಪರಂಪರೆಯಿಂದ ಪರಂಪರೆಗೆ ಹರಿಯುತ್ತ ಬಂದಿತು. ನಂತರದ ದಿನಗಳಲ್ಲಿ ಬೆಳೆಯುತ್ತ ಸಾವಿರಾರು ಹಾಡುಗಳು ಜನರ ಬಾಯಿಯಲ್ಲಿ ಜೀವಂತವಾಗಿ ನಲಿಯತೊಡಗಿದವು. ಕೆಲವು ವಿದ್ವಾಂಸರು ಇವುಗಳನ್ನು ಸಂಗ್ರಹಿಸಿದರು. ಈ ಸಂಗ್ರಹದಿಂದ ಅನೇಕ ವಿದ್ವಾಂಸರು ಸ್ವಯಂ ಪ್ರೇರಣೆಯಿಂದ ಉತ್ತೇಜನಗೊಂಡರು. ಆದ್ದರಿಂದ ಜಾನಪದ ಅಧ್ಯಯನದಲ್ಲಿ ತೊಡಗಿದರು.

ಕರ್ನಾಟಕದಲ್ಲಿ ಜಾನಪದ ಅಧ್ಯಯನ ೧೯೨೦ರ ಅವಧಿಯಲ್ಲಿ ಆರಂಭವಾದರೂ ಅದುವರೆಗೆ ಜಾನಪದ ಎಂಬ ಪರಿಭಾಷೆ ಕರ್ನಾಟಕದಲ್ಲಿ ಚಾಲನೆಯಲ್ಲಿರಲಿಲ್ಲ. ಹೊಸಗನ್ನಡ ಸಾಹಿತ್ಯ ೧೯ನೇ ಶತಮಾನದಲ್ಲಿ ತನ್ನ ಹುಟ್ಟುವಿಕೆಯನ್ನು ಪಡೆಯುವ ಸಮಯದಲ್ಲಿ ಜಾನಪದವು ತನ್ನದೇ ಆದ ಅಸ್ತಿತ್ವವನ್ನು ಪಡೆಯತೊಡಗಿತು. ಕನ್ನಡ ಸಾಹಿತ್ಯಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ ಈ ಇತಿಹಾಸಕ್ಕೆ ಶಾಸನಗಳು, ತಾಮ್ರದ ಬರಹಗಳು, ಓಲೆಗರಿಗಳು, ಗ್ರಂಥಗಳಿಂದ ಆಧಾರಗಳಾಗಿರುವುದನ್ನು ಗಮನಿಸಬಹುದು. ಕನ್ನಡ ಸಾಹಿತ್ಯವು ಶತಮಾನಗಳಿಂದ ತನ್ನ ಇರುವಿಕೆಯನ್ನು ಬಳಸಿಕೊಂಡಿರುವುದರಿಂದ ಹಂತ ಹಂತವಾಗಿ ಬದಲಾವಣೆಯನ್ನು ಪಡೆಯುತ್ತ ಬಂದಿದ್ದೂ, ಒಂದು ಕಾಲಘಟ್ಟದಲ್ಲಿ ರಾಜಾಶ್ರಯ ಮತ್ತು ವಿದ್ವಾಂಸರಿಗೆ ಮಾತ್ರ ಸಾಹಿತ್ಯ ಸೀಮೀತವಾಗಿತ್ತು. ಆದರೆ ಜಾನಪದವು ಯಾವುದೇ ರಾಜಾಶ್ರಯದಿಂದಾಗಲಿ, ಪಂಡಿತರಿಂದಾಗಲಿ ಹುಟ್ಟಿರುವಂತದ್ದಲ್ಲ. ಇಂತಹ ಕಾಲದಲ್ಲಿ ಜಾನಪದವು ತನ್ನದೆಯಾದ ನಿಲುವನ್ನು ಪಡೆದುಕೊಂಡಿತ್ತು ಎಂಬುದಕ್ಕೆ ನೃಪತುಂಗನು ಕವಿರಾಜಮಾರ್ಗದಲ್ಲಿ 'ಕುರಿತೋದಯಂ ಕಾವ್ಯ ಪ್ರಯೋಗ ಪರಿಣತಮತಿಗಳ್' ಎಂದು ಸಾವಿರಾರು ವರ್ಷಗಳ ಹಿಂದೆಯೇ ಹೇಳಿರುವುದನ್ನು ಗಮನಿಸಬಹುದು. ಇದರಿಂದ ಜನಪದಕ್ಕೆ ಸುದೀರ್ಘ ಇತಿಹಾಸವಿರುವುದನ್ನು ಗುರುತಿಸಬಹುದು. ವಚನ ಸಾಹಿತ್ಯದಲ್ಲಿ, ತ್ರಿಪದಿಯಲ್ಲಿ ಹಾಗೂ ಭಾಷೆಯ ವಿನ್ಯಾಸದಲ್ಲಿ ಜಾನಪದೀಯ ಶೈಲಿಯನ್ನು ಗಮನಿಸಬಹುದು. ಈ ರೀತಿಯು ಜಾನಪದದ ಮೂಲ ತಾಯಿಬೇರನ್ನು ನಮ್ಮ ಪೂರ್ವದ ಸಾಹಿತ್ಯ ಹುಟ್ಟಿನಿಂದಲೂ

ಗುರುತಿಸಲಾಗಿದೆ. ಇದರಿಂದ ನವೋದಯ ಕಾಲಘಟ್ಟದ ಆರಂಭದಲ್ಲಿ ಜಾನಪದವನ್ನು ಒಂದು ಸಾಹಿತ್ಯ ಪ್ರಕಾರವೆಂದು ಕರೆಯಲಾಯಿತು.

ನವೋದಯದ ಆರಂಭದಲ್ಲಿ ಬಿ.ಎಂ.ಶ್ರೀಕಂಠಯ್ಯನವರು ಜಾನಪದವನ್ನು ಕುರಿತು ಹಲವಾರು ವಿಚಾರವನ್ನು ಕುರಿತಂತೆ ಜನಪದದ ಸಂಪಾದನೆಗೆ ಹೆಚ್ಚಿನ ಒತ್ತನ್ನು ನೀಡಿದರು. "ಜನವಾಣಿ ಬೇರು: ಕವಿವಾಣಿ ಹೂವು"[೧] ಎನ್ನುವ ಲೇಖನವನ್ನು ಬರೆದರು. ಈ ಲೇಖನದಲ್ಲಿ ನಮ್ಮ ಮೂಲಸಂಸ್ಕೃತಿಯನ್ನು ಕುರಿತಂತೆ ಜನರ ಜೀವನದ ಸಂಸ್ಕೃತಿಯ ಬಗ್ಗೆ ವಿವರವಗಳಿವೆ. ನಮ್ಮ ಕವಿ ಪರಂಪರೆಯು ಜಾನಪದ ಎಂಬ ವಿಶಾಲವಾದ ಮರವೊಂದರ ಒಂದು ಹೂವು ಎಂಬುದಾಗಿ ಜನಪದ ಸಂಸ್ಕೃತಿಯ ಕುರಿತು ತಮ್ಮ ಲೇಖನದಲ್ಲಿ ದಾಖಲಿಸಿದ್ದಾರೆ.

ಕರ್ನಾಟಕದಲ್ಲಿ ಜಾನಪದ ಅಧ್ಯಯನ ಆರಂಭವಾದದ್ದು ಇತ್ತೀಚೆಗೆ. ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ಜಾನಪದ ಅಧ್ಯಯನದ ಆಸಕ್ತಿಯು ಮೂಡಿದ್ದು ನವೋದಯ ಸಾಹಿತ್ಯ ಚಳವಳಿಯ ಜೊತೆಯಲ್ಲಿಯೇ. ಕನ್ನಡ ಸಾಹಿತ್ಯದಲ್ಲಾದ ಬದಲಾವಣೆ ಮತ್ತು ಪಾಶ್ಚಾತ್ಯ ಅಧ್ಯಯನಕಾರರ ಜೊತೆಯಲ್ಲಿ ಇದಕ್ಕಿಂತ ಮುಂಚಿತವಾಗಿ ಮಿಷನರಿಗಳು ಭಾರತಕ್ಕೆ ಬಂದ ನಂತರದಲ್ಲಿಯೇ ಅಧ್ಯಯನಗಳು ಚುರುಕುಗೊಂಡವು ಎಂಬುದಾಗಿ ಹೇಳಬಹುದು. ಕಳೆದ ಶತಮಾನದ ಪ್ರಥಮ ಹಂತದಿಂದಲೂ ಅನೇಕ ಪಾಶ್ಚಾತ್ಯ ವಿದ್ವಾಂಸರು ಮಿಷನರಿಗಳು ಭಾರತಕ್ಕೆ ಬಂದು ಬೇರೆ ಬೇರೆ ಉದ್ದೇಶಗಳಿಗಾಗಿ ನಾನಾ ಬಗೆಯ ಸಂಶೋಧನಾ ಕಾರ್ಯ ದಲ್ಲಿ ತೊಡಗಿಕೊಂಡಂತೆ ಜಾನಪದ ಸಂಗ್ರಹದಲ್ಲಿಯೂ ತೊಡಗಿದರು. ೧೮೮೦ರ ಸುಮಾರಿನಲ್ಲೇ ಪಾಶ್ಚಾತ್ಯ ವಿದ್ವಾಂಸರು ಲಾವಣಿ ಸಂಗ್ರಹ ಕಾರ್ಯದಲ್ಲಿ ತೊಡಗಿದರು. ಈ ಕಾಲಾವಧಿಯಲ್ಲಿ ವಿವಿಧ ವಿದ್ವಾಂಸರು ಭಾರತಕ್ಕೆ ಬೇರೆಯೇ ಉದ್ದೇಶದಿಂದ ಬಂದಿದ್ದರು. ಇಲ್ಲಿನ ವಿಶಿಷ್ಟತೆ ಮತ್ತು ಅಗಾಧ ಪ್ರತಿಭೆಯನ್ನು ಕಂಡು ಮುಂದಿನ ತಲೆಮಾರಿಗೆ ಮುಟ್ಟುವಂತೆ ಇದನ್ನು ರಕ್ಷಣೆ ಮಾಡಬೇಕು ಎಂಬುದನ್ನು ಅರಿತ ವಿದ್ವಾಂಸರು ತಮ್ಮ ಕೆಲಸ ಕಾರ್ಯಗಳ ಬಿಡುವಿನ ವೇಳೆಯಲ್ಲಿ ಸಂಗ್ರಹಣೆಯ ಕಾರ್ಯದಲ್ಲಿ ತೊಡಗುತ್ತಿದ್ದರು. ಭಾರತೀಯರಿಗೆ ತಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಹೋಗುವ ತಾಂತ್ರಿಕ ವಿಧಾನಗಳು ತಿಳಿದಿರಲಿಲ್ಲ. ಇದನ್ನು ತಿಳಿದ ಪಾಶ್ಚಾತ್ಯ ವಿದ್ವಾಂಸರು ಸಂಗ್ರಹಣೆಯಲ್ಲಿ ತೊಡಗಿದರು. ಅಂತಹ ವಿದ್ವಾಂಸರೆಂದರೆ ಜಾನ್ ರೇಡನ್, ಅಬ್ಬೆ ದುಬಾಯ್ಸ್, ಚಾರ್ಲ್ಸ್, ಗೋವರ್, ರೆವರೆಂಡ್ ಕಿಟಲ್, ಮೇರಿಫ್ರೇರೆ, ಮೆಕೆಂಜಿ, ಫ್ಲೀಟ್ ಮುಂತಾದ ವಿದ್ವಾಂಸರು ಜಾನಪದ ಸಂಗ್ರಹಣೆ ಕಾರ್ಯದಲ್ಲಿ ತೊಡಗಿದರು. ಗ್ರೋವರ್ ದಕ್ಷಿಣ ಭಾರತದ ಜಾನಪದ ಗೀತೆಗಳನ್ನು ಸಂಗ್ರಹಿಸಿದರು. ಫ್ಲೀಟ್ ಲಾವಣಿಯ ಸಂಪಾದನೆಯ ಕಾರ್ಯದಲ್ಲಿ ತೊಡಗಿದ್ದರು. ಇದಕ್ಕಿಂತ ಮುಂಚಿತವಾಗಿ ಮೇರಿಫರ್ ೧೮೬೮ರಲ್ಲಿ Old

Dacan Days ಎಂಬ ಕೃತಿಯನ್ನು ಸಂಪಾದಿಸಿ ಇಪ್ಪತ್ತೈದು ಕಥೆಗಳನ್ನು ಸಂಗ್ರಹಿಸಿನು. ಕಿಟಲ್ ಕನ್ನಡ ಇಂಗ್ಲಿಷ್ ನಿಘಂಟನ್ನು ಸಂಗ್ರಹಿಸಿದನು. ಇವರ ಜೊತೆಯಲ್ಲಿ ಮತ್ತೊಬ್ಬ ಪ್ರಮುಖ ವಿದ್ವಾಂಸರಾದ ಅಬ್ಬೆ ದುಬಾಯ್ಸ್ ಹಿಂದು ಮ್ಯಾನರ್ಸ್ ಕಸ್ಟಂಸ್ಸ್ ಆ್ಯಂಡ್ ಸೇರಮಾನಿಸ್ಸ್' ಎಂಬಂತಹ ಕೃತಿಗಳನ್ನು ಸಂಪಾದಿಸಿದರು.

ಭಾರತದಲ್ಲಿ ಇಂತದೊಂದು ಸಂಸ್ಕೃತಿ ಕಂಡು ಜಾನಪದ ಎಂಬುವಂತಹ ಭಾಷೆಯೇ ಭಾರತೀಯರಿಗೆ ತಿಳಿದಿರಲಿಲ್ಲ. ೧೮೪೬ರಲ್ಲಿ ಡಬ್ಲ್ಯು.ಜಿ.ಥಾಮ್ಸ್ Folklore ಎಂಬ ಶಬ್ದವನ್ನು ಪ್ರಯೋಗಿಸಿದ ಮೇಲೆ ಭಾರತದಲ್ಲಿಯೂ ಆ ಶಬ್ದ ಬಳಕೆಗೆ ಬಂದಿತು. ಅನಂತರ Indian Antiquary ಮೊದಲಾದ ಪತ್ರಿಕೆಯಲ್ಲಿ ಜಾನಪದಕ್ಕೆ ಸಂಬಂಧಪಟ್ಟಂತೆ ವಿಚಾರಗಳು ಬರಲು ಆರಂಭಿಸಿದವು. ಹತ್ತೊಂಬತ್ತನೆಯ ಶತಮಾನದ ಜಾನಪದಕ್ಕೆ ಸಂಬಂಧಪಟ್ಟ ವಿಷಯವನ್ನು (ಮಾಹಿತಿಯನ್ನು) ಕಿಟೆಲ್, ಮೆಕೆಂಜಿ, ನರಸಿಂಹ ಅಯ್ಯಂಗಾರ್ ಮುಂತಾದವರು 'ಇಂಡಿಯನ್ ಆಂಟಿಕ್ವೆರಿ' ಪತ್ರಿಕೆಗಳಲ್ಲಿ ಮೊದಲಬಾರಿಗೆ ಬಿಡಿ ಬಿಡಿ ಮಾಹಿತಿಯನ್ನು ಮತ್ತು ಲೇಖನಗಳನ್ನು ಪ್ರಕಟಣೆ ಮಾಡಿದರು. ಅವರು ವಿವಿಧ ಪ್ರಕಾರಗಳನ್ನು ಸಹ ಪರಿಚಯಿಸಿದರು.

ಕರ್ನಾಟಕದಲ್ಲಿ "Folkloreಗೆ ಸಂವಾದಿಯಾಗಿ ಕನ್ನಡದಲ್ಲಿ 'ಜಾನಪದ ಎಂಬ ಶಬ್ದವನ್ನು ಬಳಸಲಾಗುತ್ತಿದೆ. ೧೯೬೬ರಲ್ಲಿ ನಡೆದ ವಿಚಾರ ಗೋಷ್ಠಿಯೊಂದರಲ್ಲಿ ಡಾ.ಹಾ.ಮಾ. ನಾಯಕರು ಜನಪದ ಸಾಹಿತ್ಯ ಮತ್ತು ಅದರ ಸ್ವರೂಪ ಎಂಬ ತಮ್ಮ ಪ್ರಬಂಧದಲ್ಲಿ ಈ ಬಗ್ಗೆ ಚರ್ಚಿಸಿ ಮೊದಲ ಬಾರಿಗೆ ಈ ಶಬ್ದವನ್ನು ಬಳಕೆಗೆ ತಂದರು. ಆ ಪ್ರಬಂಧದಲ್ಲಿ ಜಾನಪದವನ್ನು Folklore ಸಮಾನ ಪದವಾಗಿ ಕನ್ನಡದಲ್ಲಿ ಪ್ರಯೋಗಿಸುವ ಮುನ್ನ ಡಾ.ಹಾ.ಮಾ. ನಾಯಕರು ಜನಪದ, ಜಾನಪದ ಎಂಬ ಪದಗಳಿಗೆ ಸ್ಪಷ್ಟ ಅರ್ಥಗಳನ್ನು ಚಲಾವಣೆಗೆ ತಂದು ಈಗ ಎಲ್ಲೆಡೆಯೂ ಬಳಕೆಯಾಗಿದೆ."[೨] ಕರ್ನಾಟಕದಲ್ಲಿ ಜಾನಪದದ ಬಗೆಗೆ ಹಲವಾರು ವೈಜ್ಞಾನಿಕ ದೃಷ್ಟಿಕೋನಗಳು ಪ್ರಾರಂಭವಾದವು. ಜನಪದದಲ್ಲಿ ಗೀತೆ, ಲಾವಣಿಗಳಿಗೆ ಸೀಮಿತವಾಗಿದ್ದಂತಹ ಸಂಪಾದನೆಯು ಗೀತೆ, ಕಥನಗೀತೆ, ಹಾಡು, ಲೋಕಗೀತೆ, ವಿವಿಧ ಪ್ರಕಾರಗಳಲ್ಲಿ ಜನಪದವನ್ನು ಕುರಿತಂತೆ ಅಧ್ಯಯನ ಆರಂಭವಾಯಿತು.

"Folklore ಶಬ್ದ ಮುಂದೆ ವಿಲಿಯಂ ಸ್ಟರ್ನ್ ಬರ್ಗ್ ಗ್ರಂಥವೊಂದರಲ್ಲಿ ಪ್ರಕಟಗೊಂಡಿತು. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಇಂಗ್ಲೆಂಡಿನಲ್ಲಿ ದೊಡ್ಡ ಜಾನಪದ ಚಳವಳಿಯೇ ಆರಂಭವಾಗಿ Folklore Society ೧೮೭೮ರಲ್ಲಿ ಸ್ಥಾಪಿತವಾಯಿತು. ವಿದ್ವಾಂಸರ ಒಂದು ದೊಡ್ಡ ತಂಡವೇ ಈ ಕ್ಷೇತ್ರವನ್ನು ಪ್ರವೇಶಿಸಿ Folklore ವ್ಯಾಪ್ತಿಯನ್ನು ವಿಸ್ತರಿಸಿ ಅದೊಂದು ದೊಡ್ಡ ಅಧ್ಯಯನ ವಿಷಯ ಎಂಬುದನ್ನು ಪ್ರಸ್ತಾಪಿಸಿತು. ಈ ಶಬ್ದ ಸ್ಥಿರವಾಗಿ ಬೇರೂರಿ

ಕ್ರಮೇಣ ಇಂಗ್ಲಿಷ್ ಭಾಷೆಯ ಜೊತೆಯಲ್ಲಿ ವಿಶ್ವವನ್ನೇ ವ್ಯಾಪಿಸಿತು"೩ ಜನಪದ ಕುರಿತಂತೆ ಹಲವಾರು ಅಭಿಪ್ರಾಯಗಳು ಮೂಡತೊಡಗಿದವು. ಜಾನಪದ ಎಂದರೇನು? ಇದನ್ನು ವಿದ್ವಾಂಸರು ವಿವಿಧ ಭಾಗವಾಗಿ ವಿಂಗಡಿಸಲು ಕಾರಣವೇನು? ಮನುಷ್ಯ ಸಂಸ್ಕೃತಿಯಿಂದ ಜಾನಪದವು ವಿವಿಧ ನೆಲೆಯಲ್ಲಿ ನಡೆಯಲು ಹೇಗೆ ಸಾಧ್ಯವಾಯಿತು. ಜನಪದಕ್ಕೂ ಸಾಹಿತ್ಯಕ್ಕೂ ಯಾವ ರೀತಿಯ ಸಂಬಂಧಗಳು ಇವೆ ಎಂಬ ಪ್ರಶ್ನೆಗಳು ಉದ್ಭವಾಗಿ ವಿದ್ವಾಂಸರಿಗೆ ಅಧ್ಯಯನದ ಆಸಕ್ತಿಯು ಹೆಚ್ಚಾಯಿತು.

ಜಾನಪದವು ಮೌಖಿಕ ಪರಂಪರೆಯಿಂದ ಬಂದಿರುವಂತಹದ್ದು. ಮೌಖಿಕ ಸಂಪ್ರದಾಯದಲ್ಲಿ ಸಾಗಿ ಬಂದ ಈ ಯಾವುದೇ ಪ್ರಕಾರವಾಗಿರಲಿ ಗೀತೆ ಅದನ್ನು ಜನಪದ ಎಂಬುದಾಗಿಯೇ ಅರಿಯಬೇಕು. ಮೊದಲಿಗೆ ಜನಪದ ಎನ್ನುವಂತಹದು ಪ್ರೌಢ ಮೂಲದಿಂದ ಬಂದಿದ್ದಲ್ಲ, ಯಾರೊಬ್ಬರು ಲಿಖಿತ ರೂಪದಲ್ಲಿ ಬರೆದಿಟ್ಟಿದ್ದಲ್ಲ, ಕಲಿಕೆಯಿಂದ ಬಂದುದ್ದಲ್ಲ. ಇದು ಮೌಖಿಕ ಸಂಪ್ರದಾಯದ ಮೂಲಕ ತಲೆಮಾರಿನಿಂದ ತಲೆಮಾರಿಗೆ ಸಾಗಿ ಬಂದ ಸಂಸ್ಕೃತಿ ಎಂಬ ಅಭಿಪ್ರಾಯವಿತ್ತು. ನಮ್ಮ ಹಿರಿಯ ಪೂರ್ವಿಕರಿಂದ ಬಂದಿರುವಂತಹದ್ದು. ಇದರಲ್ಲಿ ಕತೆ, ಗೀತೆ, ಲಾವಣಿ, ಒಗಟುಗಳು, ಕಾವ್ಯ, ಕಥನಗೀತೆಗಳು ಜಾನಪದ ಎಂಬ ಸಾಗರದಲ್ಲಿ ಈ ಎಲ್ಲ ಅಂಶಗಳು ಒಳಗೊಂಡಿವೆ. ಆದರೆ ಜಾನಪದದಲ್ಲಿ ಇವುಗಳನ್ನು ಬಿಡಿ ಬಿಡಿಯಾಗಿ ಅಧ್ಯಯನ ಮಾಡಲು ಆರಂಬಿಸಲಾಗಿದೆ.

ಕನ್ನಡದಲ್ಲಿ ಜಾನಪದ ಸಂಪಾದನೆಗಳ ಕಾರ್ಯವು ಕಳೆದ ಶತಮಾನದಲ್ಲಿಯೇ ನಡೆಯಿತು. ಜಾನ್ ಲೇಡನ್ ೧೮೦೩ರಲ್ಲಿ ಶ್ರೀರಂಗಪಟ್ಟಣದ ಪತನದ ನಂತರ ಆ ಪ್ರದೇಶಕ್ಕೆ ಸಂಬಂಧಪಟ್ಟ ಪತನದ ಲಾವಣಿಯನ್ನು ಸಂಗ್ರಹಿಸಿ ಇದರ ಬಗ್ಗೆ ಮರುಶೋಧವನ್ನು ಮಾಡಿ ಸಂಗ್ರಹಣೆಯನ್ನು ಮಾಡುತ್ತಾರೆ. ಆದ್ದರಿಂದ ಮೊದಲ ಬಾರಿ ಸಂಗ್ರಹಣೆ ಮಾಡಿದ ಕೀರ್ತಿಯು ಇವರಿಗೆ ಸಲ್ಲುತ್ತದೆ. ಹತ್ತೊಂಬತ್ತನೆಯ ಶತಮಾನದಲ್ಲಿ ಮತ್ತೊಬ್ಬ ವಿದ್ವಾಂಸ ಚಾರ್ಲ್ಸ್ ಇ.ಗೋವರ್ ಇವರು ದಕ್ಷಿಣದ ಪ್ರಮುಖ ಭಾಷೆಗಳ ಗೀತೆಗಳನ್ನು ಸಂಗ್ರಹಿಸುತ್ತಾನೆ. ಇದನ್ನು ಕೊಡವ ಸಂಸ್ಕೃತಿಗೆ ಸಂಬಂಧಿಸಿದ ಗೀತೆಗಳು ಎಂದು ಇದು ಶುದ್ಧ ಜಾನಪದ ಮೂಲಕ್ಕೆ ಸಂಬಂಧ ಪಡುತ್ತದೆ ಎಂಬುದಾಗಿ ತಿಳಿಸುತ್ತಾನೆ. ನಂತರ ಜೆ.ಎಫ್.ಫ್ಲೀಟ್ ಅವರ ಕನ್ನಡ ಜಾನಪದ ಕ್ಷೇತ್ರದಲ್ಲಿ ಮಹತ್ವಪೂರ್ಣ ಹೆಸರಾಗಿ ಜಾನಪದ ಕ್ಷೇತ್ರದಲ್ಲಿ ಸೇರ್ಪಡೆಯಾಗುತ್ತದೆ. ಫ್ಲೀಟ್‌ರವರು ಉತ್ತರ ಕರ್ನಾಟಕದ ಎಂಟು ಲಾವಣಿಗಳನ್ನು ಸಂಗ್ರಹಣೆ ಮಾಡುತ್ತಾರೆ. ಈ ಎಂಟು ಲಾವಣಿಗಳಲ್ಲಿ ಐದು ಲಾವಣಿಗಳು ಮೊದಲ ಬಾರಿಗೆ ೧೮೮೫ರಿಂದ ೧೮೯೦ರ ಅವಧಿಯಲ್ಲಿ ಪ್ರಕಟಿಸುತ್ತಾರೆ. ಈ ಕಾಲಾವಧಿಯಲ್ಲಿ ಲಾವಣಿಗಳು ತುಂಬ ಮಹತ್ವವನ್ನು ಪಡೆದುಕೊಳ್ಳುತ್ತವೆ. ಏಕೆಂದರೆ ಆ

ಪ್ರದೇಶದ ಸ್ಥಳೀಯ ಚರಿತ್ರೆಯನ್ನು ತಿಳಿಸುವಂತಹ ಲಾವಣಿಗಳಾಗಿ ಇವು ಬ್ರಿಟಿಷರ ವಸಾಹತುಶಾಹಿಯನ್ನು ಪ್ರಶ್ನಿಸುವ ಕಥನಗಳಾಗಿವೆ.

ಜಾನಪದ ಅಧ್ಯಯನ ಜಾನಪದ ಗೀತೆ, ಗಾದೆ, ಕತೆ, ಕಾವ್ಯ, ಲಾವಣಿ, ಕಥನಗೀತೆಗಳ ವ್ಯಾಪ್ತಿಯಲ್ಲಿ ನಡೆದರೂ ಅಧ್ಯಯನದ ಸಮಯಕ್ಕೆ ಆ ಕಾಲದ ಪ್ರಮುಖ ಪತ್ರಿಕೆಯಲ್ಲಿ ಜನಪದಕ್ಕೆ ಸಂಬಂಧಪಟ್ಟಂತಹ ಅನೇಕ ವಿಚಾರಗಳು ಮತ್ತು ಲೇಖನಗಳು ಕನ್ನಡದಲ್ಲಿ ಪ್ರಕಟವಾಗಿ ಕೆಲವು ಜನಪದ ಪ್ರಕಾರಗಳ ಸಂಕಲನಗಳನ್ನು ತಂದರು. ಕರ್ನಾಟಕದಲ್ಲಿ ಮಂಗಳೂರಿನ ಬಾಸೆಲ್ ಮಿಷನ್ ಇಂತಹ ಕಾರ್ಯವನ್ನು ಮಾಡಿದೆ ಎಂಬುದಾಗಿ ಹೇಳಬಹುದು. ಇದು ಇಪ್ಪತ್ತನೆಯ ಶತಮಾನಕ್ಕೆ ಸೇರುತ್ತದೆ.

ಜಾನಪದ ಅಧ್ಯಯನ ತನ್ನ ಅಸ್ತಿತ್ವ ಪಡೆದುಕೊಂಡು ತನ್ನ ಹೆಜ್ಜೆಯನ್ನು ಮೂಡಿಸುತ್ತ ಮುಂದೆ ಸಾಗುತ್ತ ಸಂಗ್ರಹಣೆಯ ಕಾರ್ಯದಲ್ಲಿ ಹಾಗೂ ಅಧ್ಯಯನದಲ್ಲಿ ಪ್ರಾಧಾನ್ಯತೆಯನ್ನು ಪಡೆಯುತ್ತಿದೆ. ೧೯೨೪ರಲ್ಲಿ ಕೊಡವ ಸಂಸ್ಕೃತಿಗೆ ಸಂಬಂಧಿಸಿದ 'ಪಟ್ಟೋಲೆ ಪಳಮೆ' ಎಂಬ ಕೃತಿಯನ್ನು ನಡಕೇರಿಯಂಡ ಚಿಣ್ಣಪ್ಪ ಎಂಬುವರು ಪ್ರಕಟಿಸಿದರು. ಪ್ರಕಟಿಸುವುದರ ಮೂಲಕ ಕನ್ನಡ ಜಾನಪದದ ಹೊಸ ಅಧ್ಯಯನ ಮತ್ತು ಸಂಗ್ರಹಣೆಯನ್ನು ಆರಂಭಿಸಿದರು. ಜನರ ಆಡುಮಾತಿನ ಮೂಲಕ ಕೊಡಗಿನ ಸಂಸ್ಕೃತಿಯು ಹೇಗೆ ರೂಪಿತವಾಗಿದೆ ಎಂಬುದನ್ನು ತೋರಿಸಿದರು. ಇವರ ಸಮಸ್ತ ಆಚಾರ ವಿಚಾರಗಳನ್ನು ಅಭ್ಯಸಿಸಿ ಅವುಗಳನ್ನೆಲ್ಲ ಪರಿಚಯಿಸುವುದರ ಜೊತೆಯಲ್ಲಿಯೇ ಅವರ ಭಾಷೆ ಜನಪದ ಸಾಹಿತ್ಯದ ಬೇರೆ ಬೇರೆ ಪ್ರಕಾರಗಳನ್ನು ಅಧ್ಯಯನ ಮಾಡುತ್ತ ಸಂಪ್ರದಾಯ ಮುಂತಾದವುಗಳ್ನು ಸಂಗ್ರಹಿಸಿ ಈ ಕೃತಿಯನ್ನು ಪ್ರಕಟಿಸಿದರು. ಆ ಕಾಲಕ್ಕೆ ಈ ಕೃತಿಯು ಸಮಗ್ರ ಜಾನಪದ ದೃಷ್ಟಿಯು ಬಹುವಿಷಯಗಳನ್ನು ಒಳಗೊಂಡಿದೆ ಎಂದು ಹೇಳಬಹುದು.

ಜಾನಪದ ಅಧ್ಯಯನ ಕನ್ನಡದಲ್ಲಿ ಸರಿಯಾಗಿ ಆರಂಭವಾದದು ೧೯೨೦ರ ಕಾಲಾವಧಿಯಲ್ಲಿ. ಲಾವಣಿಗಳ ಮೇಲೆ ಹಲವಾರು ಲೇಖನಗಳು ಮತ್ತು ಪತ್ರಿಕೆಯಲ್ಲಿ ಜಾನಪದದ ಬಗ್ಗೆ ಪ್ರಮುಖ ಲೇಖನಗಳು ಪ್ರಕಟವಾದರೂ ನಂತರ ೧೯೩೧ರಿಂದಲೇ ಕನ್ನಡ ಜನಪದ ಸಾಹಿತ್ಯದ ನವೋದಯದತ್ತ ಮುಖ ಮಾಡಬೇಕಾಗುತ್ತದೆ.

೧೯೨೦ರ ನಂತರದ ದಿನಗಳಲ್ಲಿ ಜನಪದ ಗೀತೆಗಳ ಸಾಹಿತ್ಯಕ ಮೌಲ್ಯದ ಕಡೆ, ನವೋದಯದ ಸಾಹಿತಿಗಳ ಗಮನವು ಮೌಖಿಕ ಪರಂಪೆಯ ಕಡೆ ವಾಲಿತು. ಈ ಸಮಯದಲ್ಲಿ ಭಾವಗೀತೆಗಳು ಹೆಚ್ಚು ಮಹತ್ವವನ್ನು ಪಡೆದುಕೊಂಡಿದ್ದವು. ಇದರಿಂದ ನವೋದಯದ ಕೆಲವು ಕವಿಗಳು ಜನಪದ ಕಾವ್ಯಪ್ರಕಾರದ ಕಡೆಗೆ ತಮ್ಮ ದೃಷ್ಟಿಯನ್ನು ಹರಿಯ ಬಿಟ್ಟರು. ಕೆಲವರು

ಲಾವಣಿಗಳ ಸಂಗ್ರಹ ಪ್ರಕಟಣೆಯ ಕಡೆ ಅಸಕ್ತಿ ತೋರಿದರು. ಇದಕ್ಕೂ ಮೊದಲಿಗೆ ಮಾಸ್ತಿ, ಬಿ.ಎಂ.ಶ್ರೀ. ಮೊದಲಾದವರು ತಮ್ಮ ಲೇಖನಗಳಲ್ಲಿ ಜನಪದ ಸಾಹಿತ್ಯದ ಮೌಲ್ಯವನ್ನು ಆ ಕಾಲಕ್ಕೆ ಪರಿಚಯಿಸಿದರು. ಜಾನಪದ ಅಧ್ಯಯನದ ಕೆಲಸ ಮಾಡುವವರಿಗೆ ಇವು ಪ್ರೇರಣೆಯನ್ನು ನೀಡಿದವು. ನಂತರ ದ.ರಾ.ಬೇಂದ್ರೆ, ಮಧುರಚನ್ನ, ಸಿಂಪಿ ಲಿಂಗಣ್ಣ, ಕಾಪಸೆರೇವಪ್ಪ ಮುಂತಾದವರು ಸಾಹಿತ್ಯಕ್ಕೂ ಜನಪದಕ್ಕೂ ಒಂದು ಅವಿನಾಭಾವ ಸಂಬಂಧವಿದೆ ಎಂಬುದನ್ನು ಮತ್ತೊಮ್ಮೆ ತಿಳಿಸುತ್ತ ಜನಪದ ಗೀತೆಗಳಿಂದ ಹೆಚ್ಚು ಪ್ರೇರಿತರಾದರು. ಜೊತೆಗೆ ಜನಪದ ಗೀತೆಗೆ ಮಹತ್ವವನ್ನು ಪರಿಚಯಿಸುತ್ತ ಬಂದರು.

ಮೊಟ್ಟಮೊದಲ ಬಾರಿಗೆ ಕಾಪಸೆ ರೇವಪ್ಪ, ಸಿಂಪಿ ಲಿಂಗಣ್ಣ, ಮಧುರಚನ್ನ ಈ ಮೂರು ಜನರು 'ಗರತಿಯ ಹಾಡು' ಸಂಕಲನವನ್ನು ೧೯೩೧ರಲ್ಲಿ ಸಂಗ್ರಹಿಸಿ ಪ್ರಕಟಿಸಿದರು. ಇದು ಕನ್ನಡ ಜನಪದ ಸಾಹಿತ್ಯದ ಸಾರಸ್ವತ ಲೋಕದಲ್ಲಿ ನವಸೃಜನಶೀಲತೆಯನ್ನು ಜೊತೆಗೆ ರೋಮಾಂಚನವನ್ನು ತಂದುಕೊಟ್ಟಿತು. ಇವರು ಉತ್ತರ ಕರ್ನಾಟಕದ ಬಿಜಾಪುರ ಜಿಲ್ಲೆಯ ಸುತ್ತಮುತ್ತಲಿನ ಪ್ರದೇಶದ ಗೀತೆಗಳನ್ನು ಸಂಗ್ರಹಿಸಿ ಅವುಗಳನ್ನು ಪರಿಷ್ಕರಿಸಿ ನಂತರ ಆಯ್ಕೆ ಮಾಡಿ ಪ್ರಕಟಣೆಯನ್ನು ಮಾಡಿದರು. ಇವರು ಗ್ರಾಮೀಣ ಮಹಿಳೆಯರು ಹಾಡುವ ಹಾಡುಗಳನ್ನು ಸಂಗ್ರಹಿಸಿದರು. ಈ ಹಾಡುಗಳು ಹೆಂಗಸರ ಬಾಯಿಯಲ್ಲಿ ಜೀವಂತವಾಗಿ ಸ್ವಾತಂತ್ರ್ಯವಾಗಿ ನಲಿಯತೊಡಗಿದವು. ಕೇಳುವವರಿಗೆ ಆನಂದವನ್ನು ಉಂಟು ಮಾಡುವುದರ ಜೊತೆಯಲ್ಲಿ ಶೃಂಗಾರದಿಂದ ತುಂಬಿದವು. ಜೊತೆಗೆ ತ್ರಿಪದಿಯ ರೂಪದಲ್ಲಿ ಇವುಗಳನ್ನು ಹಾಡುತ್ತಿದ್ದರು. ಇದನ್ನು ಸಾಹಿತ್ಯದ ಪ್ರಕಾರವೆಂದು ಗುರುತಿಸಿದರು. ಜನಪದ ಕಾವ್ಯಗಳು ಸಹ ಕಾವ್ಯ ರೂಪವನ್ನು ಅಲಂಕಾರಗಳನ್ನು ಲಯಗಳನ್ನು ಪಡೆದುಕೊಂಡಿವೆ ಎಂಬುದಾಗಿ ವಿದ್ವಾಂಸರು ತಿಳಿಸಿದರು. ಕರ್ನಾಟಕದ ಉತ್ತರ ಭಾಗದ ಪ್ರದೇಶಗಳಲ್ಲಿ ಸುಮಾರು ೧೯೩೫ರಲ್ಲಿ ಮಲ್ಲಿಗೆ ದಂಡೆ ನಂತರ ೧೯೩೩ರಲ್ಲಿ ಜೀವನ ಗೀತ ಜನಪದ ಸಾಹಿತ್ಯ ಪ್ರಕಾರಗಳು ಪ್ರಕಟವಾದವು. ಇದಾದ ನಂತರ ಜನಪದ ಗೀತೆಗಳ ಪ್ರಕಾರಗಳ ವೈವಿಧ್ಯತೆ ಹೆಚ್ಚಾಗ ತೊಡಗಿತು. ಈ ತರಹದ ಗೀತ ಪ್ರಕಾರ ವನ್ನು ಮತ್ತು ಲಾವಣಿಯನ್ನು ಪರಿಚಯಿಸಿದ ಕೃತಜ್ಞತೆಯು ಹಲಸಂಗಿ ಗೆಳೆಯರಿಗೆ ಸೇರುತ್ತದೆ.

ಕರ್ನಾಟಕದಲ್ಲಿ ಹೆಚ್ಚಾಗಿ ಜನಪದ ಸಂಪಾದನಾ ಕಾರ್ಯ ಚುರುಕುಗೊಂಡು ಎರಡು ಭಾಗಗಳಲ್ಲಿ ಕೆಲಸ ನಡೆಯಿತು. ಅವು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಎಂಬುದಾಗಿ ಅಧ್ಯಯನದ ಅನುಕೂಲಕ್ಕೆ ತಕ್ಕಂತೆ ಜನಪದ ಸಾಹಿತ್ಯ ಸಂಗ್ರಹ ಕಾರ್ಯವನ್ನು ವಿಭಾಗಿಸಲಾಯಿತು. ಈ ಸಂದರ್ಭದಲ್ಲಿ ಗೊರೂರು ರಾಮಸ್ವಾಮಿ, ಕರಾಕೃ, ಮತಿಘಟ್ಟ ಕೃಷ್ಣಮೂರ್ತಿ, ಅರ್ಚಕ ರಂಗಸ್ವಾಮಿ ಈ ವಿದ್ವಾಂಸರು ಹೆಚ್ಚಿನದಾಗಿ ಸಂಗ್ರಹಣೆ ಕಾರ್ಯದಲ್ಲಿ ತೊಡಗಿದರು. ಅರ್ಚಕ ರಂಗಸ್ವಾಮಿಯವರು ೧೯೩೩ರಲ್ಲಿ ಪುಟ್ಟಿದ 'ಹಳ್ಳಿಯ ಹಾಡು'

ಎಂಬಂತಹ ಕೃತಿಯನ್ನು ಲೋಕಾರ್ಪಣೆ ಮಾಡಿದರು. ಇದರಲ್ಲಿ ಹಳ್ಳಿಯ ಜನರ ಜೀವನದ ಗೀತೆಗಳು ತ್ರಿಪದಿಯ ರೂಪದಲ್ಲಿ ಸಂಗ್ರಹಣೆಯ್ನನು ಮಾಡಿದ್ದಾರೆ. ಗೊರೂರು ಅವರು 'ಹಳ್ಳಿಯ ಹಾಡುಗಳು' ಸಂಗ್ರಹವನ್ನು ೧೯೩೬ರಲ್ಲಿ ಹೊರತಂದರು. ಇವರ ನಂತರ ೧೯೪೦ರಲ್ಲಿ ಅರ್ಚಕ ರಂಗಸ್ವಾಮಿಯವರು 'ಹಳ್ಳಿಯ ಪದಗಳು' ಎಂಬ ತ್ರಿಪದಿ ಸಂಗ್ರಹವನ್ನು ಮಾಡಿದರು. ಈ ಕೃತಿಗಳು ಮೈಸೂರು ಭಾಗದ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶದಲ್ಲಿ ಸಂಗ್ರಹಿಸಿದಂತಹ ಸಾಹಿತ್ಯವಾಗಿದೆ. ಆದ್ದರಿಂದ ಇದನ್ನು ದಕ್ಷಿಣ ಕರ್ನಾಟಕದ ಮೊದಲ ಸಂಗ್ರಹಣೆಯ ಕೃತಿಯೆಂದು ಹೇಳಬಹುದು. ಈ ಸಮಯದಲ್ಲಿ ದೇವುಡು ಅವರು ಜನಪದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡುವುದರ ಮೂಲಕ ಸಂಪಾದನೆಯ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗುತ್ತಾರೆ.

ಇದೇ ಹಾದಿಯಲ್ಲಿ ಮುಂದುವರೆದ ಹಿರಿಯ ವಿದ್ವಾಂಸ ಜಾನಪದ ಸಂಪಾದನೆಯ ಕಾರ್ಯದಲ್ಲಿ ತೊಡಗಿದ್ದರಿಂದ ಈ ಕ್ಷೇತ್ರಕ್ಕೆ ಭದ್ರವಾದ ಬುನಾದಿಯನ್ನು ಹಾಕಿಕೊಟ್ಟರು. ಇದರಿಂದ ಅನೇಕ ಮಂದಿ ವಿದ್ವಾಂಸರು ಜನಪದ ಕ್ಷೇತ್ರಕ್ಕೆ ಪ್ರೀತಿಯಿಂದ ತಮ್ಮ ಆಸಕ್ತಿಯನ್ನು ತೋರಿದರು. ಇದರಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಅರ್ಚಕ ಬಿ.ರಂಗಸ್ವಾಮಿ, ಸಿಂಪಿ ಲಿಂಗಣ್ಣ, ಮತಿಘಟ್ಟ ಕೃಷ್ಣಮೂರ್ತಿ ಇಂತಹ ವಿದ್ವಾಂಸರು ತಮ್ಮ ಜಾನಪದ ಸಂಪಾದನೆಯ ಕಾರ್ಯವನ್ನು ಮುಂದುವರೆಸುತ್ತ ಮುಂಬರುವ ಅಧ್ಯಯನಕಾರರಿಗೆ ಪ್ರೇರಣೆಯನ್ನು ನೀಡುವುದರ ಜೊತೆಗೆ ಸ್ವತಃ ಸಂಗ್ರಹ ಕಾರ್ಯದಲ್ಲಿ ತೋಡಗಿದರು.

ನಂತರ ಸ್ವಾತಂತ್ರ್ಯ ಸಮಯದಲ್ಲಿ ತಮ್ಮ ನಾಡು ನುಡಿಯ ಮೇಲಿನ ಅಭಿಮಾನದಿಂದ ಕರೀಂಖಾನ್, ಕಾಳಿಂಗರಾವ್ ಮುಂತಾದವರು ಜನಪದ ಗೀತಪ್ರಕಾರದ ಸಂಗ್ರಹಣೆಯಲ್ಲಿ ತೊಡಗಿದರು. ಜೊತೆಗೆ ಇದನ್ನು ತಮ್ಮ ಸ್ಥಳೀಯರಿಗೆ ಪರಿಚಯಿಸುತ್ತ ಜನಪದ ಮಹತ್ವವನ್ನು ತಿಳಿಸುತ್ತ ಬಂದರು. ಆದರೆ ನಿರಂತರವಾಗಿ ಸಂಪಾದನೆಯ ಕಾರ್ಯದಲ್ಲಿ ತೊಡಗಿದ ವ್ಯಕ್ತಿ ಮತಿಘಟ್ಟ ಕೃಷ್ಣಮೂರ್ತಿಯವರು. ಇವರ ತರುವಾಯ ಸ್ವಾತಂತ್ರ್ಯನಂತರದ ದಿನಗಳಲ್ಲಿ ಹೆಚ್ಚು ಮಹತ್ವವನ್ನು ಪಡೆದುಕೊಂಡಂತಹ ವಿದ್ವಾಂಸರೆಂದರೆ ಕ.ರಾ.ಕೃ. ಗದ್ದಿಗಿಮಠ, ಜೀ.ಶಂ.ಪ., ಐ.ಆರ್.ತಿಪ್ಪೇಸ್ವಾಮಿ, ದೇಜಗೌ, ಹಾ.ಮಾ.ನಾಯಕ, ಲಕ್ಕಪ್ಪಗೌಡ, ಎಚ್.ಎಲ್.ನಾಗೇಗೌಡ, ಲಠ್ಠೆ, ನೇಗಿನಾಳ, ವೀರಣ್ಣ ದಂಡೆ, ತೀ.ನಂ.ಶಂಕರನಾರಾಯಣ ಇನ್ನು ಕೆಲವು ವಿದ್ವಾಂಸರು ಜಾನಪದದ ದಾರಿಯನ್ನೇ ಹಿಡಿದು ಮುನ್ನೆಡೆದರು. ಇವರಲ್ಲಿ ಪ್ರಮುಖರು ಗದ್ದಗೀಮಠ ಅವರು ಕನ್ನಡದಲ್ಲಿ ಮೊಟ್ಟ ಮೊದಲ ಬಾರಿಗೆ ಜಾನಪದ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು ಹೊಸ ರೀತಿಯ ಅಧ್ಯಯನ ಕ್ರಮವನ್ನು ಅನುಸರಿಸಿದರು. ಇದರಿಂದ ಜನಪದ ಗೀತೆಗಳನ್ನು ಪ್ರತ್ಯೇಕವಾಗಿ ಆರಿಸಿಕೊಂಡು ಕರ್ನಾಟಕ ಜನಪದ ಗೀತೆಗಳು ಎಂಬ ವಿಷಯದ ಮೇಲೆ ಮಹಾಪ್ರಬಂಧದ ರಚನೆಯನ್ನು ಮಾಡಿ ಪಿಎಚ್.ಡಿ ಪದವಿಯನ್ನು ಪಡೆದಿದ್ದಾರೆ. ಇದು

ದಾಖಲೆಯನ್ನು ನಿರ್ಮಾಣ ಮಾಡಿತು. ಏಕೆಂದರೆ ಅದುವರೆಗೂ ಯಾರೂ ಸಹ ಡಾಕ್ಟರೇಟ್ ಪದವಿಯನ್ನು ಪಡೆದುಕೊಂಡಿರಲಿಲ್ಲ. ಡಾ.ಗದ್ದಗಿಮಠ ಅವರೇ ಮೊದಲಿಗರು.

ಇವರ ನಂತರ ಬಂದಂತಹ ಜೀ.ಶಂ.ಪರಮಶಿವಯ್ಯನವರು ಕಾವ್ಯ ಪ್ರಕಾರಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿ ದಕ್ಷಿಣ ಕರ್ನಾಟಕದ ತುಂಬ ತಮ್ಮ ಅಧ್ಯಯನವನ್ನು ಕೈಗೊಂಡರು. ನಂತರ ಹಳ್ಳಿ ಹಳ್ಳಿಯಲ್ಲಿ ಹಾಡುವ ಕಲಾವಿದರನ್ನು ಕಂಡು ಅವರು ಹಾಡುತ್ತಿದ್ದ ಗೀತೆಗಳ ಸಂಗ್ರಹಣೆಯನ್ನು ಮಾಡಿದರು. 'ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು' ಎಂಬ ವಿಷಯದ ಬಗ್ಗೆ ಅಧ್ಯಯನವನ್ನು ಮಾಡಿದರು. ನಂತರ ಖಂಡ ಕಾವ್ಯಗಳನ್ನು ಸಂಗ್ರಹಿಸಿದರು. ೧೯೬೫ರಲ್ಲಿ ಸುಮಾರಿಕೆ ಕ.ರಾ.ಕೃ.ರವರು ಕಾವ್ಯ ಪ್ರಕಾರಕ್ಕೆ ಸಂಬಂಧಪಟ್ಟಂತಹ ಗೀತೆ ಲಾವಣಿಗಳ ಸಂಗ್ರಹಣೆಯನ್ನು ಮಾಡಿದರು. ಇವರ ನಂತರ ಬಂದಂತಹ ದೇ.ಜವರೇಗೌಡರು ಹಾಗೂ ಎಚ್.ಎಲ್.ನಾಗೇಗೌಡರು ಜನಪದ ಸಂಗ್ರಹಣ ಕಾರ್ಯದಲ್ಲಿ ತೊಡಗಿ, ತಮ್ಮ ಸುತ್ತಮುತ್ತಲಿನ ಪ್ರದೇಶದ ಕಾವ್ಯ ಮತ್ತು ಜನಪದ ಪ್ರಕಾರಗಳ ಮಾಹಿತಿಯನ್ನು ಕೆಲವು ಸಮುದಾಯದ ಕಾವ್ಯಗಳನ್ನು ಸಂಗ್ರಹ ಮಾಡಿದರು. ಇದರಲ್ಲಿ ನಾಗೇಗೌಡರ ಪಾತ್ರ ಅಪರಿಮಿತವಾಗಿದೆ. ಇದೇ ಸಂದರ್ಭದಲ್ಲಿ ದೇ.ಜವರೇಗೌಡರು ಜನಪದಕ್ಕೆ ಸಂಬಂಧಪಟ್ಟಂತಹ ಸಮೀಕ್ಷೆಯನ್ನು ನಡೆಸಿದರು.

ಜನಪದ ಕಾವ್ಯ ಕ್ಷೇತ್ರದಲ್ಲಿ ನಡೆದ ಗಣನೀಯ ಕಾರ್ಯವು ಈ ದಶಕದಲ್ಲಿ ಹೊರಬಂದಿತು. ಸುಮಾರು ೧೯೬೦ರ ನಂತರದಲ್ಲಿ ಸಾಹಿತ್ಯ ಮತ್ತು ಜನಪದ ಎರಡನ್ನೂ ಸಹ ಒಂದೇ ದೃಷ್ಟಿಯಲ್ಲಿ ನೋಡತೊಡಗಿದರು. ಇದರ ಜೊತೆಯಲ್ಲಿಯೇ ವಿದ್ವಾಂಸರು ಅವರ ಸುತ್ತಮುತ್ತಲಿನ ಪ್ರದೇಶವನ್ನೇ ಆರಿಸಿಕೊಂಡು ಅಲ್ಲಿರುವ ಗೀತೆ, ಕಾವ್ಯಗಳನ್ನು ಸಂಗ್ರಹಿಸಿ ಮದುವೆ ಮತ್ತು ಶುಭ ಸಮಾರಂಭಗಳಲ್ಲಿ ಹೋಗಿ ಹಾಡಿದಂತಹ ಹಾಡುಗಳನ್ನು ಸಂಗ್ರಹಿಸಿ ಅವುಗಳನ್ನು ಪರಿಷ್ಕರಿಸಿ ಪ್ರಕಟಿಸಿದರು. ಇಂತಹ ಸಂದರ್ಭದಲ್ಲಿ ಸೋಬಾನೆಯ ಪದಗಳು, ಕೋಲಾಟದ ಪದಗಳು, ಜನಪದದ ವಿವಿಧ ಪ್ರಕಾರದ ಗೀತೆಗಳು ದೊರೆಯುತ್ತಿದ್ದವು. ಬಹುಮಟ್ಟಿಗೆ ಕೆಲವು ಸಂಪ್ರದಾಯದ ಕಾವ್ಯಗಳು ದೊರಕಿವೆ. ಈ ರೀತಿಯ ಸಂಪಾದನೆಯ ಕಾರ್ಯ ತನ್ನ ದಾರಿಯನ್ನು ಎಲ್ಲ ಕಡೆಯಲ್ಲಿಯೂ ಚಾಚುತ್ತ ಸಮುದಾಯದ ನೆಲೆಯಲ್ಲಿ ಅಧ್ಯಯನ ಆರಂಭವಾಯಿತು. ಇವರ ಜೊತೆಗೆ ವೃತ್ತಿಗಾಯಕರ ಸಂಪ್ರದಾಯವನ್ನು ಕಂಡು ಅವರ ಅಧ್ಯಯನದಲ್ಲಿ ತೊಡಗಿದರು. ಕರ್ನಾಟಕದಲ್ಲಿ ಸುಮಾರು ೧೦ಕ್ಕಿಂತ ಹೆಚ್ಚು ವೃತ್ತಿಗಾಯಕರ ಸಂಪ್ರದಾಯ ಕಂಡುಬರುತ್ತದೆ ಎಂದು ಹೇಳಬಹುದು. ಈ ಸಂಪ್ರದಾಯಗಳು ಹೆಚ್ಚಾಗಿ ಮೈಸೂರು, ಚಾಮರಾಜನಗರ, ಕೊಳ್ಳೇಗಾಲ, ದಕ್ಷಿಣ ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಕಂಡುಬರುತ್ತವೆ. ಉತ್ತರ ಕರ್ನಾಟಕದ ಕೆಲವು ಜಿಲ್ಲೆಯಲ್ಲಿ ಸಹ ಇದ್ದಾರೆ. ನೀಲಗಾರರು ಹೆಚ್ಚಾಗಿ ವೃತ್ತಿಯಲ್ಲಿ ಗಾಯಕರಾಗಿದ್ದರೂ ಇವರು ಮಾದೇಶ್ವರ ಮತ್ತು ಮಂಟೇಸ್ವಾಮಿ ಕಾವ್ಯವನ್ನು

ಹಾಡುತ್ತಾರೆ. ಇವರುಗಳಲ್ಲದೆ, ಬೇರೆ ಬೇರೆ ಸಮುದಾಯದ ಜನರು ವಿವಿಧ ರೀತಿಯ ಕಾವ್ಯಗಳನ್ನು ಹಾಡುತ್ತಾರೆ. ಸಾಂಸ್ಕೃತಿಕ ನಾಯಕರು ಹಾಗೂ ವೀರ ಮಹಿಳೆಯರ ಕಾವ್ಯಗಳನ್ನು ಹಾಡುತ್ತಾರೆ. ಕೆರೆಹೊನ್ನಮ್ಮ, ಕೆರೆಗೆ ಹಾರ ಇಂತಹ ಕಾವ್ಯಗಳು ಹೆಚ್ಚಿನ ರೀತಿಯಲ್ಲಿ ಸಂಗ್ರಹಣೆಗೊಂಡಿವೆ.

ಈ ಸಮುದಾಯದಿಂದ ಹುಟ್ಟಿದ ಕಾವ್ಯಗಳು ತಲೆಮಾರಿನಿಂದ ತಲೆಮಾರಿಗೆ ಬೆಳೆಯುತ್ತ ಹೋದಂತೆಲ್ಲ ತನ್ನ ಸ್ವರೂಪದಲ್ಲಿ ಬದಲಾವಣೆಯನ್ನು ಪಡೆಯಿತು. ಏಕೆಂದರೆ ನಮ್ಮ ಹಿರಿಯರು ಹಾಡುವ ಕಾವ್ಯಕ್ಕೂ ಅವರಿಂದ ಕಲಿತು ಮತ್ತೊಬ್ಬರು ಹಾಡುವುದಕ್ಕೂ ಕೆಲವು ಘಟನೆಗಳು ವಿಷಯಗಳು ಮರೆಯಾಗಬಹುದು ಹಾಗೂ ಸೇರ್ಪಡೆಯಾಗಬಹುದು. ಈ ಉದ್ದೇಶದಿಂದ ೭೦–೮೦ರ ದಶಕದಲ್ಲಿ ವಿಶಿಷ್ಟ ಸಂಪಾದನೆಯಲ್ಲಿ ತೊಡಗಿದವರು ಡಾ.ಪಿ.ಕೆ. ರಾಜಶೇಖರ ಅವರು. ಇವರು ಮೊದಲಬಾರಿಗೆ ಮಲೆಮಾದೇಶ್ವರ ಕಾವ್ಯ ಸಂಪಾದನೆಯನ್ನು ಮಾಡಿದರು. ನಂತರ ಇದನ್ನು ಡಾ ಕೇಶವನ್ ಪ್ರಸಾದ್ ಸಂಪಾದನೆ ಮಾಡಿದರು. ಇದರಿಂದ ಹೊಸ ತಲೆಮಾರಿನ ಸಂಪಾದನೆಯ ಕಾರ್ಯ ಆರಂಭವಾಯಿತು. ಡಾ ಹಿ.ಚಿ.ಬೋರಲಿಂಗಯ್ಯನವರು ಮಂಟೇಸ್ವಾಮಿ ಕಾವ್ಯವನ್ನು ಸಂಗ್ರಹಣೆ ಮಾಡಿದರು. ಇವರು ವೃತ್ತಿಗಾಯಕರ ಹಾಡುವಂತಹ ಕಾವ್ಯವನ್ನು ಅವರ ಬಾಯಿಂದ ಕೇಳಿ ನಂತರ ಅದನ್ನು ಸಂಗ್ರಹಣೆ ಮಾಡಿ ಸಂಪಾದನೆಯನ್ನು ಮಾಡಿದ್ದಾರೆ. ಈ ಹಾದಿಯಲ್ಲಿ ಡಾ ಮಂಜುನಾಥ ಬೇವಿನಕಟ್ಟಿ ಅವರು ಮೈಲಾರಲಿಂಗ ಕಾವ್ಯ, ಡಾ ವೆಂಕಟೇಶ ಇಂದ್ವಾಡಿ ಅವರು ಮಂಟೇಸ್ವಾಮಿ ಕಾವ್ಯ, ಗೋಣಿಬಸಪ್ಪನ ಕಾವ್ಯ, ಡಾ ಚಲುವರಾಜು ಅವರು ಜುಂಜಪ್ಪನ ಕಾವ್ಯವನ್ನು ಈ ಹೊಸತಲೆಮಾರಿನ ವಿದ್ವಾಂಸರು ಸಂಪಾದನೆಯನ್ನು ಮಾಡಿರುವುದನ್ನು ಗಮನಿಸಬಹುದು.

ಎಪ್ಪತ್ತು ಮತ್ತು ಎಂಬತ್ತರ ದಶಕದಲ್ಲಿ ವಿದ್ವಾಂಸರು ಹೊಸ ಸಂಪಾದನೆಯ ವಿಧಾನವನ್ನು ಅನುಸರಿಸಿದರು ಇವರು ಸಮುದಾಯ ಮತ್ತು ಗಾಯಕರ ಕುರಿತಂತೆ ಬುಡಕಟ್ಟು ಸಂಸ್ಕೃತಿಯ ಕಾವ್ಯಗಳನ್ನು ಅಧ್ಯಯನ ಮಾಡಲು ಅರಂಭಿಸಿದರು ಇವರು ಹಲವಾರು ಜನಪದ ಮಹಾಕಾವ್ಯ ಗಳನ್ನು ಸಂಪಾದಿಸಿ ಶಾಸ್ತ್ರೀಯ ಅಧ್ಯಯನಕ್ಕೆ ಒಳಪಡಿದರು.

ಕೊನೆ ಟಿಪ್ಪಣಿ

೧. ಸುವರ್ಣ ಜನಪದ ಸಂಪುಟ ೧, ಪು.೯

೨. ಜೀ.ಶಂ.ಪ.ಜಾನಪದ ಬರಹಗಳು, ಪು.೨೩೫

೩. ಅದೇ, ಪು.೧೩೭

ಅಧ್ಯಾಯ ಮೂರು

ಮೊದಲ ಘಟ್ಟದ ಸಂಪಾದನೆಯ ಹಿಂದಿನ ತಾತ್ತ್ವಿಕತೆ

ಅಧ್ಯಾಯ ಮೂರು

ಮೊದಲ ಘಟ್ಟದ ಸಂಪಾದನೆಯ ಹಿಂದಿನ ತಾತ್ತ್ವಿಕತೆ

ಯಾವುದೇ ಒಂದು ರಾಷ್ಟ್ರವು ಶ್ರೀಮಂತ ಜನಪದ ಸಾಹಿತ್ಯವನ್ನು ಪಡೆದುಕೊಂಡಿರುತ್ತದೆ. "ಪ್ರೌಢ ಹಾಗೂ ಜನಪದ ಸಾಹಿತ್ಯಗಳು ವಾಗ್ದೇವಿಯ ಎರಡು ಕಣ್ಣುಗಳು. ಪ್ರೌಢ ಸಾಹಿತ್ಯ ಅಲ್ಪಸಂಖ್ಯಾತರ ಆರಾಧ್ಯ ವಸ್ತುವಾದರೆ ಜನಪದ ಸಾಹಿತ್ಯ ಬಹುಸಂಖ್ಯಾತರ ಜೀವದ ಉಸಿರು"[೧] ಎಂಬುದಾಗಿ ಬಿ.ಎಂ.ಶ್ರೀ ಹೇಳುತ್ತಾರೆ. ಮಾತಿನಂತೆ ಸಂಸ್ಕೃತಿಯ ತಾಯಿ ಬೇರಾದ ಜನಪದ ಸಾಹಿತ್ಯ ಜನತೆಯ ನಾಲಿಗೆಯಲ್ಲಿ ಇರುವ ಶಕ್ತಿಯಾಗಿದೆ. ಜನಪದ ಎಂಬುದು ಒಬ್ಬ ವ್ಯಕ್ತಿಯಿಂದ ಹುಟ್ಟಿದ್ದಲ್ಲ, ಇದು ಶ್ರಮ ಸಂಸ್ಕೃತಿಯಿಂದ ರೂಪಗೊಳ್ಳುತ್ತದೆ. ಇದು ಸಮುದಾಯದ ಒಳಗೆ ಇರುವ ಶ್ರೀಮಂತ ಸಾಹಿತ್ಯ ಸಂಸ್ಕೃತಿಯಾಗಿದೆ ಎಂದು ಹೇಳಬಹುದು. ಈ ಮೂಲಕ ಜನಪದವೂ ಸ್ವರೂಪ ಪಡೆದು ಜನರ ನಡುವೆಯೇ ಸಂಸ್ಕಾರವನ್ನು ಪಡೆಯುತ್ತ ಏಕವ್ಯಕ್ತಿಯ ಸ್ವತ್ತಾಗದೆ ಮಾನವ ಕುಲದ ಸಂಸ್ಕೃತಿಯಾಗಿ ಜನತೆಯ ಹೃದಯದಲ್ಲಿ ವಿಶಿಷ್ಟ ಪಾತ್ರವಹಿಸಿದೆ.

ನಮ್ಮ ಪೂರ್ವಾವಧಿಯಲ್ಲಿ ಜನಪದದ ಬಗ್ಗೆ ತಿಳುವಳಿಕೆಯೆ ಇಲ್ಲದ ಸಮುದಾಯದಲ್ಲಿ ೧೮೪೬ರಲ್ಲಿ ಡಬ್ಲ್ಯೂ.ಜೆ.ಥಾಮ್ಸ್ ಅವರು ಪೋಕ್‌ಲೋರ್ (Folklore) ಎಂಬ ಪರಿಭಾಷೆಯನ್ನು ಬಳಸಿ ಜನಪದದ ಬಗ್ಗೆ ಅರಿವನ್ನು ಮೂಡಿಸಿ ಹೆಚ್ಚಿನ ಅಧ್ಯಯನಕ್ಕೆ ಪ್ರೇರಣೆಯಾದರು.

ಕನ್ನಡದಲ್ಲಿ ಜನಪದ ಕುರಿತಂತೆ ವಿವಿಧ ರೀತಿಯ ಪ್ರಕಾರಗಳನ್ನು ಗುರುತಿಸಿಕೊಂಡರು. ಹೀಗೆ ವಿವಿಧ ಪ್ರಕಾರಗಳನ್ನು ಗುರುತಿಸಿಕೊಂಡರೂ ಸಹ ಜನಪದ ಎಂಬುವಂತಹದ್ದು ಒಂದೇ ಎಂದು ತಿಳಿದರು. ಜಾನಪದ ಸಾಹಿತ್ಯವನ್ನು ಒಂದೇ ಭಾಗವಾಗಿ ರೂಢಿಸುತ್ತ ಬಂದಿದೆ. ಇದರಲ್ಲಿ ಶಿಷ್ಟಸಾಹಿತ್ಯ ಪ್ರಕಾರಗಳಂತೆ ಕಥೆಗಳು, ಗೀತೆಗಳು, ಗಾದೆಗಳು, ಒಗಟುಗಳು, ಮಹಾಕಾವ್ಯಗಳು, ಕಥನಗೀತೆಗಳು ಎಂಬ ಹಲವಾರು ಪ್ರಕಾರಗಳು ಕಾಲಕಾಲದಲ್ಲಿ ವಿದ್ವಾಂಸರ ಆಸಕ್ತಿಯನ್ನು ಸೆಳೆಯಿತು. ಸರಿಸುಮಾರು ೧೯೨೦ರ ಅವಧಿಯಲ್ಲಿ ಒಂದು ವ್ಯವಸ್ಥಿತ ಸಂಗ್ರಹಣೆಯ

ರೂಪವನ್ನು ಪಡೆದುಕೊಂಡಿತು. ಜನಪದ ಸಾಹಿತ್ಯ ಒಂದು ದೊಡ್ಡ ಸಾಗರ. ಇದು ತುಂಬಾ ವೈವಿಧ್ಯವಾಗಿರುವಂತಹ ಕ್ಷೇತ್ರ. ಅನೇಕ ಸಮುದಾಯಗಳಲ್ಲಿ, ಜನಾಂಗಗಳಲ್ಲಿ, ಭಾಷೆಗಳಲ್ಲಿ ಹಂಚಿಹೋಗಿರುವ ಜನಪದ ಸಾಹಿತ್ಯವನ್ನು ಸಂಗ್ರಹಣೆ ಮಾಡುವುದು ಸಾಮಾನ್ಯ ಕೆಲಸವಾಗಿರಲಿಲ್ಲ. ಈ ಅವಧಿಯಲ್ಲಿ ಅನೇಕ ಜನ ಪಾಶ್ಚಾತ್ಯ ವಿದ್ವಾಂಸರೂ ಮಿಷನರಿಗಳೂ ಭಾರತಕ್ಕೆ ಬಂದರು. ಇವರು ಅನೇಕ ಉದ್ದೇಶಗಳಿಗಾಗಿ ಬಂದಿದ್ದ ವಿವಿಧ ಕ್ಷೇತ್ರಗಳಲ್ಲಿ ಸಂಶೋಧನೆಗೆ ತೊಡಗಿದರು. ಜನಪದ ಅಧ್ಯಯನದಲ್ಲೂ ಆಸಕ್ತಿಯನ್ನು ತೋರಿದರು. ಭಾರತೀಯರ ಜೀವನವು ವಿಭಿನ್ನವಾಗಿರುವುದನ್ನು ಗುರುತಿಸಿದ್ದರು. ಜನಜೀವನಕ್ಕೆ ಸಂಬಂಧಿಸಿದ ಎಲ್ಲಾ ವಸ್ತುಗಳನ್ನು ಹಾಗೂ ವಿಷಯವನ್ನು ಅಧ್ಯಯನಕ್ಕೆ ಒಳಪಡಿಸಿದರು. ಜೊತೆಗೆ ಇವುಗಳನ್ನು ಸಂಗ್ರಹಿಸುತ್ತ ಬಂದರು. ಭಾರತಕ್ಕೆ ಬಂದಂತಹ ದಿಯೋಡರ್ ಬೆನ್ಫೆ, ಲ್ಯಾಂಗ್, ಮ್ಯಾಕ್ಸ್‌ಮುಲ್ಲರ್ ಮುಂತಾದ ಬೇರೆಬೇರೆ ವಿದ್ವಾಂಸರು ಜನಪದ ಸಾಹಿತ್ಯ ಅಧ್ಯಯನದಲ್ಲಿ ತೊಡಗಿದರು.

ಕರ್ನಲ್ ಡಾಡ್ ಅವರು ಭಾರತ ದೇಶದ ಜನಪದ ಸಾಹಿತ್ಯದ ಅಧ್ಯಯನದಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿ ಪ್ರಮುಖರೆನಿಸಿಕೊಂಡರು. ಇವರು "Annals and Antiquities of Rajastan"[೨] ಎಂಬ ಕೃತಿಯನ್ನು ರಚಿಸಿದ್ದಾರೆ. ಇದು ರಾಜಸ್ತಾನಿಯರ ಜಾನಪದಕ್ಕೆ ಸಂಬಂಧ ಪಟ್ಟಂತೆ ಅವರ ಜೀವನವಿಧಾನವನ್ನು ವಿವರಿಸುವ ಕೃತಿಯಾಗಿದೆ. ಈ ಕಾಲಾವಧಿಯಲ್ಲಿ ಬಂಗಾಳದಲ್ಲೂ ಸಹ ಜನಪದ ಕೃತಿಗಳು ರಚನೆಯಾದವು.

ಹೀಗೆ ಪ್ರಾರಂಭವಾದ ಜನಪದ ಸಾಹಿತ್ಯದ ಸಂಗ್ರಹಣೆಯು ಕ್ರೈಸ್ತ ಮಿಷನರಿಗಳಿಂದ ಪಾಶ್ಚಾತ್ಯ ವಿದ್ವಾಂಸರಿಂದ ಶುರುವಾಗಿ ಮುಂದೆ ಬೆಳೆಯುತ್ತ ಬಂದಿತು. ಎಂ.ಪೀರೇ, ಎಲ್.ಬಿ.ಡೇ, ಇ.ಎಂ.ಶೋರ್ಡನ್ ಮುಂತಾದ ವಿದ್ವಾಂಸರು ಜನಪದದ ವಿವಿಧ ಪ್ರಕಾರಗಳ ಅಧ್ಯಯನ ಕಾರ್ಯವನ್ನು ಮಾಡಿ ಜನಪದದ ಮಹತ್ವವನ್ನು ತಿಳಿಸಿದರು. ಪಾಶ್ಚಾತ್ಯ ವಿದ್ವಾಂಸರ ಸಂಗ್ರಹಣೆಯ ಕಾರ್ಯವನ್ನು ಗಮನಿಸಿದ ಭಾರತೀಯ ವಿದ್ವಾಂಸರೂ ತಮ್ಮ ಸಂಸ್ಕೃತಿಯನ್ನು ಅಧ್ಯಯನ ಮಾಡಲು ಮುಂದಾದರು. ಅವರುಗಳಲ್ಲಿ ಶ್ರೀ.ಮಹೇಶಚಂದ್ರ ದತ್ತರು, ನಟೇಶಶಾಸ್ತ್ರಿಯವರು, ರಾಮಸ್ವಾಮಿ ರಾಜು, ಕ್ರೂಕ್ ಅವರನ್ನು ಹೆಸರಿಸಬಹುದು. ಇವರು ೧೮೯೦ರ ವೇಳೆಯಲ್ಲಿ ಭಾರತೀಯ ಜನಪದ ಅಧ್ಯಯನ ಕಾರ್ಯದಲ್ಲಿ ತೊಡಗಿದರು. ಇವರಲ್ಲಿ ಮಹೇಶಚಂದ್ರ ಅವರು ಬಂಗಾಳಿಯ ಜನಪದ ಸಂಸ್ಕೃತಿ ಮತ್ತು ಜನಪದವನ್ನು ಕುರಿತು ಹೆಚ್ಚು ಅಧ್ಯಯನವನ್ನು ಮಾಡಿದರು. ಈ ರೀತಿ ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಅಪೂರ್ವ ಕೃತಿಗಳು ಅಪಾರ ಸಂಖ್ಯೆಯಲ್ಲಿ ರಚನೆಯಾದವು. ಇವುಗಳಲ್ಲಿ ಕೆಲವು ಇಂಗ್ಲಿಷಿನಲ್ಲಿ ರಚನೆಯಾದವು. ನಂತರದ ದಿನಗಳಲ್ಲಿ ವಿದ್ವಾಂಸರು 'ನಮ್ಮ ಸಂಸ್ಕೃತಿ ಎನ್ನುವಂತಹದ್ದು ನಮ್ಮ ಆಡು ಮಾತು, ಭಾಷೆಯ

ರೂಪದಲ್ಲಿ ಇರಬೇಕು' ಎಂಬುದನ್ನು ಮನಗಂಡು ತಮ್ಮ ಮಾತೃಭಾಷೆಯಲ್ಲಿ ಕೃತಿಗಳನ್ನು ಪ್ರಕಟಿಸಿದರು. ಹೀಗೆ ಭಾರತದ ಉದ್ದಕ್ಕೂ ಜನಪದ ಅಧ್ಯಯನ ಮತ್ತು ಸಂಗ್ರಹಣೆಯ ಕಾರ್ಯ ನಡೆಯ ತೊಡಗಿತು. ಕರ್ನಾಟಕದಲ್ಲಿಯೂ ಸಹ ಮಹತ್ವಪೂರ್ಣ ಜನಪದ ಸಂಗ್ರಹಣೆಯ ಕಾರ್ಯ ನಡೆಯಲು ಪ್ರಾರಂಭವಾಯಿತು.

ಹತ್ತೊಂಬತ್ತನೇ ಶತಮಾನಕ್ಕಿಂತ ಮುಂಚಿತವಾಗಿ ಅಂದರೆ "೧೭೩೨ರಲ್ಲಿಯೇ ಡಿಂಪಲ್ ಎಂಬಾತ of Poetry(ಕಾವ್ಯದ ಬಗ್ಗೆ) ಎಂಬ ಪ್ರಬಂಧದಲ್ಲಿಯೇ ಈ ಹಳೆಯ ಕಾವ್ಯಗಳ ಬಗ್ಗೆ ಆಸಕ್ತಿ ತೋರಿಸಿದ್ದ. ಸರ್ ವಾಲ್ಟರ್ ಸ್ಕಾಟ್, ವಂಕ್, ಫರ್ಸಲ್ ಮುಂತಾದವರು ಜಾನಪದ ಸಾಹಿತ್ಯದ ಬಗ್ಗೆ ತೋರಿದ ಅಪಾರ ಅಸಕ್ತಿಯು ಜನಪದ ಹೊಸ ಕಾವ್ಯಗಳಿಗೆ ನಾಂದಿಯಾಯಿತು. ಬರ್ನ್ಸ್‌ನಂತಹ ಜಾನಪದ ಕವಿಯು ಮುಂಬರಲು ಸಾಧ್ಯವಾಯಿತು. ಸ್ಕಾಟ್ ಹಳೆಯ ರೀತಿಯಲ್ಲಿ ಕತೆಗಳನ್ನು ರಚಿಸಲು ಸಾಧ್ಯವಾಯಿತು. ಈ ಜಾನಪದ ಸಾಹಿತ್ಯದ ಸ್ಫೂರ್ತಿಯೇ ವರ್ಡ್ಸ್‌ವರ್ತ್‌ನಂತಹ ಕವಿಗಳಿಗೆ ಪ್ರೇರಣೆಯಾಯಿತು. ಇವರು ಈ ಕಾವ್ಯದ ಅಗತ್ಯತೆಯನ್ನು ಒತ್ತಿ ಹೇಳಲು ಅನುವಾಯಿತು. ರೊಮ್ಯಾಂಟಿಕ್ ರಿವೈವಲ್(Romantic Revival) ಎಂದು ಕರೆಯಲಾಗುವ ಈ ಹೊಸ ಹುಟ್ಟಿನ ಸ್ಫೂರ್ತಿ ಜಾನಪದ ಗೀತೆಗಳಲ್ಲಿದೆ ಎಂಬುದು ಸುಸ್ಪಷ್ಟ. ವರ್ಡ್ಸ್‌ವರ್ತ್, ಕೋಲ್‌ರಿಜ್ ಮುಂತಾದವರೆಲ್ಲರೂ ಈ ಹೊಸ ಹುಟ್ಟಿನ ಪ್ರವರ್ತಕರು. ಅವರು ಜನಸಾಮಾನ್ಯರ ಜೀವನ ಮತ್ತು ಭಾಷೆಯನ್ನೇ ಕಾವ್ಯಕ್ಕೆ ಸ್ಫೂರ್ತಿಯೆಂದು ನಂಬಿ, ಅದನ್ನೇ ತಮ್ಮ ಕಾವ್ಯದಲ್ಲಿ ಆಚರಣೆಗೆ ತಂದರು."[೩] ಇವುಗಳನ್ನು ನಮ್ಮ ನವೋದಯ ಕಾಲಘಟ್ಟದಲ್ಲಿ ಸಂಪಾದನಕಾರರು ಅಳವಡಿಸಿಕೊಂಡರು.

ನಮ್ಮ ಕನ್ನಡ ನವೋದಯ ಸಾಹಿತ್ಯದ ಕಾಲದಲ್ಲಿ ಜಾನಪದ ಸಾಹಿತ್ಯದ ಬಗ್ಗೆ ವಿಶೇಷವಾದ ಆಸಕ್ತಿ ಮೂಡತೊಡಗಿತು. "೧೯೦೮ರಲ್ಲಿಯೇ 'ಕನ್ನಡದ ಅರತಿಗಳ ಸಂಗ್ರಹ' ಎಂಬ ಹೆಸರಿನಲ್ಲಿ ಹೆಣ್ಣು ಮಕ್ಕಳು ಆರತಿಯೆತ್ತುವಾಗ ಹಾಡುವ ಹಾಡುಗಳನ್ನು ಶ್ರೀ ಶಂಕರನಾರಾಯಣ ಕೂಂಡ್ಲಿಕರ್ ಎಂಬುವರು ಪ್ರಕಟಿಸಿದ್ದರೆಂಬುದು ಗಮನಾರ್ಹ."[೪] ಆದರೆ ಸಂಪಾದನೆಯ ಕಾರ್ಯ ನಡೆದುದು ನಂತರದ ದಿನಗಳಲ್ಲಿ ನವೋದಯ ಕಾಲದ ಪ್ರಮುಖ ವಿದ್ವಾಂಸರಾದ ಬಿ.ಎಂ.ಶ್ರೀಕಂಠಯ್ಯನವರು ಕನ್ನಡ ಸಾಹಿತ್ಯಕ್ಕೆ ಮತ್ತು ಸಂಪಾದನೆಯ ಕಾರ್ಯಕ್ಕೆ ತಳಪಾಯ ಹಾಕಿಕೊಟ್ಟರು. ಇವರು ಹೊಸ ಕವಿತೆಯ ರಚನೆಯನ್ನು ಮಾಡಿದರು.. ಯಾವುದೇ ಒಂದು ಕ್ಷೇತ್ರದಲ್ಲಿ ಹೊಸ ಆಸಕ್ತಿಯು ಬೆಳೆಯಬೇಕಾದರೆ ನಮ್ಮ ಮೂಲಸಂಸ್ಕೃತಿಯ ಬಗೆಗೆ ಮೊದಲು ಅಧ್ಯಯನ ನಡೆಯಬೇಕು ಎಂಬುದಾಗಿ ಹೊಸ ಅಧ್ಯಯನದಲ್ಲಿ ತೊಡಗಿದಂತಹ ವಿದ್ವಾಂಸರಿಗೆ ತಿಳಿಸಿದರು. ನಂತರ ಆಯಾಯಾ ಪ್ರದೇಶದ ತಮ್ಮ ಊರನ್ನೇ ಮುಖ್ಯವಾಗಿಟ್ಟುಕೊಂಡು ಅಧ್ಯಯನಗಳು

ಆರಂಭವಾದವು. ದಕ್ಷಿಣ ಕರ್ನಾಟಕದ ಭಾಗದಲ್ಲಿ ಮತಿಘಟ್ಟ ಕೃಷ್ಣಮೂರ್ತಿ ಗೊರೂರು ರಾಮಸ್ವಾಮಿ ಅಯ್ಯಂಗಾರು, ಅರ್ಚಕ ರಂಗಸ್ವಾಮಿ, ಕ.ರಾ.ಕೃ. ಎಚ್.ಜೆ ಲಕ್ಕಪ್ಪಗೌಡ, ಜಿ.ಶಂ.ಪ., ಹಾ.ಮಾ.ನಾ., ರಾಮಚಂದ್ರೇಗೌಡ ಮುಂತಾದವರು ಸಂಪಾದನೆಯ ಕಾರ್ಯವನ್ನು ನಡೆಸಿದರೆ, ಉತ್ತರ ಕರ್ನಾಟಕದಲ್ಲಿ ಗೆಳೆಯರ ಗುಂಪಿನವರು ಪಿ.ಧೂಲಾ, ಕಾಪಸೆ ರೇವಪ್ಪ, ಸಿಂಪಿಲಿಂಗಣ್ಣ, ಲಂಗೂ, ಹಲಸಂಗಿ ಚನ್ನಮಲ್ಲಪ್ಪ, ಬೆಟಗೇರಿ ಕೃಷ್ಣಶರ್ಮ, ಗದ್ದಗೀಮಠ, ಲಠ್ಠೆ, ನೇಗಿನಾಳ, ವೀರಣ್ಣ ದಂಡೆ ಮುಂತಾದ ವಿದ್ವಾಂಸರು ಸಂಪಾದನೆಯ ಕಾರ್ಯದಲ್ಲಿ ತೊಡಗಿದರು.

'ಕರ್ನಾಟಕದಲ್ಲಿ ಜನಪದ ಸಾಹಿತ್ಯ ಸಂಗ್ರಹಣೆಯು ಕಳೆದ ೧೯ನೇ ಶತಮಾನದಿಂದಲೇ ಪ್ರಾರಂಭವಾಗಿದೆ' ಎಂದು ಹೇಳಿದರೆ ತಪ್ಪಾಗಲಾರದು. ಕನ್ನಡ ಜನಪದ ಸಾಹಿತ್ಯದಲ್ಲಿ ಫ್ಲೀಟರ್ ಪ್ರಮುಖ ವ್ಯಕ್ತಿಯಾಗಿದ್ದಾರೆ. ಇವರು ಮೊದಲ ಬಾರಿಗೆ ಲಾವಣಿಗಳನ್ನು ಸಂಗ್ರಹಣೆ ಮಾಡಿದ್ದಾರೆ. ನಂತರ ಸುಮಾರು ಎರಡೂ ಮೂರು ದಶಕಗಳ ಕಾಲ ಕಳೆದರೂ ಯಾವ ಜನಪದ ಸಂಗ್ರಹಣೆಯ ಕಾರ್ಯವೂ ನಡೆಯಲಿಲ್ಲ. ಕರ್ನಾಟಕದಲ್ಲಿ ಜನಪದ ಸಾಹಿತ್ಯ ಎನ್ನುವಂತಹಂತದು ಇದೆ ಎನ್ನುವಂತಹ ವಿಷಯ ಕೆಲವು ಜನಕ್ಕೆ ತಿಳಿಯದೆ ಹೋಯಿತು. ಒಂದು ವೇಳೆ ತಿಳಿದಿದ್ದರೂ ಅದರ ಮೇಲೆ ನಿರ್ಲಕ್ಷ್ಯವನ್ನು ತೋರಿಸಿದರು. ನಂತರ ಕಾಲ ಕಳೆದಂತೆಲ್ಲ, ಕನ್ನಡ ಸಾಹಿತ್ಯ ತನ್ನದೆಯಾದ ಸ್ವರೂಪವನ್ನು ಪಡೆದುಕೊಳ್ಳುವ ಸಮಯದಲ್ಲಿ ಶಾಸನಗಳು, ಓಲೆಗರಿಗಳು, ಕಲ್ಲುಗಳ ಮೇಲಿನ ಬರಹಗಳು ಮುಂತಾದ ಅಧ್ಯಯನಗಳು ಆರಂಭವಾದವು. ಕರ್ನಾಟಕದಲ್ಲಿ ಕೆಲವು ಪ್ರದೇಶಗಳಲ್ಲಿ ಶಾಸನಗಳನ್ನು ಹುಡುಕಿ ಅವುಗಳನ್ನು ಪರಿಶೀಲಿಸಲಾಯಿತು. ಹೆಚ್ಚಾಗಿ ಓಲೆಗರಿಗಳ ಅಧ್ಯಯನ ಮತ್ತು ಸಾಹಿತ್ಯಿಕ ಪರಿಷ್ಕರಣಾ ಕಾರ್ಯ ನಡೆಯಲಾರಂಭವಾಯಿತು. ಈ ಕಾರಣದಿಂದ ಕವಿಚರಿತ್ರೆಗಳು ರಾಜರ ಮತ್ತು ಕವಿಗಳ ಬಗ್ಗೆ ತಿಳಿಯಲು ಸಹಾಯಕವಾದವು. ಇದನ್ನು ಮನಗಂಡ ವಿದ್ವಾಂಸರು ಗ್ರಾಮೀಣ ವಲಯದ ಜನರ ಬಾಯಿಯಲ್ಲಿ ಉಳಿದಿರುವ ಸಾಹಿತ್ಯ ಅಧ್ಯಯನದ ಮಹತ್ವವನ್ನು ಅರಿತರು. ಹಳ್ಳಿಯವರಲ್ಲಿ ಇರುವಂತಹ ಹಾಡುಗಳು, ಪದಗಳು, ಆಚರಣೆಗಳು, ಸಂಪ್ರದಾಯಗಳು ನಶಿಸಿ ಹೋಗದಂತೆ ಅವುಗಳನ್ನು ಸಂಗ್ರಹಿಸಬೇಕು ಎಂದು ವಿದ್ವಾಂಸರು ಜನಪದ ಸಂಪಾದನೆಯ ಕಾಯಕದಲ್ಲಿ ತೊಡಗಿದರು. ಅವುಗಳನ್ನು ಸಂಪಾದಿಸಿ ಅವುಗಳಿಗೆ ಒಂದು ರೂಪವನ್ನು ನೀಡಿ ಲಿಖಿತ ರೂಪಕ್ಕೆ ತರುವಲ್ಲಿ ವಿದ್ವಾಂಸರು ಹೆಚ್ಚು ಶ್ರಮಿಸಿದರು.

ಪಾಶ್ಚಾತ್ಯರ ಸಂಗ್ರಹಣೆಯಿಂದ ಕನ್ನಡ ಜನಪದ ವಿದ್ವಾಂಸರು ಪ್ರಭಾವಿತರಾದರು. ಕನ್ನಡ ಸಾಹಿತ್ಯದಲ್ಲಿ ನವೋದಯ ಕಾಲಘಟ್ಟ ಪ್ರಾರಂಭವಾಯಿತು. ಈ ನವೋದಯ ಕಾಲಘಟ್ಟವನ್ನು ಜನಪದ ಸಾಹಿತ್ಯದ ಅಧ್ಯಯನದ ದೃಷ್ಟಿಯಿಂದ ನಡೆದ ಒಂದು ಚಳವಳಿ ಎಂದೇ ಕರೆಯಬಹುದು.

ಏಕೆಂದರೆ ೧೯೧೯ರ ಅವಧಿಯಲ್ಲಿ ಕನ್ನಡ ಕಾವ್ಯಗಳು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡವು. ಜೊತೆಗೆ ಕಾವ್ಯಕ್ಕೆ ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿದ್ದ ಕಾಲ ಅದಾಗಿತ್ತು(ನವೋದಯದ ಪ್ರಾರಂಭದಲ್ಲಿ ಇತ್ತು). ಇದನ್ನು ತಿಳಿದ ಜನಪದ ವಿದ್ವಾಂಸರು ಕನ್ನಡ ಕಾವ್ಯ ಪ್ರಕಾರದಷ್ಟೇ ಜನಪದ ಕಾವ್ಯಗಳು ಪ್ರಮುಖ್ಯತೆಯನ್ನು ಪಡೆಯುತ್ತವೆ ಎಂಬುದನ್ನು ಅರಿತು ಜನಪದದಲ್ಲಿಯೂ ಸಹ ರೂಪ, ಲಯ, ರಚನೆ ಇದೆ ಎಂಬುದಾಗಿ ಕಾವ್ಯಮೀಮಾಂಸೆಯನ್ನು ಗುರುತಿಸಿದರು. ಇದರಿಂದ ವಿದ್ವಾಂಸರು, ಕಾವ್ಯಪ್ರಿಯರು, ಕನ್ನಡ ಪಂಡಿತರ ಅಭಿರುಚಿಯು ಜನಪದ ಕ್ಷೇತ್ರದ ಕಡೆ ಬೆಳೆಯಿತು. ಇದನ್ನು ಒಂದು ಪರಿವರ್ತನೆಯ ಕಾಲ ಎಂದೇ ಕರೆಯಬಹುದು. "೧೯೨೫ರ ಪರಿಷತ್ಪತ್ರಿಕೆಯಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರರು ಕನ್ನಡ ದೇಶದ ಲಾವಣಿ, ಸಾಂಗತ್ಯ ಇವುಗಳ ಬಗ್ಗೆ ಪರಿಚಯಾತ್ಮಕ ಲೇಖನವನ್ನು ಬರೆದರು. ಈ ಬಗೆಯಲ್ಲಿ ನವೋದಯ ಕಾಲದಲ್ಲಿ ಜಾನಪದ ಸಾಹಿತ್ಯವನ್ನು ಹುಡುಕಿ, ಕಲೆಹಾಕಿ ಸಂಶೋಧನಾತ್ಮಕವಾಗಿ, ವಿಮರ್ಶಾತ್ಮಕವಾಗಿ ಅವುಗಳನ್ನು ಸಂಪಾದಿಸುವ ಕೆಲಸವೂ ನಡೆಯಿತು."[೪]

'ಕನ್ನಡ ಲಾವಣಿ ಸಾಂಗತ್ಯ' ಕನ್ನಡ ನಾಡಿನ ನಾಯಕನೊಬ್ಬನ ವ್ಯಕ್ತಿತ್ವದ ಬಗ್ಗೆ ಅವನ ಕಾರ್ಯ ವೈಖರಿ ಬಗ್ಗೆ ಇರುವಂತಹ ಲೇಖನವಾಗಿದೆ. ಜನಪದ ಸಾಹಿತ್ಯದಲ್ಲಿ ಪ್ರಥಮವಾಗಿ ಮಾಸ್ತಿಯವರೆ ಜನಪದ ಏಳಿಗೆಗೆ ಶ್ರಮಿಸಿದರು. ಜೊತೆಗೆ ಜನಪದ ಆಸಕ್ತರನ್ನು ಅತ್ತ ಕಡೆ ವಾಲುವಂತೆ ಮಾಡಿದರು ಇವರ ಅವದಿಯಲ್ಲಿ ತಮ್ಮ ಸುತ್ತಮುತ್ತಲಿನ ಪ್ರದೇಶಗಳಿಗೆ ಭೇಟಿ ನೀಡಿ ಅಲ್ಲಿರುವಂತಹ ಜನಪದ ಸಾಹಿತ್ಯವನ್ನು ಕಂಡು ಸಂಗ್ರಹಿಸವ ದಾರಿಯನ್ನು ತೋರಿಸಿಕೊಟ್ಟರು. ಮಾಸ್ತಿ ವೆಂಕಟೇಶ್ ಅಯ್ಯಂಗಾರ್‌ರವರು ಕನ್ನಡ ನವೋದಯದ ಸಮಯದಲ್ಲಿ ಜನಪದಕ್ಕೆ ಹೆಚ್ಚು ಒಲವನ್ನು ತೋರಿದಂತವರು. ಮಾಸ್ತಿ, ಬಿ.ಎಂ.ಶ್ರೀ, ಬೇಂದ್ರೆಯವರು ಇವರು ಜನಪದ ಕ್ಷೇತ್ರಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದವರು. ಈ ಮೂವರು ಕವಿಗಳು ಹಾಗೂ ವಿದ್ವಾಂಸರು ಸ್ವತಃ ತಾವೇ ಹಳ್ಳಿಗಳಿಗೆ ಹೋಗಿ ಅಲ್ಲಿನ ಮಹಿಳೆಯರನ್ನು ಕಂಡು ಅವರು ಹಾಡುವಂತಹ ಪದಗಳನ್ನು ಕೇಳುತ್ತಿದ್ದರು. ಇದು ವಿದ್ವಾಂಸರು ತಮ್ಮ ಆಲೋಚನೆಯನ್ನು ವಿಸ್ತರಿಸಲು ಪ್ರೇರಣೆಯನ್ನು ನೀಡುತ್ತಿತ್ತು. ಇವರು ನಂತರ ಜನಪದ ಸಂಪಾದನೆಯಲ್ಲಿ ತೊಡಗಿದ ವರಿಗೆ ಮಾರ್ಗದರ್ಶನವನ್ನು ನೀಡಿದರು. ಸಾಮಾನ್ಯವಾಗಿ ಹೊಲ ಗದ್ದೆಗಳಿಗೆ ಕೆಲಸಕ್ಕೆ ಹೋದಂತಹ ಹೆಣ್ಣುಮಕ್ಕಳು ಸಂಜೆಯ ಸಮಯದಲ್ಲಿ ತಮ್ಮ ಗುಡಿಸಿಲಿನಲ್ಲಿ ಇರುತ್ತಿದ್ದರು. ಆ ವೇಳೆಯಲ್ಲಿ ತಮ್ಮ ಸಮಯವನ್ನು ಉಳಿಸಿಕೊಂಡು ವಿದ್ವಾಂಸರು ಅವರ ಗುಡಿಸಿಲುಗಳಿಗೆ ಹೋಗಿ ಅವರಿಂದ ನಾಲ್ಕು ಪದಗಳನ್ನು ಕೇಳಿ ಸಂತೃಪ್ತರಾಗುತ್ತಿದ್ದರು. ಜೊತೆಗೆ ಇವುಗಳನ್ನು ಉಳಿಸುವ ದೃಷ್ಟಿಯಿಂದ ಸಂಗ್ರಹಣೆಯನ್ನು ಆರಂಭಿಸಿದರು.

ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಜನಪದದ ಬಗ್ಗೆ ಅಪಾರವಾದ ಕಾಳಜಿಯಿಂದ ಅನೇಕ ಹಾಡುಗಳನ್ನು ಸಂಗ್ರಹಿಸಿದರು. ಇವರು ಸಂಪಾದನೆಯ ಕಾರ್ಯದಲ್ಲಿ ತೊಡಗಿದಾಗ ಒಂದು ಕಡೆಯಿಂದ ಮತ್ತೊಂದು ಕಡೆ ಪ್ರಯಾಣವನ್ನು ಮಾಡುವುದು ಅನಿವಾರ್ಯವಾಗಿತ್ತು. ಕೆಲವು ವೇಳೆ ಎತ್ತಿನ ಗಾಡಿಯಲ್ಲಿ ತಮ್ಮ ಪ್ರಯಾಣನವನ್ನು ಕೆಲವು ಸಮಯದಲ್ಲಿ ಬೆಳೆಸುತ್ತಿದ್ದರು. ಈ ಸಮಯದಲ್ಲಿ ಹಳ್ಳಿಗಾಡಿನ ಜನರು ತಮ್ಮ ಜೊತೆಯಲ್ಲಿ ಬರುವಾಗ ಹಾಡುಗಳನ್ನು ಹಾಡುತ್ತಿದ್ದರು. ಇವು ಮನಸ್ಸಿಗೆ ಸಂತೋಷವನ್ನು ಕೊಡುತ್ತಿದ್ದವು. ಇದರ ಜೊತೆ ಜೊತೆಯಲ್ಲಿಯೇ ಪ್ರಯಾಣದ ಆಯಾಸವು ಸಹ ಕಡಿಮೆಯಾಗುತ್ತಿತ್ತು. ಬಂಡಿಯು ಮುಂದೆ ಮುಂದೆ ಸಾಗಿದಂತೆ ಹಾಡುಗಳು ಹೆಚ್ಚು ಹೆಚ್ಚು ತನ್ನತ್ತ ಸೆಳೆಯುತ್ತಿದ್ದವು. ಇವುಗಳನ್ನು ಸಂಗ್ರಹಿಸುವಾಗ ಹಾಡುವವರಿಗೆ ಆಯಾಸವಾಗದಂತೆ ಸಂಪಾದಕರೂ ಕೂಡ ಭಾಗಿಯಾಗುತ್ತಿದ್ದರು. ಇಂತಹ ಹಾಡುಗಳ ಸಂಗ್ರಹವನ್ನು ಜಯಕರ್ನಾಟಕ ಮತ್ತು ಈ ಕಾಲದ ಇತರ ಪತ್ರಿಕೆಗಳಲ್ಲಿ ಪ್ರಕಟಣೆ ಮಾಡಿದರು. ಈ ಸಮಯದಲ್ಲಿ ಹಲಸಂಗಿ ಗೆಳೆಯರು 'ಗರತಿಯ ಹಾಡು' ಸಂಕಲನವನ್ನು ಪ್ರಕಟಣೆಯನ್ನು ಮಾಡಿದರು. ಹಲಸಂಗಿ ಗೆಳೆಯರಾದ ಚನ್ನಮಲ್ಲಪ್ಪ, ಲಿಂಗಪ್ಪ, ರೇವಪ್ಪ ಮೂವರು ಸಹೋದರರು ತ್ರಿಪದಿಯ ರೂಪದಲ್ಲಿ ಇರುವಂತಹ ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಿದರು. ನಂತರ ಇದನ್ನು ತಿಳಿದ ಕೆಲವು ವಿದ್ವಾಂಸರು ಜನಪದದ ಮೇಲೆ ಇದ್ದಂತಹ ಅಪನಂಬಿಕೆಯನ್ನು ತೊರೆದು, ಜನಪದದ ಮೇಲೆ ಇದ್ದ ನಿರ್ಲಕ್ಷ್ಯವನ್ನು ತೊರೆದು, ತ್ರಿಪದಿಯ ಹಾಡುಗಳ ಕಡೆ ಮತ್ತು ಸಂಗ್ರಹಣೆಯ ಕಡೆಗೆ ಮಾರುಹೋದರು.

ಈ ಅವಧಿಯಲ್ಲಿ ನವೋದಯ ಕಾಲಘಟ್ಟದಲ್ಲಿ ಶಿಷ್ಟಸಾಹಿತ್ಯಕ್ಕೂ ಮತ್ತು ಜನಪದ ಸಾಹಿತ್ಯಕ್ಕೂ ವಿವಿಧ ರೀತಿಯಿಂದ ಭಿನ್ನತೆ ಕಂಡುಬಂದವು. ಈ ಭಿನ್ನತೆ ಕಾವ್ಯ ಪ್ರಕಾರದ ಮೇಲೆ ಹೆಚ್ಚು ಪರಿಣಾಮವನ್ನು ಬೀರಿತು. ನಮ್ಮ ಶಿಷ್ಟ ಸಾಹಿತ್ಯದಲ್ಲಿ ಕಾವ್ಯಗಳೂ, ಕವಿಯ ಕಲ್ಪನೆಯ ಶಕ್ತಿಯಿಂದ ಮತ್ತು ಅವರ ಪ್ರತಿಭೆಯಿಂದ ಒಂದು ಆಕೃತಿಯನ್ನು ಪಡೆದಂತವುಗಳು. ಒಂದು ಕಾವ್ಯದ ರಚನೆಯನ್ನು ಮಾಡಬೇಕಾದರೆ ಕೆಲವು ನಿಯಮಗಳನ್ನು ಅನುಸರಿಸುತ್ತಿದ್ದರು. ಛಂದೋಪ್ರಕಾರಕ್ಕೆ ಒಳಪಟ್ಟು ಒಂದು ಚೌಕಟ್ಟಿನಲ್ಲಿ ಕಾವ್ಯಗಳು ರಚನೆಯನ್ನು ಪಡೆಯುತ್ತಿದ್ದವು. ಈ ರಚನೆಯಲ್ಲಿ ಜನರ ಬದುಕಿಗಿಂತ ಕಲ್ಪನೆಯ ಪ್ರಪಂಚ ಮತ್ತು ಪ್ರಕೃತಿಯ ವರ್ಣನೆಯ ಕೆಲಸವೂ ಹೆಚ್ಚಾಗಿ ನಡೆದಿದ್ದು ಜನಪದ ಕಾವ್ಯಗಳು ಇದಕ್ಕಿಂತ ಭಿನ್ನವಾಗಿ ಅಂದರೆ ಶಿಷ್ಟಸಾಹಿತ್ಯಕ್ಕಿಂತ ವಿಶೇಷವಾಗಿ ರೂಪಿತವಾಗಿದ್ದವು. ಜನಪದರಲ್ಲಿ ಶ್ರಮ ಮತ್ತು ದುಡಿಮೆಯು ತನ್ನ ಜೀವನ ಅವಶ್ಯಕತೆಗಾಗಿ ನಡೆಯುವಂತಹದ್ದು. ಈ ಅವಧಿಯಲ್ಲಿ ಜನರು ಹೊಲಗದ್ದೆಗಳಲ್ಲಿ ದುಡಿಯುವಾಗ ತಮ್ಮ ಶ್ರಮದ ಆಯಾಸವನ್ನು ನೀಗಿಸಿಕೊಳ್ಳವುದಕ್ಕೆ ಅವರೇ ಪದವನ್ನು ಕಟ್ಟಿ, ಆ ಸಂದರ್ಭಕ್ಕೆ ತಕ್ಕಂತೆ ಹಾಡುತ್ತಿದ್ದರು. ಇವುಗಳು ತ್ರಿಪದಿಗಳ ರಚನೆಯನ್ನು ಹೆಚ್ಚಾಗಿ ಕಾಣುತ್ತೇವೆ. ಇವರು

ಯಾವುದೇ ಛಂದಸ್ಸು ಮತ್ತು ಕಾವ್ಯ ಮೀಮಾಂಸೆಯನ್ನು ಓದಿದವರಲ್ಲ. ನೆಲವನ್ನು ಉಳುವಾಗ, ಗದ್ದೆಯಲ್ಲಿ ನಾಟಿಯನ್ನು ಮಾಡುವಾಗ, ತಮ್ಮ ದಿನ ನಿತ್ಯದ ಜೀವನದಲ್ಲಿ ನಡೆದಂತಹ ಘಟನೆಯನ್ನು ಪದಕಟ್ಟಿ ಹಾಡುತ್ತಿದ್ದರು. ಇದು ಹಿಂದಿನಿಂದಲೂ ನಡೆದುಕೊಂಡು ಬರುತ್ತಿದ್ದರೂ ನವೋದಯ ಸಮಯದಲ್ಲಿ ಇದರ ಮೇಲಿನ ಆಸಕ್ತಿಯೂ ಹೆಚ್ಚಾಗತೊಡಗಿತು.

ಶಿಷ್ಟಸಾಹಿತ್ಯಕ್ಕೂ ಮತ್ತು ಜನಪದ ಸಾಹಿತ್ಯ ರಚನೆಯಲ್ಲಿ ಭಿನ್ನತೆಯನ್ನು ಕಾಣಬಹುದು. ಶಿಷ್ಟ ಸಾಹಿತ್ಯವು ಒಬ್ಬ ವ್ಯಕ್ತಿಯ ತನ್ನ ಆಲೋಚನೆಯ ಮೂಲಕ ಮತ್ತೊಬ್ಬ ವ್ಯಕ್ತಿಯ ಓದಿನ ಮೂಲಕ ಒಂದು ಕಲ್ಪನೆಯ ಪ್ರಪಂಚಕ್ಕೆ ಜೀವವನ್ನು ತುಂಬುವಂತಹ ಕಾರ್ಯವನ್ನು ಮಾಡುತ್ತದೆ. ನವೋದಯ ಸಂದರ್ಭದ ಜನಪದ ಕಾವ್ಯಗಳಲ್ಲಿ ಬದುಕಿನ ನಡುವಿನ ಸಂಬಂಧ ಮತ್ತು ಸಂಸ್ಕೃತಿಗಳ ರಚನೆ, ಹಳ್ಳಿಯ ಜನರ ಶ್ರಮ, ಅನುಭಾವವನ್ನು ನೋಡಬಹುದು. ಈ ಮಾರ್ಗದಲ್ಲಿ ನಮ್ಮ ಕನ್ನಡ ಸಾಹಿತ್ಯದಲ್ಲಿ ಶಿಷ್ಟ ಮತ್ತು ಜನಪದವನ್ನು ಒಂದೇ ಮಾನದಂಡದಲ್ಲಿಟ್ಟು ಕಾವ್ಯರಚನೆಯನ್ನು ಮಾಡಿದಂತವರು ದ.ರಾ.ಬೇಂದ್ರೆಯವರು. ಇವರು ತಮ್ಮ ಕಾವ್ಯದಲ್ಲಿ ಜನಪದ ಲಯವನ್ನು ಶಿಷ್ಟಕ್ಕೆ ಹೋಲಿಸಿ ಒಂದಕ್ಕೊಂದು ಅರ್ಪಿಸಿ ಸುಂದರ ಕಾವ್ಯರಚನೆಯಲ್ಲಿ ತೊಡಗಿದ್ದರಿಂದಲೇ ಇವರಿಗೆ ಶಬ್ದಗಾರುಡಿಗ ಎಂಬ ಹೆಸರಿನಿಂದ ಕರೆಯಲಾಗಿದೆ. ಇವರ ಹಲವು ಕಾವ್ಯಗಳು ಜನಪದ ಶೈಲಿಯಲ್ಲಿ ರಚನೆಯಾಗಿವೆ. ಇಂತಹ ಆಯಾಮಗಳು ಶಿಷ್ಟಸಾಹಿತ್ಯ ಮತ್ತು ಜನಪದ ಸಾಹಿತ್ಯದಲ್ಲಿನ ವ್ಯತ್ಯಾಸಗಳನ್ನು ಗುರುತಿಸುವಲ್ಲಿ ಸಹಾಯಕವಾಗಿದೆ.

ಮೊದಲಬಾರಿಗೆ ಜನಪದ ಸಂಪಾದನೆಯ ಕಾರ್ಯದಲ್ಲಿ ತೊಡಗಿದ ಹಲಸಂಗಿಯ, ಚನ್ನಮಲ್ಲಪ್ಪ, ಕಾಪಸೆ ರೇವಪ್ಪ, ಲಿಂಗಪ್ಪ ಇವರು ಸಂಗ್ರಹಿಸಿದ ತ್ರಿಪದಿಯ ಹಾಡುಗಳ ಸಂಕಲನವನ್ನು 'ಗರತಿಯ ಹಾಡು' ಎಂಬುದಾಗಿ ಕರೆದರು. ಈ ಕೃತಿಗೂ, ಸಂಕಲನದ ಶೀರ್ಷಿಕೆಗೂ ಒಂದಕ್ಕೊಂದು ಒಪ್ಪುವಂತೆ ರಚಿಸಲಾಗಿದೆ. ಈ ಸಂಕಲನವು ಸ್ತ್ರೀಜೀವನದ ಕನ್ನಡಿಯಾಗಿದೆ. ಇದನ್ನು ಉತ್ತರ ಕರ್ನಾಟಕದ ಸುತ್ತಮುತ್ತಲಿನ ಹಳ್ಳಿಯ ದುಡಿಯುವ ಹೆಣ್ಣುಮಕ್ಕಳು ಮದುವೆಯಾಗಿ ತವರುಮನೆಯನ್ನು ಬಿಟ್ಟು ಹೋಗುವ ಮಹಿಳೆಯರು, ಅವರ ದುಃಖ ದುಮ್ಮಾನೆಗಳನ್ನು, ಅವರ ಭಾವನೆಗಳನ್ನು ಸಂಸಾರದ ವಿವಿಧ ನೆಲೆಗಳ ಕುರಿತು ಹಾಡಿರುವ ಹಾಡುಗಳನ್ನು ಈ ಮೂವರು ಸಂಗ್ರಹಿಸಿ ಅವುಗಳಿಗೆ ಒಂದು ರೂಪ ನೀಡಿದರು. ಇದಕ್ಕಿಂತ ಮುಂಚಿತವಾಗಿ ಸಂಪಾದನ ಕಾರರಲ್ಲಿ ಹಲವಾರು ರೀತಿಯ ಭಿನ್ನಾಭಿಪ್ರಾಯಗಳು ಕಂಡುಬಂದಿದ್ದವು. ಇಂತಹ ತೊಡಕುಗಳನ್ನು ಗುರುತಿಸಬೇಕಾದರೆ, ಜನಪದಕ್ಕೆ ಸಂಬಂಧಪಟ್ಟಂತಹ ಕೆಲವು ಪರಿಸರಗಳನ್ನು ಕುರಿತು ಚರ್ಚಿಸುವುದು ಅನಿವಾರ್ಯವಾಗಿದೆ.

ಜನಪದ ಒಂದು ವಿಶಾಲವಾದ ಲೋಕವಿದ್ದಂತೆ. ಈ ಜನಪದ ಜೀವನವಿಧಾನಕ್ಕೆ ಸಂಬಂಧಿಸಿದಂತೆ ಆಹಾರ, ಕುಣಿತ, ಆಚರಣೆ, ಸಂಪ್ರದಾಯ, ಎಲ್ಲವೂ ಜಾನಪದದ ಒಳಗಡೆ

ಇರುತ್ತವೆ. ಜನಪದ ಕಾವ್ಯ ಮತ್ತು ಗೀತೆಗಳು, ಲಾವಣಿಗಳು, ಕಥೆಗಳು, ಒಗಟು, ಗಾದೆಗಳು, ಮಹಾಕಾವ್ಯಗಳು ಈ ರೀತಿಯ ಎಲ್ಲಾ ಪ್ರಕಾರಗಳು ಈಗಾಗಲೇ ಎಷ್ಟೋ ವರ್ಷಗಳ ಹಿಂದಿನಿಂದಲೂ ಜನಪದರಲ್ಲಿದ್ದುದನ್ನು ಕಾಣಬಹುದು. ಅವು ತಮ್ಮದೇ ಆದ ಅಸ್ತಿತ್ವವನ್ನು ಪಡೆದು ಚಾಲ್ತಿಯಲ್ಲಿವೆ. ಮುಂದೆಯೂ ಬೇರೆಯ ರೂಪವನ್ನು ಪಡೆಯಬಹುದು. ಆದರೆ ಈ ಜನಪದರು ಬಿಡಿಪದಗಳನ್ನೇ ಏಕೆ ಆಯ್ಕೆ ಮಾಡಿಕೊಂಡರು ಎಂಬ ಪ್ರಶ್ನೆ ಅತಿಮುಖ್ಯವಾಗಿದೆ. ೧೯೨೦ ರಿಂದ ೧೯೫೦ರ ವರೆಗೆ ಕಥನ ಗೀತೆಗಳನ್ನು, ಸಂಪಾದಿಸಿದರು ಈ ಗೀತೆಗಳು ಬಿಡಿ ಬಿಡಿ ಗೀತೆಗಳಾಗಿದ್ದವು. ನಂತರ ಕಥನಗೀತೆಗಳಾದವು, ಒಂದು ಅರ್ಥದಲ್ಲಿ ಶಿಷ್ಟ ಸಂಪ್ರದಾಯದಲ್ಲಿ ಯಾವುದನ್ನು ಛಂದೋ ಬದ್ಧವಾಗಿ, ಲಯಬದ್ಧವಾಗಿ, ವ್ಯಾಕರಣ ದೃಷ್ಟಿಯಿಂದ ಪ್ರಾಸಬದ್ಧವಾಗಿ ಕಾವ್ಯ ಎಂದು ಕರೆದುಕೊಂಡಿದ್ದವೋ ಅಥವಾ ಗೀತೆ ಎಂಬುದಾಗಿ ಕರೆದುಕೊಂಡಿದ್ದವೋ, ಅವುಗಳನ್ನು ಮಾತ್ರ ಮುಖ್ಯವಾಗಿ ಮೊದಲ ಘಟ್ಟದಲ್ಲಿ ಸಂಗ್ರಹಣೆ ಮಾಡಲು ವಿದ್ವಾಂಸರು ತೊಡಗಿದರು. ನಂತರ ಕಾವ್ಯ ಮತ್ತು ಗೀತ ಪ್ರಕಾರಗಳ ಅಧ್ಯಯನಕ್ಕೆ ತೊಡಗಿದಂತಹ ಸಂಪಾದಕರಿಗೆ ತೃಪ್ತಿಯಾಗಲಿಲ್ಲ. ಈ ಕಾಲದಲ್ಲಿ ಸಂಪಾದನಕಾರರು ಸಂಪಾದನೆಯ ಕೃತಿಯನ್ನು ಪರಿಶೀಲಿಸಿದರು. ನಂತರ ವಿವಿಧ ನೆಲೆಯ ಅಧ್ಯಯನಗಳು ದಾರಿಗಳು ಸಂಪಾದಕರಿಗೆ ದೊರೆತವು.

ಬಿ.ಎಂ.ಶ್ರೀಕಂಠಯ್ಯನವರು 'ಗರತಿಯ ಹಾಡ'ನ್ನು ಕುರಿತು ಬರೆಯುವಾಗ ಅವರು ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸುವಾಗ ಮೂಲ ಸಾಹಿತ್ಯ ಮತ್ತು ಜನಪದ ಸಾಹಿತ್ಯದ ತಿರುಳನ್ನು ಹೇಳುತ್ತಾರೆ.

"ಪಂಡಿತರುಂ ವಿವಿಧ ಕಳಾ
ಮಂಡಿತರುಂ ಕೇಳಿತಕ್ಕ ಕೃತಿಯಂ ಕ್ಷಿತಿಯೊಳ್
ಕಂಡರ್ ಕೇಳ್ವೊಡೆ ಗೊರವರ
ದುಂಡುಚಿಯೇ ಬೀದಿವರೆಯೆ ಬೀರನ ಕತೆಯೇ?

ಎಂದು ಮಧುರ ಕವಿ ಜನಪದ ಸಾಹಿತ್ಯವನ್ನು ಕುರಿತು ಹಾಸ್ಯಗೈದಿರುವುದನ್ನು ನೋಡಬಹುದು. ಶಾಸ್ತ್ರ ಬಲದಿಂದಲೂ ಸಂಸ್ಕೃತ ಪ್ರತಿಭೆಯಿಂದಲೂ ರಚಿತವಾದ ಪ್ರೌಢಸಾಹಿತ್ಯವೇ ಸಾಹಿತ್ಯವೆಂದೂ, ಹಳ್ಳಿಗಳಲ್ಲಿ, ಬೀದಿಗಳಲ್ಲಿ, ಮನೆಗಳಲ್ಲಿ, ಜನಸಾಮಾನ್ಯರು ಹಾಡಿಕೊಳ್ಳುವ ಹಾಡುಗಳು ಸಾಹಿತ್ಯವಲ್ಲವೆಂದು ಇಂತಹ ಪಂಡಿತರ ಭಾವನೆ. ಈ ಅಭಿಪ್ರಾಯದ ಪ್ರಕಾರ ಆದಿಯಲ್ಲಿ ದೇವತಾಪ್ರೇರಣೆಯಿಂದ ಹುಟ್ಟಿದುದೇ ಕವಿತೆಯಾಗಿ ಅದು ಋಷಿಗಳಲ್ಲಿಯೂ ಮಹಾಕವಿಗಳಲ್ಲಿಯೂ ಕಾಣುವುದು. ಆ ಬಳಿಕ ಸರಸ್ವತೀ ಪ್ರಸಾದವಿಲ್ಲದ ಬರಿಯ ದುರಾಸೆಯ ದುಷ್ಕರ್ಮಿಗಳಲ್ಲಿ ತಲೆದೋರುವುದು

ಅವರ ಅಭ್ಯಾಸ ಕಟ್ಟಕಡೆಗೆ ಕಾಣಿಸಿಕೊಂಡು ಜನಗಳು ಹಾಡಿ ನಲಿಯುತ್ತಿರುವ ಬಡ ಹಾಡಂತೂ ಕವಿತ್ವವೇ ಅಲ್ಲ."[೬]

ಪಾಶ್ಚಿಮಾತ್ಯರು ಭಾರತದಲ್ಲಿ ಸಂಪಾದನೆಯ ಕಾರ್ಯವನ್ನು ನಡೆಸುವಾಗ ಅವರಿಗೆ ಈ ಜನಸಮುದಾಯವನ್ನು ಕುರಿತಂತೆ ಒಂದು ದೃಷ್ಟಿಕೋನ ಇತ್ತು. ಏನೆಂದರೆ ಇವರು ಅನಕ್ಷರಸ್ಥರು. ಜ್ಞಾನ ಇಲ್ಲದವರು. ನಮ್ಮ ನವೋದಯದ ಕೆಲವು ವಿದ್ವಾಂಸರೂ ಕೂಡ ಇದೇ ಧೋರಣೆಯನ್ನು ಜನಪದದ ಬಗ್ಗೆ ತಳೆದಿದ್ದರು. ನಂತರ ಜನಪದವು ಕೂಡ ಸಾಹಿತ್ಯ ಎಂದು ಪ್ರತಿಪಾದಿಸುವ ಪ್ರಯತ್ನದಲ್ಲಿ ವಿದ್ವಾಂಸರು ಸಂಪಾದನೆಯ ಮೂಲಕ ತೋರಿಸಿಕೊಟ್ಟರು. ಶಿಷ್ಟ ಸಾಹಿತ್ಯದ ಲಕ್ಷಣವೂ ಕೂಡ ಜನಪದ ಸಾಹಿತ್ಯದಲ್ಲಿ ಕಾಣುತ್ತದೆ ಎಂಬುದು ಸಂಪಾದನೆಯಿಂದ ತಿಳಿದುಬಂದಿದೆ.

ನಮ್ಮ ಜನಪದರು ಯಾವುದೇ ಶಾಸ್ತ್ರಪುರಾಣವನ್ನು ಓದಿದವರಲ್ಲ. ಆದರೆ ಅವರ ಅರಿವು ಅವರಿಗೆ ತಿಳಿದಿತ್ತು. ಪ್ರಾಚೀನ ಕನ್ನಡ ಕಾವ್ಯಗಳನ್ನು ಗಮನಿಸಿದಾಗ ಕವಿಗಳು ವೇದ ಶಾಸ್ತ್ರಗಳನ್ನು ಓದಿ ಕಾವ್ಯರಚನೆ ಮಾಡುತ್ತಿದ್ದರು. ಇವುಗಳೂ ಶ್ರೇಷ್ಠವಾದ ಕಾವ್ಯಗಳು ಎಂಬುದಾಗಿ ತಿಳಿದಿದ್ದರು. ಆದರೆ ಜನಪದರು ತಮ್ಮ ಹೊಲಗದ್ದೆಗಳ ಕೆಲಸದ ವೇಳೆ ಕಟ್ಟಿರುವ ಕಾವ್ಯ ಅವರ ಜ್ಞಾನಶಕ್ತಿಯನ್ನು ಮೆಚ್ಚಲೇ ಬೇಕಾಗಿದೆ. ಛಂದಸ್ಸಿನ ಮಾದರಿಯನ್ನು ಅನುಸರಿಸದೆ ಹಳ್ಳಿ ಜನರು ಹಾಡುವ ಹಾಡುಗಳಲ್ಲಿ ಲಯ, ತಾಳ, ಪ್ರಾಸ, ರಚನೆಗಳು ಇರುತ್ತಿದ್ದವು. ಜನಪದರು ಯಾವುದೇ ಕಾವ್ಯಮೀಮಾಂಸೆಯನ್ನು ಓದಿದವರಲ್ಲ. ಆದರೂ ಕಾವ್ಯದ ಬಗ್ಗೆ ಅಂತವರು ಮತ್ತು ಭಾಷೆಯ ಬಳಕೆಯನ್ನು ತಮ್ಮ ಮಾತನಾಡುವ ಶಬ್ದವನ್ನೇ ಬಳಸಿಕೊಂಡು ಪದ್ಯವನ್ನು(ಕಾವ್ಯ) ರಚನೆ ಮಾಡಿದವರು.

ಹಿಂದಿನಿಂದಲೂ ಜನಪದರು ತಾವಾಡುವ ಭಾಷೆಯಲ್ಲೇ ಹಾಡುಗಳನ್ನು ಕಟ್ಟಿದವರು. ಪೂರ್ವ ಕವಿಗಳು ಯಾವುದೇ ಒಂದು ವ್ಯಕ್ತಿಯನ್ನೋ ಒಂದು ವಸ್ತುವನ್ನು ಕುರಿತು ಒಂದು ಕಾವ್ಯವನ್ನು ರಚನೆ ಮಾಡಿ ಅಲ್ಲಿರುವ ರಾಜರ ಗೌರವಕ್ಕೆ ಪಾತ್ರರಾಗುತ್ತಿದ್ದರು. ಆದರೆ ಜನಪದರು ಯಾರೊಬ್ಬರ ಮೇಲೂ ತಮ್ಮ ಪ್ರಯೋಗವನ್ನು ಮಾಡದೇ ತಮ್ಮ ಜೀವನದ ನಡುವೆಯೇ ನಡೆದ ಘಟನೆಗಳಿಗೆ ರಾಗ ಕಟ್ಟಿ ಹಾಡುತ್ತಿದ್ದರು. ಜನರ ನಡುವೆ ಜನರೇ ಪ್ರತಿಬಿಂಬಿಸುವ ಭಾವನೆಗಳು ಹಾಡುಗಳಾಗಿದ್ದವು. ನಂತರ ದಿನ ಕಳೆದಂತೆ ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆ ಹೊಂದಿ ಇತ್ತೀಚೆಗೆ ಗ್ರಂಥಸ್ಥ ರೂಪಕ್ಕೆ ಬಂದವು. ಈ ಹಾಡುಗಳಲ್ಲಿನ ಭಾಷೆಯ ಬಳಕೆಯಲ್ಲಿ ಛಂದಸ್ಸು ಮಾತ್ರ ಸಹಜವಾಗಿಯೇ ಉಳಿದಿದೆ. ಜನಪದ ಛಂದಸ್ಸು ಸರಳ ಮತ್ತು

ಸುಲಭವಾಗಿದೆ. ಇದೇ ರೀತಿಯಾಗಿ 'ಗರತಿಯ ಹಾಡು' ತನ್ನದೆಯಾದ ಲಕ್ಷಣವನ್ನು, ರೂಪವನ್ನು ಪಡೆದುಕೊಂಡು ರಚನೆಯಾಗಿದೆ.

ದ.ರಾ.ಬೇಂದ್ರೆಯವರು ತಮ್ಮ ಕಾವ್ಯಗಳಲ್ಲಿ ಜನಪದ ಶೈಲಿಯನ್ನು ಹೆಚ್ಚಾಗಿ ಬಳಕೆ ಮಾಡಿಕೊಂಡರು. ಇವರು ಪ್ರಾರಂಭದಲ್ಲಿ ಜನಪದ ಸಂಗ್ರಹ ಮತ್ತು ಸಂಪಾದನೆ ಮಾಡುವಂತಹವರಿಗೆ ಪ್ರೋತ್ಸಾಹ ನೀಡಿದರು. ನವೋದಯ ಕಾಲದಲ್ಲಿ ತಮ್ಮ ಜನಪದ ಶೈಲಿಯಿಂದ ಓದುಗರನ್ನು ಮಂತ್ರಮುಗ್ಧರನ್ನಾಗಿಸಿದರು. 'ಗರತಿಯ ಹಾಡ'ನ್ನು ಕುರಿತು ವಿಸ್ತಾರವಾದ ಪ್ರಸ್ತಾವನೆಯನ್ನು ಬರೆದು ಹಲವು ಅಭಿಪ್ರಾಯಗಳನ್ನು ತಿಳಿಸಿದರು. “ಜೀವನವೇ ದೇವತೆಯಾದ, ತ್ರಿಪದಿ ಛಂದದಲ್ಲಿ ಹೊರಹೊಮ್ಮಿದ 'ಗರತಿಯ ಹಾಡಿ'ನ ಋಷಿಗಳು, ಹೆಣ್ಣುಮಕ್ಕಳು ನಮ್ಮ ತಾಯಿ ತಂಗಿಯರು, ಅಕ್ಕಂದಿರು, ಮಡದಿ ಮಕ್ಕಳು ಹಾಗೆ ವಿಚಾರಿಸಿ ನೋಡಿದರೆ ಅವರದೇ ನಿಜವಾದ ಕಾವ್ಯ” ಎಂಬುದಾಗಿ ಬೇಂದ್ರೆಯವರು ಜನಪದ ಕಾವ್ಯವನ್ನು ಕುರಿತು ಮಾತನಾಡುತ್ತಾರೆ. ಹಳ್ಳಿಯ ಜನರು ತಮ್ಮ ಜೀವನ ಅವಧಿಯಲ್ಲಿ ನಡೆದಿರುವ ಘಟನೆಗಳನ್ನು ಮೂರು ಸಾಲುಗಳ ಮೂಲಕ ಅಭಿವ್ಯಕ್ತಪಡಿಸಿ ತಮ್ಮ ತಾಯ್ತನ, ತವರುಮನೆ, ಅನುಭವಿಸಿದ ಕಷ್ಟನಷ್ಟಗಳನ್ನು ಕಾವ್ಯದ ಮೂಲಕ ಅಭಿವ್ಯಕ್ತಪಡಿಸಿದ್ದಾರೆ.

ಹಲಸಂಗಿ ಗೆಳೆಯರು ಸಂಗ್ರಹಿಸಿದ ಗರತಿಯ ಹಾಡಿನಲ್ಲಿ ಮಹಿಳೆಯ ಪಾತ್ರ ಪ್ರಧಾನವಾಗಿದೆ. ಈ ಗೆಳೆಯರು ಹಳ್ಳಿಗಳಲ್ಲಿ ಮಹಿಳೆಯರು ಹಾಡುವಂತಹ ಪದಗಳನ್ನು ಅವರ ಬಾಯಿಂದಲೇ ಕೇಳಿ ಅವುಗಳನ್ನು ಸಂಗ್ರಹಿಸಿರುವುದು ವಿಶೇಷ. ಬೀಸುವ ಸಮಯದಲ್ಲಿ, ಮಕ್ಕಳ ಲಾಲಿ ಹಾಡುವ ಸಮಯದಲ್ಲಿ, ಹೊಲದಲ್ಲಿ ಕೆಲಸ ಮಾಡುವಾಗ, ಶ್ರಮದಿಂದ ಬಿಡುವನ್ನು ಪಡೆದು ಸಂಜೆಯ ವೇಳೆಯಲ್ಲಿ ಸಮಯವನ್ನು ಕಳೆಯುವ ಸಂದರ್ಭದಲ್ಲಿ ಕಾವ್ಯವನ್ನು ಹಾಡುತ್ತಿದ್ದರು. ಅದರಲ್ಲೂ ಹೆಣ್ಣುಮಕ್ಕಳಿಗೆ ಚಿಕ್ಕಕೂಸುಗಳೆಂದರೆ ಸಾಕು ಸಮಯವನ್ನೇ ಮರೆತುಬಿಡುವಷ್ಟು ಖುಷಿ. ಮಕ್ಕಳ ದಿನನಿತ್ಯದ ಚಟುವಟಿಕೆಗಳನ್ನು ತಮ್ಮ ಸದಾ ಪುಂಜಿದ ಮೂಲಕ ಶೃಂಗರಿಸಿ ಪದಗಳನ್ನು ಕಟ್ಟಲಾಗಿದೆ.

ಬಾರೋ ಬಾರೋ ನನ್ನ ಬಾಲ ಚಕ್ರವರ್ತಿ
ನಾಲಿಗೆಯ ಮೇಲೆ ಸರಸೋತಿ। ಇರುವಂಥ
ಬಾಲಕ ಹಾಲ ಕುಡಿ ಬಾರೋ।[೭]

“ಗರತಿಯ ಹಾಡು ನಮ್ಮ ಸ್ತ್ರೀ ಜೀವನದ ಒಳಗನ್ನಡಿ. ನಮ್ಮ ಹೆಣ್ಣು ಮಕ್ಕಳ ಹೃದಯದ ಪಡಿಗನ್ನಡಿ. ಅದರಲ್ಲೂ ಮಮತೆಯ ಮಾಧುರ್ಯ, ಮೈವೆತ್ತಿದ ಪ್ರೇಮದ ಸತ್ಯವು ತಿಳವಟ್ಟಿದೆ”[೮] ಎಂಬುದಾಗಿ ಸಿಂಪಿಯವರು ಹೇಳಿರುವಂತಹ ಮಾತಗಳು ಗರತಿಯ ಜೀವನಕ್ಕೆ

ಸರಿಯಾಗಿ ಹೊಂದಿಕೆಯಾಗುವಂತಿವೆ. ಸುಮಾರು ೧೯೩೫ರಲ್ಲಿ ಗರತಿಯ ಹಾಡಿನ ನಂತರ ಹಲಸಂಗಿ ಗೆಳೆಯರಲ್ಲಿ ಒಬ್ಬರಾದ ರೇವಪ್ಪನವರು 'ಮಲ್ಲಿಗೆ ದಂಡೆ' ಕೃತಿಯನ್ನು ಪ್ರಕಟಣೆ ಮಾಡಿದರು. ಕನ್ನಡ ಜನಪದ ಗೀತೆಗಳ ವಿವಿಧ ರೂಪಗಳು ಈ 'ಮಲ್ಲಿಗೆ ದಂಡ' ಸಂಕಲನದಲ್ಲಿ ಕ್ರೋಢೀಕರಣಗೊಂಡಿವೆ. ಆದ್ದರಿಂದ ಇದನ್ನು ಒಂದು ಉತ್ತಮವಾದ ಕೃತಿ ಎಂದು ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಲಾಗುತ್ತದೆ. ಈ ಸಂಕಲನದಲ್ಲಿ ದೇವರಸ್ತುತಿ, ಪ್ರಣಯ, ಭಾವಗೀತೆ, ಕಥನಗೀತೆ, ಮದುವೆಯ ಹಾಡು, ಸೋಬಾನದ ಹಾಡುಗಳು, ಹಾಸ್ಯಗೀತೆಗಳು. ಹೀಗೆ ವಿವಿಧ ಲಕ್ಷಣಗಳೂ ತನ್ನಲ್ಲಿ ಅಡಕ ಮಾಡಿಕೊಂಡಿದೆ. ಇದರಲ್ಲಿ ಎರಡು, ಮೂರು ಸಾಲುಗಳಿಂದ ಕೂಡಿರುವಂತಹ ಹಾಡುಗಳು. ಜೊತೆಗೆ ಷಟ್ಪದಿ, ಸಾಂಗತ್ಯ ರೂಪದಲ್ಲಿ ಇರುವುದನ್ನು ಗಮನಿಸ ಬಹುದು. ಶಿಷ್ಟ ಸಾಹಿತ್ಯ ಹಾಗೂ ಜಾನಪದ ಸಾಹಿತ್ಯಕ್ಕೂ ಇರುವ ಸಂಬಂಧವನ್ನು, ಕಾವ್ಯ ರೂಪತೆಯನ್ನು ಎರಡರಲ್ಲೂ ಗಮನಿಸಬಹುದು.

ಕಾಪಸೆ ರೇವಪ್ಪನವರ ಶ್ರಮ ತುಂಬ ದೀರ್ಘವಾಗಿರುವಂತಹದ್ದು. ಇದರ ಜೊತೆಯಲ್ಲಿ ಮಲ್ಲಿಗೆ ದಂಡೆಯು ಜಾನಪದದಿಂದ ಜನರ ಜೀವನವನ್ನು ಸಂಗ್ರಹಿಸಿರುವಂತಹ ಮೇರು ಕೃತಿಯಲ್ಲಿ ಒಂದಾಗಿದೆ. ಈ ಮಲ್ಲಿಗೆ ದಂಡೆಯ ಕೃತಿಯನ್ನು ಕುರಿತು ಮಧುರಚೆನ್ನ ಅವರು ತಮ್ಮದೆ ಆದ ಅಭಿಪ್ರಾಯವನ್ನು ನೀಡಿದ್ದಾರೆ. ಜಾನಪದ ಅಧ್ಯಯನದ ಮೊದಲ ಹೆಜ್ಜೆ ಆರಂಭವಾಗಿದ್ದು ನವೋದಯದ ಸಮಯದಲ್ಲಿ. ಅಂದರೆ ೧೯೧೯-೧೯೨೦ರ ಸುಮಾರಿನಲ್ಲಿ ಈ ಸಂದರ್ಭದಲ್ಲಿ ನಮ್ಮ ಜನಪದ ಆಸಕ್ತರು ಶಿಷ್ಟ ಕನ್ನಡ ಸಾಹಿತ್ಯದಂತೆ ಜನಪದ ಸಾಹಿತ್ಯವು ಪ್ರಮುಖವಾಗಿರುವಂತಹದ್ದು ಎಂಬುದನ್ನು ಅರಿತು ಜಾನಪದ ಅಧ್ಯಯನದಲ್ಲಿ ತೊಡಗಿದರು. ಈ ಸಮಯದಲ್ಲಿ ಕೆಲವು ವಿದ್ವಾಂಸರು ಇವರ ಆಸಕ್ತಿಯನ್ನು ಕುಂಠಿತಗೊಳಿಸುತ್ತಾರೆ. ಯಾವುದೇ ಕೃತಿ ಕಾವ್ಯ ರಚನೆಯನ್ನು ಮಾಡಬೇಕಾದರೆ, ವೇದಶಾಸ್ತ್ರಗಳ ಅರಿವು ಇರಬೇಕು ಎಂಬ ಮಾತನ್ನು ಕೆಲವು ಬುದ್ಧಿವಂತ ವಿದ್ವಾಂಸರು ಬಲಪಂಥೀಯ ಚಿಂತನೆಯನ್ನು ಮಾಡಿರುವುದನ್ನು ಗಮನಿಸಬಹುದು. ಪೂರ್ವದಲ್ಲಿಯೇ ಶ್ರೀವಿಜಯನು ತನ್ನ ಕವಿರಾಜಮಾರ್ಗದಲ್ಲಿ ಜನಪದ ಮೂಲವನ್ನು ಕನ್ನಡಿಗರ ಗಾಂಭೀರ್ಯತೆಯನ್ನು ತನ್ನ ಕೃತಿಯಲ್ಲಿ ತಿಳಿಸಿರುವುದನ್ನು ಈ ಸಮಯದಲ್ಲಿ ನೆನಪಿಸಿಕೊಳ್ಳಬಹುದು.

ಕನ್ನಡ ಜಾನಪದ ಸಾಹಿತ್ಯ ಲೋಕದಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರರೂ ಒಬ್ಬರು. ಇವರು ಗ್ರಾಮಜೀವನದ ವೈವಿಧ್ಯವನ್ನು ಸಾಧಿಸಿದವರಲ್ಲಿ ಪ್ರಮುಖರು. ಇವರು ಗ್ರಾಮಜೀವನದ ಅನುಭವವನ್ನು ಪಡೆದವರು. ಗೊರೂರರು ಜಾನಪದ ಸಾಹಿತ್ಯದೊಡನೆ ಜೀವಂತ ಸಂಬಂಧವನ್ನು ಹಂಚಿಕೊಂಡವರಲ್ಲಿ ಒಬ್ಬರು. ಜಾನಪದ ಸಾಹಿತ್ಯವನ್ನು ಸಂಗ್ರಹಿಸಿ,

ಅವುಗಳನ್ನು ಸಂಪಾದಿಸಿ, ತಾವು ತಿಳಿದಂತೆ ಜನಪದದ ಬಗ್ಗೆ ಬೇರೆಯವರಿಗೆ ತಿಳಿಸಬೇಕೆಂದು ಪ್ರಚಾರಕಾರ್ಯದಲ್ಲಿ ತೊಡಗಿದಂತವರು. ಗೊರೂರು ಕೇವಲ ಒಬ್ಬ ಸಂಗ್ರಹಕರಾಗಿ ಮಾತ್ರ ಹೆಸರನ್ನು ಮಾಡಿದವರಲ್ಲ. ಇವರು ಜನಪದ ಸಾಹಿತ್ಯವನ್ನು ಕುರಿತಂತೆ ಚಿಂತನೆಯನ್ನು ಮಾತನಾಡಬಲ್ಲ ವಿದ್ವಾಂಸರು. ಇವರು ಜನಪದ ಗೀತೆಗಳನ್ನು ರಸವತ್ತಾಗಿ ಹಾಡುತ್ತಿದ್ದರು ಎಂಬುದಾಗಿ ಕೆಲವು ವಿದ್ವಾಂಸರು ತಿಳಿಸಿದ್ದಾರೆ.

"ಬಂಡಿಕಾರಣ್ಣನ ಬಂಡಾಟ ನೋಡಿಕೊ
ಬಾರುಕೋಲವನ ಬಲಗೈಲಿ–ಹಿಡಕೊಂಡು
ಬೋರಾಡಿ ಬಂಡಿ ಹೊಡೆದವನೆ"[೯]

ಇವರು ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹಲವಾರು ಪ್ರಕಟಣೆ ಕೈಗೊಂಡರು. ಮೊದಲು ಜನಪದ ಸಂಪಾದನೆಯಲ್ಲಿ 'ಹಳ್ಳಿಯ ಹಾಡುಗಳು' ಮತ್ತು 'ಹಳ್ಳಿಯ ಬಾಳು' ೧೯೩೮ರಲ್ಲಿ ಪ್ರಕಟಗೊಂಡವು. ಇವು ಗೊರೂರು ಅವರ ಮಹತ್ವದ ಜನಪದ ಕೃತಿಯಾಗಿವೆ. ಸುಮಾರು ೧೯೩೦ರಿಂದ ೧೯೪೦ರ ಅವಧಿಯಲ್ಲಿ ಕನ್ನಡ ಜನಪದಗೀತ ಸಂಗ್ರಹದ ಒಂದು ಯುಗವೇ ಆರಂಭವಾಯಿತು ಎಂಬುದಾಗಿ ಹೇಳಬಹುದು. ಕನ್ನಡ ಸಾಹಿತ್ಯದ ನವೋದಯ ಕಾಲದ ಸಾಹಿತ್ಯದ ಭಿನ್ನತೆಯನ್ನು ಈ ಅವಧಿಯಲ್ಲಿ ಗುರುತಿಸಬಹುದು. "ಜನಪದ ಸಾಹಿತ್ಯ ಮುಂಗೋಳಿ ಕೂಗಿದ್ದು ಈ ದಿನಗಳಲ್ಲೆ."[೧೦] ಈ ಸಂದರ್ಭದಲ್ಲಿ ಸಾಹಿತ್ಯದ ಅನೇಕ ವಿದ್ವಾಂಸರು ತಮ್ಮ ದೃಷ್ಟಿಯನ್ನು ಜನಪದ ಕಡೆಗೆ ಮೂಡಿಸಿದ್ದರು. ಇವರಲ್ಲಿ ಮಧುರಚೆನ್ನ, ದ.ರಾ.ಬೇಂದ್ರೆ, ಸಿಂಪಿ ಲಿಂಗಣ್ಣ, ದೇವುಡು, ಮತಿಘಟ್ಟ ಕೃಷ್ಣಮೂರ್ತಿ ಮುಂತಾದವರು. ಇವರು ಒಂದಲ್ಲ ಒಂದು ಬಗೆಯಲ್ಲಿ ಜನಪದ ಸಾಹಿತ್ಯವನ್ನು ಗುರುತಿಸಿದವರು. ೧೯೩೦ರ ಅವಧಿಯಲ್ಲಿ ಗರತಿಯ ಹಾಡು ಕನ್ನಡ ಜನಪದ ಗೀತಸಂಕಲನವಾಗಿ ಹೊರಹೊಮ್ಮಿತು. ಉತ್ತರ ಕರ್ನಾಟಕದ ವೈವಿಧ್ಯಮಯ ಸಂಪಾದನೆಯ ಕಾರ್ಯವನ್ನು ನಡೆಸಿ, 'ಮಲ್ಲಿಗೆ ದಂಡೆ', ಜೀವನ ೧೯೩೫ರ ಅವಧಿಯಲ್ಲಿ ಪ್ರಕಟಗೊಂಡವು. ಈ ಸಂಪಾದನೆಯ ಕಾರ್ಯ ಧಾರವಾಡದ ಕಡೆ ಹೆಚ್ಚು ಮಹತ್ವವೆನಿಸಿದವು. ಈ ಸಮಯದಲ್ಲಿ ಅಂದರೆ ಸುಮಾರು ೧೯೩೩ರಲ್ಲಿ ಅರ್ಚಕ ರಂಗಸ್ವಾಮಿ ಅವರು ಹುಟ್ಟಿದ ಹಳ್ಳಿಯ ಹಾಡು ಎಂಬಂತಹ ಸಂಕಲನವನ್ನು ದಕ್ಷಿಣ ಕರ್ನಾಟಕದ ಮೈಸೂರು ಭಾಗದ ಕೆಲವು ಪ್ರದೇಶವನ್ನು ಕುರಿತಂತೆ ಸಂಪಾದನೆಯನ್ನು ಮಾಡಿದರು. ಇವರು ಜಾನಪದ ಅಧ್ಯಯನ ಕ್ಷೇತ್ರದಲ್ಲಿ ಸಾಕಷ್ಟು ವೈಜ್ಞಾನಿಕ ದೃಷ್ಟಿ ಬೆಳೆಸಿದ್ದಾರೆ. ಇವರು ಗ್ರಾಮ ಪ್ರದೇಶದ ಜನಪದಕ್ಕೆ ಹೆಚ್ಚು ಆಸಕ್ತಿಯನ್ನು ತೋರಿದಂತವರು.

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು 'ಹುಟ್ಟಿದ ಹಳ್ಳಿ' 'ಹಳ್ಳಿಯ ಹಾಡು' ಪ್ರಕಟವಾಗಿ ಕೆಲವು ವರ್ಷಗಳ ಕಾಲ ಗ್ರಾಮಸಂಸ್ಕೃತಿಯನ್ನು ತಿಳಿಸುವಂತಹ ಒಂದು ದೊಡ್ಡ

ರೂಪವನ್ನು ಪಡೆದುಕೊಂಡ ಮೌಲ್ಯಯುತವಾದ ಕೃತಿಯಾಗಿದೆ. ಜನಪದ ಗೀತೆಗಳನ್ನು ಆ ಕೃತಿಯ ಒಂದು ಭಾಗವಾಗಿ ಮಾತ್ರ ಅಳವಡಿಸಲಾಗಿತ್ತು. ಇದು ಉತ್ತರ ಕರ್ನಾಟಕ ಜನಪದ ಸಂಕಲನಗಳಿಗಿಂತ ದಕ್ಷಿಣ ಕರ್ನಾಟಕದ ಪ್ರಾತಿನಿಧಿಕ ಸಂಪಾದನೆಯ ಕೃತಿಯಾಗಿತ್ತು. ಗೊರೂರು, ಕೃಷ್ಣಯ್ಯಂಗಾರ್ಯರು ಮತ್ತು ರಂಗಸ್ವಾಮಿಯವರು ಸೇರಿಸಿಕೊಂಡು ೧೯೪೦ರ ಅವಧಿಯ್ಲಲಿ 'ಹಳ್ಳಿಯ ಪದಗಳು' ಎಂಬ ಮುಖ್ಯ ಕೃತಿಯೊಂದನ್ನು ಸಂಪಾದನೆ ಮಾಡಿ ಪ್ರಕಟಿಸಿದರು.

ಹಳ್ಳಿಯ ಹಾಡುಗಳನ್ನು ಸಂಗ್ರಹಿಸಲು ಹೆಣಗುವಂತಹ ವಿದ್ವಾಂಸರಿಗೆ ಅವರು ಸಂಗ್ರಹಣೆಯ ಕಾರ್ಯದಲ್ಲಿ ಯಾವ ಯಾವ ಕಾರ್ಯವನ್ನು ಕೈಗೊಳ್ಳಬೇಕು ಎಂಬುದನ್ನು ಗೊರೂರುರವರು ತಿಳಿಸಿದ್ದಾರೆ. ಸಂಪಾದನೆಯ ಕಾರ್ಯದಲ್ಲಿ ತೊಡಗುವವರು ಮೊದಲು ಸ್ಥಳ ಪುರಾಣಗಳನ್ನು, ಆ ನಂತರ ಅಲ್ಲಿ ಇರುವಂತಹ ಕಟ್ಟುಕಥೆಗಳನ್ನು, ಅವರ ನಂಬಿಕೆಯ ಕುರಿತು ಇರುವಂತಹ ಭಾಷೆಯನ್ನು ಚೆನ್ನಾಗಿ ಅರಿತಿರಬೇಕು. ಕ್ಷೇತ್ರಕಾರ್ಯವನ್ನು ಮಾಡುವಂತವನಿಗೆ ಬರೀ ಉತ್ಸಾಹವೊಂದೇ ಇದ್ದರೆ ಸಾಲದು. ಅವನು ತನ್ನ ಸಂಗ್ರಹಣೆಯ ಕಾರ್ಯದಲ್ಲಿ ಹೇಗೆ ತನ್ನನ್ನು ತಾನು ತೊಡಗಿಸಿಕೊಳ್ಳಬೇಕು ಎಂಬುದು ಮುಖ್ಯವಾಗಿರುತ್ತದೆ. "ತಾನು ಆರಿಸಿಕೊಂಡ ಪ್ರದೇಶ ಜನರ ನಡೆನುಡಿಗಳ ಪರಿಚಯ ಅವನಿಗೆ ಸರಿಯಾಗಿಲ್ಲದಿದ್ದರೆ ಸಂಗ್ರಹ ಕಾರ್ಯದಲ್ಲಿ ಅವನು ಸೋಲನ್ನು ಅನುಭವಿಸುತ್ತಾನೆ. ಒಂದೊಂದು ಸ್ಥಳದ ಜಾಯಮಾನವನ್ನು, ಜನರ ರೀತಿ ನೀತಿಯನ್ನು ಅಭ್ಯಾಸ ಮಾಡಿಕೊಂಡು ಅವನು ಕ್ಷೇತ್ರವನ್ನು ಪ್ರವೇಶಿಸಬೇಕು. ಅಲ್ಲಿನ ಭಾಷೆಯ ಸಮರ್ಪಕ ಪರಿಚಯವಂತೂ ಅವನಿಗೆ ಅತ್ಯಗತ್ಯ ಎಂಬ ಅಂಶವನ್ನು ಗೊರೂರರು ಸರಿಯಾಗಿಯೇ ಇಲ್ಲಿ ಗುರುತಿಸಿದ್ದಾರೆ."[೧೧] ಹೀಗೆ ಗೊರೂರರು ಜನಪದ ಕ್ಷೇತ್ರದಲ್ಲಿ ಹೆಚ್ಚು ಕೃಷಿಯನ್ನು ಮಾಡಿರುವುದು ಮಹತ್ವ ಪೂರ್ಣ ವಿಷಯವಾಗಿದೆ.

ಜನಪದ ಸಂಪಾದನೆಯ ಕಾರ್ಯದಲ್ಲಿ ತೊಡಗಿದ ಮತ್ತೊಬ್ಬ ವಿದ್ವಾಂಸರೆಂದರೆ ಸಿಂಪಿ ಲಿಂಗಣ್ಣನವರು. ಇವರು ೧೯೩೩ರಲ್ಲಿ ಸಂಗ್ರಹಿಸಿ ಪ್ರಕಟಿಸಿದ 'ಜೀವನ ಸಂಗೀತ' ಜನಪದಕ್ಕೆ ನೀಡಿದ ಶ್ರೇಷ್ಠ ಕೃತಿಯಾಗಿದೆ. ಇವು ಲಾವಣಿಯ ರೂಪದಲ್ಲಿ ಬಂದಿರುವುದನ್ನು ಗಮನಿಸಿದರೆ ಕನ್ನಡ ಜನಪದ ಸಾಹಿತ್ಯಕ್ಕೆ ಮತ್ತೊಂದು ಲಾವಣಿಯ ಪರಿಚಯವಾಗಿರುವುದು ವಿಶಿಷ್ಟವಾಗಿದೆ. ಜನಪದ ಸಾಹಿತ್ಯದ ಇತಿಹಾಸದಲ್ಲಿ ಹಲಸಂಗಿ ಸೋದರರ ಹೆಸರು ಮರೆಯುವಂತಿಲ್ಲ. ಇವರು ಅದ್ವಿತೀಯ ಜನಪದ ಗೀತೆಗಳನ್ನು ಸಂಗ್ರಹಿಸಿದ್ದಾರೆ. ಕರ್ನಾಟಕದಲ್ಲಿ ಜನಪದ ತ್ರಿಪದಿಗಳು ಮತ್ತು ಲಾವಣಿಗಳು ಹೆಚ್ಚು ಸಂಗ್ರಹವಾಗಿದು, ಉತ್ತರ ಕರ್ನಾಟಕ ಪ್ರದೇಶದಲ್ಲಿ ಜನಪದ ಸಾಹಿತ್ಯ ಹೆಚ್ಚಾಗಿ ಸಂಗ್ರಹಣೆಯಾಗಿದೆ., ೧೯೩೩ರಲ್ಲಿ 'ಹಳೆಯಹಾಡುಗಳು' ಎಂಬ ಸುಂದರ ಜನಪದ ತ್ರಿಪದಿಗಳು ಸಂಪಾದನೆಗೊಂಡವು. ಜನಪದ ಸಾಹಿತ್ಯದ ಸೊಗಸಿಗೆ

ಸೌಂದರ್ಯಕ್ಕೆ ಮರುಳಾದ ಜನಪದ ವಿದ್ವಾಂಸರು ಉತ್ತರ ಕರ್ನಾಟಕದ ಸುತ್ತಮುತ್ತಲಿನ ಹಳ್ಳಿಯಲ್ಲಿ ತಮ್ಮ ಸಂಪಾದನೆಯ ಕಾರ್ಯವನ್ನು ಕೈಗೊಂಡರು. ಇದರಲ್ಲಿ ಸಿಂಪಿ ಲಿಂಗಣ್ಣನವರು ಕೂಡ ಪ್ರಮುಖರು. ಇವರು ಉತ್ತರ ಕರ್ನಾಟಕದ ಕೆಲವು ಭಾಗವನ್ನು ತಮ್ಮ ಅಧ್ಯಯನಕ್ಕೆ ಬಳಸಿಕೊಂಡು ಅಲ್ಲಿನ ಜನಪದವನ್ನು ಸಂಗ್ರಹಿಸಿದ್ದಾರೆ.

ಕನ್ನಡ ಜನಪದ ಸಾಹಿತ್ಯ ಸಂಪಾದನೆಯ ಕಾರ್ಯದಲ್ಲಿ ತೊಡಗಿದ ಮತ್ತೊಬ್ಬ ಜನಪದ ವಿದ್ವಾಂಸ ಅರ್ಚಕ ಬಿ.ಎನ್.ರಂಗಸ್ವಾಮಿಯವರು. ಇವರು ಸುಮಾರು ೧೯೩೩ರಲ್ಲಿಯೇ 'ಹಳ್ಳಿಯ ಹಾಡು' ಹುಟ್ಟಿದ ಹಳ್ಳಿಯ ಹಾಡು, ಕೃತಿಗಳ ಲೋಕಾರ್ಪಣೆ ಗೊಂಡಿದ್ದವು. ರಂಗಸ್ವಾಮಿಯವರದು ದಿನನಿತ್ಯ ಸಾಹಿತ್ಯದ ಕಾರ್ಯವನ್ನು ಮಾಡುತ್ತಿದ್ದವರು. ಅದರಲ್ಲೂ ಪತ್ರಿಕೆಯಲ್ಲಿ ಬರುವಂತಹ ಲೇಖನಗಳನ್ನು ಓದಿ ಮಹತ್ವದ ವಿಚಾರಗಳನ್ನು ಕುತೂಹಲದಿಂದ ಓದಿ ಅವುಗಳನ್ನು ಚರ್ಚೆಗಳಿಗೆ ಒಳಪಡಿಸಿಕೊಳ್ಳುತ್ತಿದ್ದರು. ಇರುವಾಗಲೇ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾಗಿದ್ದ 'ಪಾಮರ ಸಾಹಿತ್ಯ'ವನ್ನು ಉದಾಸೀನ ಮಾಡಬೇಡಿ" ಎಂಬ ಲೇಖನವೊಂದನ್ನು ಓದಿ ಇದರಿಂದ ಪ್ರೇರಣೆಯನ್ನು ಪಡೆದ ಅರ್ಚಕ ರಂಗಸ್ವಾಮಿಯವರು ತಮ್ಮ ಬಲವನ್ನು ಜನಪದದ ಕಡೆ ಹರಿಯಬಿಟ್ಟರು. ಜನಪದ ಅಧ್ಯಯನದ ಕಡೆ ಹಾಗೂ ಸಂಪಾದನೆಯ ಕಾರ್ಯದ ಕಡೆಗೆ ಗಮನವನ್ನು ಹರಿಸಿದರು.

ಅರ್ಚಕ ರಂಗಸ್ವಾಮಿಯವರು ತಮ್ಮ ಅಭಿಪ್ರಾಯದಂತೆ ನಾವು ಬೇರೆಯವರ ಜನಪದವನ್ನು ಅಧ್ಯಯನ ಮಾಡುವ ಮೊದಲು ನಮ್ಮಲ್ಲಿರುವ ಜನಪದವನ್ನು ಮೊದಲು ತಿಳಿದರೆ ಮಾತ್ರ ಬೇರೊಂದು ಅಧ್ಯಯನದಲ್ಲಿ ಕೈಗೊಳ್ಳಲು ಸೂಕ್ತ ಎಂಬುದಾಗಿ ತಿಳಿದು ಇದರಿಂದ ತಮ್ಮ ಹಳ್ಳಿಯ ಸುತ್ತಮುತ್ತಲಿನ ಮತ್ತು ಅಲ್ಲಿನ ಸಂಬಂಧಪಟ್ಟಂತಹ ಜನರ ಜೀವನದ ಜನಪದವನ್ನು ಅಧ್ಯಯನ ಮಾಡಲು ಮುಂದಾದರು. ಇದರಿಂದ ಅವರ ಹಳ್ಳಿಯ ಅನೇಕ ಜನಪದ ವಿಷಯಗಳು ಬೆಳಕಿಗೆ ಬಂದವು. ಅರ್ಚಕ ಬಿ.ಎನ್.ರಂಗಸ್ವಾಮಿಯವರು ತಮ್ಮ ಊರನ್ನೆ ಕೇಂದ್ರವಾಗಿ ಮಾಡಿಕೊಂಡು ಸಂಗ್ರಹದ ಕೆಲಸದಲ್ಲಿ ತೊಡಗಿದರು. ಅಲ್ಲಿನ ಹಳ್ಳಿಯ ವಿವಿಧ ಸಮಾಜದ, ಜನಾಂಗದ ಜಾತಿಯ, ಅಲ್ಲಿನ ನಡೆನುಡಿ, ಆಚಾರ, ವಿಚಾರಗಳು, ಹಬ್ಬ ಹರಿದಿನಗಳು, ಕಲೆ, ಸಾಹಿತ್ಯ, ಬಡತನ, ಗ್ರಾಮದಲ್ಲಿ ಇರುವ ಆ ಹಾಡು, ಮಾತು, ಸಂಸ್ಕೃತಿ, ಸಂಸ್ಕಾರ. ಜನರ ಜೀವನಕ್ರಮ, ಪುರಾಣ, ಸಾಮಾಜಿಕ ವಿಷಯಗಳು ಹೀಗೆ ಹತ್ತು ಹಲವಾರು ವಿಷಯಗಳ ಒಂದು ಅರ್ಥಪೂರ್ಣವಾದ ಸಂಪಾದನೆಯ ಕಾರ್ಯದಲ್ಲಿ ತೊಡಗಿದರು. ಪ್ರತಿಯೊಬ್ಬ ಜನಪದ ಸಾಹಿತ್ಯ ಸಂಗ್ರಹಕಾರನಿಗೂ ಈ ರೀತಿಯ ಸ್ಥಳೀಯ ಊರಿನ ಪ್ರೀತಿಯು ಇರಬೇಕು. ಅರ್ಚಕ ರಂಗಸ್ವಾಮಿಯವರು ಗ್ರಾಮದ ಜನಪದರ ಜೀವನದ ಸಮಗ್ರ ಚಿತ್ರಣವನ್ನು

ತಮ್ಮ ಸಂಪಾದನೆಯ ಕಾರ್ಯದಲ್ಲಿ ತೋರಿಸಿಕೊಟ್ಟಿದ್ದಾರೆ. ಜೊತೆಯಲ್ಲಿ ತಮ್ಮೂರ ಗ್ರಾಮದೇವತೆಗಳಿಗೆ ಸಂಬಂಧಪಟ್ಟಿರುವಂತೆ ಕೆಲವು ಅಧ್ಯಯನಗಳನ್ನು ಮಾಡಿ ದೇವರುಗಳಿಗೆ ನಡೆಯುವ ಕಾರ್ಯ, ಹಬ್ಬ, ಆಚರಣೆ, ಜಾತ್ರೆಯಂಥ ಅಂಶವನ್ನು ತಮ್ಮ ಸಂಪಾದನೆಯ ಅವಧಿಯಲ್ಲಿ ಗುರುತಿಸಿದ್ದಾರೆ.

ಮೊದಲ ಘಟ್ಟದ ಜನಪದ ಸಾಹಿತ್ಯ ಸಂಗ್ರಹಕಾರಲ್ಲಿ ಅರ್ಚಕ ರಂಗಸ್ವಾಮಿಯಂತೆ ಗೊರೂರು, ಸಿಂಪಿ ಲಿಂಗಣ್ಣ, ಕಾಪಸೆ ರೇವಪ್ಪರಂತೆ ದೇವುಡು ಅವರು ಕೂಡ ಜನಪದದ ಬೆಳವಣಿಗೆಗೆ ಮತ್ತು ಸಂಪಾದನೆಗೆ ಪ್ರೋತ್ಸಾಹ ನೀಡಿದಂತವರು. ಇವರು ಸಹ ನಾವು ಜನಪದ ಸಂಗ್ರಹಣೆಯಲ್ಲಿ ನೆನೆಯಬೇಕಾಗುತ್ತದೆ. ಇವರು 'ಕರ್ನಾಟಕ ಸಂಸ್ಕೃತಿ' ಲೇಖನವು ವಿವಿಧ ಆಯಾಮಗಳಿಂದ ಜನಪದಕ್ಕೆ ಉಪಯುಕ್ತವಾಗಿವೆ.ಇದು ಜನಪದ ಸಾಹಿತ್ಯದ ವಿವಿಧ ಮುಖಗಳನ್ನು ಪರಿಚಯಿಸುತ್ತದೆ. ಜನಪದವನ್ನು ಒಂದು ಸಾಹಿತ್ಯವೆಂದು ಚರ್ಚಿಸುತ್ತಾ ಮೂಲಸಂಸ್ಕೃತಿಯನ್ನು ತಿಳಿಯಲು ಪ್ರಯತ್ನಿಸಿದ್ದಾರೆ. ಇದರ ನಡುವೆಯು ವಿದ್ವಾಂಸರು ಅವರೊಂದಿಗೆ ಸ್ಪಂದಿಸಿದ್ದಾರೆ. ೧೯೪೩ರಲ್ಲಿ ಪ್ರಕಟವಾಗಿರುವ 'ಹಳ್ಳಿಯ ಬಾಳು' ಸಂಕಲನದಲ್ಲಿ ಗೊರೂರು ರಾಮಸ್ವಾಮಿಯವರು ಹಳ್ಳಿಯ ಜನರ ಕೃಷಿಗೆ ಸಂಬಂಧಿಸಿದಂತೆ ರೈತರಿಗೆ ಸಂಬಂಧಪಟ್ಟಿರು ಗೀತೆಗಳನ್ನು ಸಂಗ್ರಹ ಮಾಡಿರುವುದನ್ನು ಗಮನಿಸಬಹುದು. 'ಅನ್ನ, ನೀರು, ಕಾವ್ಯ' ಎಂಬ ಲೇಖನದಲ್ಲಿ ಗ್ರಾಮೀಣ ಪ್ರದೇಶದ ಜನರ ಜೀವನ ಮತ್ತು ಅವರ ಬದುಕನ್ನು ಕುರಿತಂತೆ ದಿನನಿತ್ಯದ ಜೀವನದ ಕೃಷಿಯಲ್ಲಿ ತೊಡಗಿರುವ ರೈತನನ್ನು ಮೂಲವಾಗಿ ಇಟ್ಟುಕೊಂಡು ಗೀತೆಗಳನ್ನು ಸಂಗ್ರಹಿಸಿರುವ ಕೀರ್ತಿ ಗೊರೂರು ಅವರಿಗೆ ಸಲ್ಲುತ್ತದೆ.

ಮೊದಲಘಟ್ಟದ ಜನಪದ ಸಾಹಿತ್ಯ ಸಂಪಾದನೆಯ ಕಾರ್ಯವು ಯಶಸ್ವಿಯಾಗಿ ಹೆಚ್ಚು ಮಹತ್ವವನ್ನು ಪಡೆದು, ಪ್ರಕಟಣೆಗೊಂಡವು. ಈ ಸಂಕಲನಗಳು ವಿವಿಧ ವಿದ್ವಾಂಸರಿಂದ ಪರಿಷ್ಕರಣೆಗೊಂಡು ಶ್ರಮದಿಂದ ತೊಡಗಿ ಕಷ್ಟವಾದರೂ ತುಂಬ ಪ್ರೀತಿಯಿಂದ ಜನಪದ ಸಂಪಾದನೆಯ ಕಾರ್ಯವನ್ನು ಮಾಡಿರುವುದನ್ನು ಗಮನಿಸಬಹುದು. ಈ ಕಾಲಾಅವಧಿಯಲ್ಲಿ ಬೆರಳೆಣಿಕೆಯಷ್ಟು ಕೃತಿಗಳು ಸಂಪಾದನೆಯಾದರೂ ಜನಪದ ಸಾಹಿತ್ಯದ ಮಹತ್ವವನ್ನು ಹೆಚ್ಚಿಸಿವೆ. ನವೋದಯ ಕಾಲದಲ್ಲಿ ತಲೆಯೆತ್ತಿಕೊಂಡ ಭಾವಗೀತೆಗಳ ವರ್ಣರಂಜಿತ ಪ್ರಪಂಚದಂತೆಯೇ ಜನಪದ ಭಾವಗೀತೆಗಳು ತಮ್ಮ ವೈಶಿಷ್ಟ್ಯವನ್ನು ಕಾಪಾಡಿಕೊಂಡು ಹೆಚ್ಚು ಭಾವಗೀತೆ ಎನ್ನುವ ಸಾಹಿತ್ಯ ಪ್ರಕಾರವೊಂದು ಹುಟ್ಟಿಕೊಳ್ಳುವ ಪೂರ್ವದಲ್ಲಿ ಹಲವಾರು ವರ್ಷಗಳಿಂದ ಕನ್ನಡದಲ್ಲಿ ಸುಂದರ ರಸ ಭಾವಗೀತೆಗಳು ಇದ್ದವು ಎನ್ನುವುದಕ್ಕೆ ನಮ್ಮ ಜನಪದ ಸಾಹಿತ್ಯದಲ್ಲಿ ಸಂಪಾದನೆಯ ಕಾರ್ಯದಿಂದ ಜನಪದವನ್ನು ಶ್ರೀಮಂತಗೊಳಿಸಿದ್ದಾರೆ.

ಒಟ್ಟಾರೆಯಾಗಿ ಮೊದಲ ಸಂಪಾದನೆಯ ಕಾರ್ಯವು ಜನಪದವನ್ನು ಸಾಹಿತ್ಯ ಎಂದು ಪ್ರತಿನಿಧಿಸುವ ಪ್ರಯತ್ನದಲ್ಲಿ ವಿದ್ವಾಂಸರು ತೊಡಗಿದರು. ಅಕ್ಷರಸ್ಥರ ಅಲ್ಲದಿದ್ದರೂ ಅವರ ಜೀವನ ಅನುಭವದಲ್ಲಿ ಜನಪದ ಸಾಹಿತ್ಯ ಪ್ರಕಾರದ ಹುಟ್ಟುವಿಕೆಯಲ್ಲಿ ಸಂವೃದ್ಧಿಯಾಗಿದ್ದರು. ನವೋದಯ ಕಾಲದಲ್ಲಿ ಶಿಷ್ಟ ಸಾಹಿತ್ಯ ಲಕ್ಷಣಗಳನ್ನು ಈ ಜನಪದ ಸಾಹಿತ್ಯದಲ್ಲಿಯೂ ಕಾಣುತ್ತೇವೆ ಎಂಬುದಾಗಿ ಈ ಸಾಹಿತ್ಯದ ಸಂಪಾದಕರಿಗೆ ತಿಳಿದು, ಶಿಷ್ಟಕಾವ್ಯ ಲಕ್ಷಣಗಳು ಜನಪದ ಕಾವ್ಯದಲ್ಲಿ ಎಂಬುದನ್ನು ಪ್ರತಿನಿಧಿಸುವುದರ ಮೂಲಕ ಕರ್ನಾಟಕದಲ್ಲಿ ವಿದ್ವಾಂಸರು ಸಂಪಾದನೆಯ ಕಾರ್ಯದಲ್ಲಿ ತೊಡಗಿದರು. ಇದು ಸ್ವಾತಂತ್ರ್ಯದ ವೇಳೆಗೆ ಯಶಸ್ವಿಯಾದ ಸಂಪಾದನೆಯ ಕಾರ್ಯವನ್ನು ಕೈಗೊಂಡು ಹಲವಾರು ಕಾವ್ಯ ಸಂಕಲನಗಳನ್ನು ಪ್ರಕಟಪಡಿಸಿದರು. ಇದು ಮೊದಲ ಘಟ್ಟದ ಸಂಪಾದನೆಯ ಕಾರ್ಯವಾಗಿದೆ.

ಕೊನೆ ಟಿಪ್ಪಣಿ

೧. ಸುವರ್ಣ ಜಾನಪದ ಸಂಪುಟ ೧೩

೨. ಜೀ.ಶಂ.ಪ., ಜಾನಪದ ಬರಹಗಳು, ಪು.೧೪೩

೩. ಹೊನ್ನ ಬೀತೆವು ಹೊಲಕೆಲ್ಲ, ಪು.೪೬೯

೪. ಅದೇ, ಪು.೪೭೦

೫. ಅದೇ, ಪು.೪೭೧

೬. ಗರತಿಯ ಹಾಡು, ಪು.೫

೭. ಗರತಿಯ ಹಾಡು, ಪು.೭

೮. ಜೀ.ಶಂ.ಪ., ಜಾನಪದ ಕೆಲವು ಮುಖಗಳು, ಪು.೧೪೭

೯. ಹಳ್ಳಿಯ ಹಾಡು, ಪು.೪೮

೧೦. ಜೀ.ಶಂ.ಪ., ಜಾನಪದ ಕೆಲವು ಮುಖಗಳು, ಪು.೩೫೩

೧೧. ಅದೇ, ಪು.೩೫೫

ಅಧ್ಯಾಯ ನಾಲ್ಕು

ಎರಡನೇ ಘಟ್ಟದ ಸಂಪಾದನೆಯ ಹಿಂದಿನ ತಾತ್ವಿಕತೆ

ಅಧ್ಯಾಯ ನಾಲ್ಕು

ಎರಡನೇ ಘಟ್ಟದ ಸಂಪಾದನೆಯ ಹಿಂದಿನ ತಾತ್ವಿಕತೆ

ಜನಪದ ಸಂಪಾದನೆಯ ಕಾರ್ಯವು ಮೊದಲನೆಯ ಹಂತದಲ್ಲಿ ನವೋದಯ ಸಾಹಿತ್ಯದ ಪ್ರೇರಣೆಯಿಂದ ಮಹತ್ವಪೂರ್ಣವಾಗಿ ನಡೆಯಿತು. ಎರಡನೇ ಹಂತದ ಸಂಪಾದನೆಯ ಕಾರ್ಯವು ಸ್ವಾತಂತ್ರ್ಯಾ ನಂತರ ತನ್ನದೆಯಾದ ನೆಲೆಯನ್ನು ಪಡೆದುಕೊಂಡಿತು. ಮೊದಲಘಟ್ಟದ ಜನಪದವನ್ನು ಸ್ವಾತಂತ್ರ್ಯಾ ಪೂರ್ವ ಎಂತಲೂ, ಎರಡನೆಯ ಹಂತದ ಸಂಪಾದನೆಯನ್ನು ಸ್ವಾತಂತ್ರ್ಯಾನಂತರ ಕಾಲ ಎಂಬುದಾಗಿ ಕರೆಯಬಹುದು. ಜನಪದ ಅಧ್ಯಯನ ಕ್ಷೇತ್ರ ಒಂದು ಕಾಲಘಟ್ಟವನ್ನು ಗುರುತಿಸುವುದಿಲ್ಲ. ಏಕೆಂದರೆ ೧೯೨೦ರ ಸುಮಾರಿನಲ್ಲಿ ಆರಂಭವಾದ ಈ ಸಂಪಾದನೆಯ ಕಾರ್ಯ ೧೯೪೫ರ ತನಕವೂ ನಡೆಯಿತು. ನಂತರ ಕೆಲವು ವರ್ಷಗಳ ಕಾಲ ನಡೆಯಲ್ಲಿಲ್ಲ. ಏಕೆಂದರೆ ಭಾರತದಲ್ಲಿ ಸ್ವಾತಂತ್ರ್ಯ ಚಳವಳಿಗಳು ನಡೆಯುತ್ತಿದ್ದವು. ಆ ಕಾರಣದಿಂದ ಕೆಲವು ದಿನಗಳ ಕಾಲ ಸಂಪಾದನೆಯ ಕಾರ್ಯ ನಡೆಯಲಿಲ್ಲ. ಮೊದಲ ಘಟ್ಟದ ಸಂಪಾದನೆಯ ನಂತರದ ದಿನಗಳ ಸಂಪಾದನೆಯ ಕ್ರಮಕ್ಕೂ ಯಾವುದೇ ರೀತಿಯ ಬದಲಾವಣೆಯು ಕಾಣುವುದಿಲ್ಲ. ಜನಪದ ಸಾಹಿತ್ಯಕ್ಕೆ ವಿಶೇಷವಾಗಿ ಗೀತಸಾಹಿತ್ಯಕ್ಕೆ ಸೀಮಿತವಾದಂತೆ ಸಂಪಾದನೆಯ ಕೆಲಸ ನಡೆದಂತೆ ತೋರುತ್ತದೆ. ನಂತರ ಕಾವ್ಯ ಪ್ರಕಾರವನ್ನು ಮಾತ್ರವಲ್ಲದೆ, ಗೀತಪ್ರಕಾರದ ಕಾರ್ಯವನ್ನು ಎರಡನೆಯ ಕಾಲಘಟ್ಟದಲ್ಲಿ ಮಾಡಲು ಪ್ರಾರಂಭಿಸಿದ್ದಾರೆ.

ಮೊದಲನೆಯ ಹಂತದ ಕಾರ್ಯವು ಕಾಲದೃಷ್ಟಿಯಿಂದ ವಿವಿಧ ವಿಭಾಗವಾಗಿ ವಿಂಗಡಿಸಿಕೊಂಡು, ವಿವಿಧ ವಿದ್ವಾಂಸರಿಂದ ಸಂಪಾದನೆಯ ಕಾರ್ಯ ನಡೆದಿದ್ದರೆ ಜನಪದ ಸಾಹಿತ್ಯ ಇನ್ನೂ ಹೆಚ್ಚಿನ ರೀತಿಯಲ್ಲಿ ಮಹತ್ವವನ್ನು ಪಡೆಯುತ್ತಿತ್ತು. ಇದು ವಿವಿಧ ವಿಭಾಗಗಳನ್ನು ಮಾಡಿಕೊಂಡು ಗೀತಸಂಕಲನಗಳು ಮೊದಲನೆಯ ಹಂತದಲ್ಲಿ ಪ್ರಕಟವಾದವು. ಕೆಲವು ಜನಪದ ವಿದ್ವಾಂಸರು ಸುಸಂಬದ್ಧತೆಯಿಂದ ಕ್ರಮವಾಗಿ ದಕ್ಷತೆಯಿಂದ ಹಲವು ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿರುವುದು ಕಂಡುಬರುತ್ತದೆ. ಈ ಸಂಪಾದನೆಯ ಕಾರ್ಯದಲ್ಲಿ ತೊಡಗಿದಂತಹವರು

ಅನೇಕ ವಿಚಾರವನ್ನು ಇದರೊಟ್ಟಿಗೆ ಚರ್ಚಿಸಿ, ಮಾಡಿರುವ ಸಂಪಾದನೆಯ ಶ್ರಮಗ ಅವರು ಪ್ರಕಟಿಸಿರುವ ಜನಪದ ಸಾಹಿತ್ಯದಿಂದಲೇ ತಿಳಿಯುತ್ತದೆ. ಈ ರೀತಿಯ ಕಾರ್ಯ ಮೊದಲ ಘಟ್ಟದ ಸಂಪಾದನೆಯ ಕಾಲದಲ್ಲಿ ನಡೆದಿರುವುದು ಗಮನಾರ್ಹ.

ಕರ್ನಾಟಕದಲ್ಲಿ ಜನಪದ ಸಂಪಾದನೆಯ ಕೆಲಸವನ್ನು ಪರೀಕ್ಷಿಸಿದಾಗ ಸಂಗ್ರಹಿತವಾಗಿರುವ ಕಾವ್ಯ ಸಂಕಲನಗಳು ಯಾವ ರೀತಿಯ ವಿಚಾರಗಳು ಹೊಂದಿಕೊಂಡಿವೆ ಎಂಬಂತಹ ವಿಷಯವನ್ನು ಗಮನಿಸಬೇಕಾಗುತ್ತದೆ. ತ್ರಿಪದಿ, ಚೌಪದಿ, ಷಟ್ಪದಿಯಲ್ಲಿ ಸಂಗ್ರಹವಾಗಿರುವಂತಹ ಜನಪದ ಕಾವ್ಯಪ್ರಕಾರಗಳು ವಿಮರ್ಶೆಯನ್ನು ಪಡೆದಿದೆ. ಈ ಸಾಹಿತ್ಯದ ವಿವಿಧ ಮುಖಗಳು ಸಂಪಾದಕರ ಪರಿಮಿತಿಯಲ್ಲಿ ಎಷ್ಟರಮಟ್ಟಿಗೆ ಸಂಗ್ರಹಣೆಯ ಕಾರ್ಯದ ಮೇಲೆ ತಮ್ಮ ಆಸಕ್ತಿಯನ್ನು ತೋರಿದೆ ಎಂಬುದನ್ನು ತಿಳಿಯಬಹುದು. ಜನಪದದ ಕೆಲವು ಕ್ಷೇತ್ರಗಳಲ್ಲಿ ಮಾತ್ರ ಸಂಗ್ರಹಣೆಯನ್ನು ಮಾಡಲು ಸಾಧ್ಯವಾಗಿದೆ. ಎಲ್ಲಾ ಜನಪದ ವಿಭಾಗವನ್ನು ಅಧ್ಯಯನ ಮಾಡಲು ಸಾಧ್ಯವಾಗಿಲ್ಲ. ಏಕೆಂದರೆ ಸಾಗರದಲ್ಲಿ ಒಂದು ಭಾಗವನ್ನು ಮಾತ್ರ ನೋಡಲು ಸಾಧ್ಯವಾಗುತ್ತದೆ. ಇನ್ನು ಉಳಿದ ಭಾಗವು ಕಣ್ಣಿಗೆ ಗೋಚರವಾಗುವುದಿಲ್ಲ.

ಜನಪದ ಕಾವ್ಯ ಸಂಪಾದನೆಯಲ್ಲಿ ನಿಜವಾದ ಆಸಕ್ತಿ ಮೂಡಿ, ಅದರ ಕಾವ್ಯಮೌಲ್ಯವನ್ನು ಅರಿತುಕೊಂಡು ನಮ್ಮ ದೇಶಿಯ ವಿದ್ವಾಂಸರು ಸಂಗ್ರಹ ಕಾರ್ಯಕ್ಕೆ ತೊಡಗಿರುವುದು ಅದರ ಸಂಪಾದನೆಯಿಂದ. ೧೯೩೦ರ ವೇಳೆಗೆ ವಿವಿಧ ಸಂಕಲನಗಳು ಪ್ರಕಟವಾದವು. 'ಗರತಿಯ ಹಾಡು' ಕನ್ನಡ ಜನಪದ ಪ್ರಪ್ರಥಮ ಜನಪದ ಗೀತ ಸಂಕಲನವಾಗಿ ೧೯೩೧ರಲ್ಲಿ ಅತ್ಯುತ್ತಮ ಕೃತಿಯಾಗಿ ಹೊರಹೊಮ್ಮಿತು. ಅಲ್ಲಿಂದೀಚೆಗೆ ಒಂದು ದಶಕದ ಅವಧಿಯಲ್ಲಿ ಕೆಲವು ಉತ್ತಮ ಸಂಗ್ರಹಗಳು ಹೊರಬಂದವು. ಆ ಸಂದರ್ಭದಲ್ಲಿ ಒಂದು ಸಾಧನೆಯೇ ಜನಪದ ಗೀತೆಗಳ ಚರಿತ್ರೆಯಲ್ಲಿ ಆಗಿ ಹೋಯಿತು. ಅರ್ಚಕ ರಂಗಸ್ವಾಮಿಯವರ 'ಹುಟ್ಟಿದ ಹಳ್ಳಿಯ ಹಾಡು' ಹಲಸಂಗಿ ಗೆಳೆಯರ ಸಂಕಲನಗಳು, ಗೊರೂರರು ಬಿ.ಎಸ್.ರಂಗಸ್ವಾಮಿಯವರು, ರೇವಪ್ಪನವರ ಸಂಕಲನಗಳು ಈ ಅವಧಿಯಲ್ಲಿ ಮೇಲಿಂದ ಮೇಲೆ ಪ್ರಕಟಗೊಂಡು ಕರ್ನಾಟಕ ಜನಪದ ಸಾಹಿತ್ಯದ ಬಗ್ಗೆ ತೀವ್ರವಾದ ಆಸಕ್ತಿಯನ್ನು ಮೂಡಿಸಿದವು. ಅಲ್ಲದೆ ಮುಂದಿನ ಸಂಪಾದನೆಯ ಕಾರ್ಯಕ್ಕೆ ಉತ್ತಮ ನೆರವನ್ನು ಪ್ರೋತ್ಸಾಹವನ್ನು ತುಂಬಿದವು. ಕರ್ನಾಟಕದ ವಿವಿಧ ಭಾಗದಲ್ಲಿ ಒಳಪಡುವಂತೆ ಕನ್ನಡ ಗೀತಸಾಹಿತ್ಯದ ನಿಜವಾದ ಸತ್ವವನ್ನು ಪರಿಚಯ ಮಾಡಿಕೊಡಲು ಸಮರ್ಥವಾಗುವ ವಿಶಿಷ್ಟತೆಯನ್ನು ಈ ಜನಪದ ಕೃತಿಗಳು ನೆರವಾದವು.

ಮೊದಲ ಸಂಪಾದನೆಯ ಕಾರ್ಯ ಕಾವ್ಯರೂಪದಲ್ಲಿ ನಡೆಯಿತು. ೧೯೨೦ರಿಂದ ೧೯೪೫ರ ವರೆಗೆ ಕಾವ್ಯರೂಪದಲ್ಲಿ ನಡೆಯುತ್ತಾ ನಂತರ ಎರಡನೆಯ ಹಂತದ ಅಧ್ಯಯನದಲ್ಲಿ ಕಥನಗೀತೆ ಪ್ರಕಾರಕ್ಕೆ ಪ್ರಾಮುಖ್ಯತೆಯನ್ನು ಸಂಪಾದಕರು ನೀಡಿದರು. ಏಕೆಂದರೆ ನವೋದಯ ಕಾಲದಲ್ಲಿ

ಭಾವಗೀತೆಯ ಹೆಚ್ಚಿನ ಪ್ರಭಾವದಿಂದ ಜನಪದ ಕಾವ್ಯದ ಹಾಡುಗಳನ್ನು ಸಂಪಾದನೆಯನ್ನು ಮಾಡಿದರು. ಸ್ವಾತಂತ್ರ್ಯೋತ್ತರ ಸಂಪಾದನೆಯ ಕಾರ್ಯ ಗೀತ ಪ್ರಕಾರವಾಗಿತ್ತು. ಈ ಸಮಯಕ್ಕೆ ಭಾರತದಲ್ಲಿ ವಿವಿಧ ಕಡೆ ಚಳವಳಿ ನಡೆದವು. ಜೊತೆಗೆ ಲಾವಣಿಗಳ ಸಂಗ್ರಹಣೆ ಪ್ರಾಮುಖ್ಯತೆಯನ್ನು ಪಡೆದುಕೊಂಡ. ಅನೇಕ ಕಥನ ಗೀತೆಗಳು ಹುಟ್ಟಿದವು. ಇದರಲ್ಲಿ ದೇಶಕ್ಕಾಗಿ, ಊರಿಗಾಗಿ ತ್ಯಾಗ, ಬಲಿದಾನವನ್ನು ಮಾಡಿರುವ ಎಷ್ಟೋ ವ್ಯಕ್ತಿಗಳ ಜೀವನ ಕತೆಗಳನ್ನು ಗೀತೆಯಲ್ಲಿ ಜನರ ಬಾಯಲ್ಲಿ ಇದ್ದುದರಿಂದ ಎರಡನೇ ಹಂತದಲ್ಲಿ ಅಧ್ಯಯನಕ್ಕೆ ಸಂಪಾದಕರು ಮುಂದಾದರು. ಕರ್ನಾಟಕ ಜಾನಪದ ಸಂಗ್ರಹ ಆರಂಭವಾದುದು ಗೀತೆಗಳಿಂದ. ಇದರಲ್ಲಿ ಉತ್ತಮ ವಿದ್ವಾಂಸರು ಜನಪದ ಆಸಕ್ತರು. ಸಾಹಿತ್ಯಪ್ರಿಯರು ಈ ಕ್ಷೇತ್ರವನ್ನು ಪ್ರವೇಶಿಸಿ ಜನಪದ ಸಾಹಿತ್ಯವನ್ನು ಕೇವಲ ಕಾವ್ಯದೃಷ್ಟಿಯಿಂದಲೇ ನೋಡುವಂತಹ ಪರಿಪಾಟ ನಮ್ಮ ವಿದ್ವಾಂಸರಲ್ಲಿ ಬೆಳೆದುಬಂದಿತು. ಈ ದೃಷ್ಟಿ ಮುಂದಿನ ಸಂಪಾದಕರಲ್ಲೂ ಕಾವ್ಯಪ್ರಕಾರವೇ ವಿದ್ವಾಂಸರ ಮನಸ್ಸಿನಲ್ಲಿ ಉಳಿದಿತ್ತು. ಜನಪದ ಗೀತೆಗಳನ್ನು "ಗ್ರಾಮೀಣ ಸಾಹಿತ್ಯ", 'ಹಳ್ಳಿಯ ಹಾಡು', 'ಹಳ್ಳಿಯ ಪದಗಳು' ಎಂಬ ವಿವಿಧ ಹೆಸರುಗಳಿಂದ ಕರೆಯುತ್ತಿದ್ದರು. ಆದರೆ ಈ ಪ್ರಕಾರವನ್ನು ವಿವಿಧ ಆಲೋಚನೆಗಳಿಗೆ ಒಳಪಡಿಸಿ ಶಿಷ್ಟಕಾವ್ಯದೊಡನೆ ಅನುಸಂಧಾನ ಮಾಡಿ ನೋಡುವ ಒಂದು ವಿಧಾನ ಆರಂಭವಾಯಿತು. ಜನಪದವು ಎಲ್ಲಾ ಕಾಲಕ್ಕೂ ಶ್ರೇಷ್ಠ ಕಾವ್ಯ ಲಕ್ಷಣಗಳಿಂದ ಕೂಡಿರುವಂತಹದ್ದು ಎಂಬ ಮನವರಿಕೆ ಆ ಸಮಯದಲ್ಲಿ ಆಯಿತು. ಇಂತಹ ಒಂದು ವಿಶಿಷ್ಟ ಸಾಹಿತ್ಯವು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ನಂತರ ಸ್ವಾತಂತ್ರ್ಯದ ಸಮಯದಲ್ಲಿ ೧೯೪೭ರ ಅವಧಿಯನ್ನು ನಾಡಪದಗಳು ಎಂಬಂತಹ ಕೃತಿಯನ್ನು ತರಲಾಯಿತು. ಇದು ಜನಪದದ ಹೊಸ ಸಂಪಾದನೆಯ ದೃಷ್ಟಿಕೋನವನ್ನೇ ಬದಲಾಯಿಸಿತು. ಈ ಕೃತಿಯನ್ನು ಕುರಿತು ಬಿ.ಎಂ.ಶ್ರೀ.ಯವರು "ಇದುವರೆಗೆ ನಾನು ನೋಡಿರುವ ಸಂಗ್ರಹಗಳಲ್ಲೆಲ್ಲ ಈಗಿನ ಸಂಗ್ರಹವೇ ಸರ್ವೋತ್ತಮವಾದುದು ಮತ್ತು ಅತ್ಯಂತ ಸ್ವಾರಸ್ಯವಾದುದು"[೧] ಎಂಬುದಾಗಿ ಕೃತಿಯ ಗುಣಗಳನ್ನು ಕುರಿತು ಬಿ.ಎಂ.ಶ್ರೀಯವರು ತಿಳಿಸಿದ್ದಾರೆ.

ಮತಿಘಟ್ಟ ಕೃಷ್ಣಮೂರ್ತಿಯವರೂ ಮತ್ತು ಅವರ ಸಹೋದ್ಯೋಗಿ ವಿದ್ವಾಂಸರು ಹೊರ ತಂದಂತಹ ಕೃತಿಗಳಲ್ಲಿ 'ನಾಡಪದಗಳು' ಕೂಡ ಒಂದು. ಈ ಕೃತಿಯಲ್ಲಿ ಸಾಹಿತ್ಯದ ನಿಯಮವನ್ನು ಸಾರವನ್ನು ಅನುಸರಿಸಿರುವುದು ಗಮನಾರ್ಹವಾಗಿದೆ. ಜನಪದ ಗೀತೆಗಳನ್ನು ಕ್ರಮಬದ್ಧವಾಗಿ ವಿವಿಧ ಭಾಗಗಳನ್ನಾಗಿ ಮಾಡಿ ಸುಸಜ್ಜಿತವಾಗಿ ಸಂಗ್ರಹಣೆಯನ್ನು ಮಾಡಿರುವುದು ತಿಳಿಯುತ್ತದೆ. ಜೊತೆಗೆ ನಾಡಪದಗಳ ಕೃತಿಯಲ್ಲಿ ಎಂಟು ವಿವಿಧ ಘಟಕಗಳನ್ನು ಮಾಡಿ ಒಂದೊಂದು ಘಟಕದಲ್ಲಿ ಒಂದೊಂದು ಪ್ರಕಾರದ ಹಾಡುಗಳನ್ನು ಸಂಗ್ರಹಿಸಲಾಗಿದೆ. ಲಾವಣಿಗಳನ್ನು ಕುರಿತಂತೆ

ಈ ನಾಡಪದಗಳಲ್ಲಿ ಚರ್ಚೆ ಮಾಡಿರುವುದು ಇದಕ್ಕೆ ಪೂರಕವಾಗಿ ಸಾಹಿತ್ಯವನ್ನು ಅಳವಡಿಸಿಕೊಂಡು ಸುಂದರವಾದುದು, ಒಂದೊಂದು ವಿಭಾಗದಲ್ಲಿ ರಾಗಿಯಕಲ್ಲಿನ ಪದಗಳು, ಚರಿತ್ರೆಗೆ ಸಂಬಂಧಪಟ್ಟ ಗೀತೆಗಳು, ಕೋಲಾಟದ ಪದಗಳು, ತಿಂಗಳಮಾವನ ಪದಗಳು, ಕಥೆ ಮತ್ತು ಶಾಸ್ತ್ರದ ಹಾಡುಗಳು, ಚರಿತ್ರೆಗೆ ಸಂಬಂಧಿಸಿದ ಹಾಡುಗಳು ಹೀಗೆ ಒಂದೊಂದು ಪ್ರಮುಖ ವಿಭಾಗವನ್ನು ಕಾಣಬಹುದು. ಕೆಲವು ಜನಪದ ಸಂಪ್ರದಾಯಗಳನ್ನು ಕುರಿತಂತೆ ವಿವರವಾಗಿ ತಿಳಿಸಿರುವುದನ್ನು ಗಮನಿಸಬಹುದು. ಜೊತೆಗೆ ಹಾಡುಗಳ ರೂಪದಲ್ಲಿಯೂ ಇವುಗಳನ್ನು ನೆನಪಿನಲ್ಲಿ ಇಡಬಹುದಾಗಿದೆ. ಉತ್ತರ ದೇವಿ, ಲಕ್ಕಣ್ಣ, ಈರಣ್ಣ ಮೊದಲಾದ ಪ್ರಸಿದ್ಧ ಜನಪದ ಕಥನ ಗೀತೆಗಳ ಜೊತೆಗೆ ಜನಪ್ರಿಯವಾಗಿರುವಂತಹ ಎಷ್ಟೋ ಗೀತೆಗಳು ಇರುವುದನ್ನು ಗಮನಿಸಬಹುದು. ಈ ಗೀತೆಗಳು ಇವತ್ತಿಗೂ ಸಹ ನಮ್ಮ ಹಳ್ಳಿಯ ಪ್ರದೇಶದಲ್ಲಿ ಜನರ ಬಾಯಿಯಲ್ಲಿ ಜೀವಂತವಾಗಿದೆ.

ಚೆಲುವಯ್ಯ ಚೆಲುವೋ ತಾನಿ ತಂದಾನ
ಚಿನ್ಮಾಯ ರೂಪೇ ಕೋಲನ್ನ ಕೋಲೆ
ಬೆಟ್ಟದ್ಮೇಗಳ ಜಲ್ಲೆ ಬಿದಿರು
ಬೇಲಿ ಮ್ಯಾಗಳ ಸೋರೆ ಬುರುಡೆ
ಲೋಲು ಕಿನ್ನುಡಿ ನುಡಿಸೋರ್ಯಾರಯ್ಯ।
ಲೋಲು ಕಿನ್ನುಡಿ ನುಡಿಸುತ್ತಾನೆ
ಕೇರಿ ಕೇರಿ ತಿರುಗುತ್ತಾನೆ
ನಮ್ಮ ಕೇರಿಗ್ಯಾಕೆ ಬರುವಲ್ಲೋ।

ಈ ಪದಗಳು ಇಂತಹ ಆಧುನಿಕ ಕಾಲದಲ್ಲೂ ಕೆಲವು ಹಳ್ಳಿಗಳಲ್ಲಿ ಜನರ ಬಾಯಿಯಲ್ಲಿ ಹಾಡುವುದನ್ನು ನೋಡಬಹುದು.

'ನಾಡಪದಗಳು' ಸಂಕಲನದಲ್ಲಿ ಹಾಡುಗಳ ಮೂಲ ಸ್ವರೂಪವನ್ನು ಸಂಪಾದನಕಾರರು ಹಳ್ಳಿಗಳಲ್ಲಿ ಹಾಡಿದಂತಹ ಹಾಡುಗಳನ್ನು ಅವರ ಧಾಟಿಯಲ್ಲಿ ಸಂಗ್ರಹಿಸಿದರು. ತನ್ನ ಸ್ವಂತತೆಯನ್ನು ಕಾಪಾಡಿಕೊಂಡರು. ಹಾಡಿನ ಲಯ, ಧಾಟಿ, ಭಾಷೆಗೆ ಯಾವುದೇ ರೀತಿಯ ಲೋಪ ಬರದಂತೆ ನೋಡಿಕೊಂಡಿದ್ದಾರೆ. ನಿಜಕ್ಕೂ ಇದೊಂದು ಅಚ್ಚರಿಯೇ ಸರಿ.

"ಬಿದರೂರಿಗ್ ಹೋಗ್ವಾಗ ಉದುರಾವೆ ಮಲ್ಲಿಗೆ
ಬಿದರೂರಿಗ್ ಹೋಗಿ ಬರುವೋನೇ-ಕೋಲು
ಬಿದರೂರಿಗ್ ಹೋಗಿ ಬರುವೋ ಚನ್ನಯ್ಯನ
ಕುದುರೆಗೆ ಧೂಳು ಗವಿದವೆ-ಕೋಲು"[3]

ಈ ಜನಪದ ತ್ರಿಪದಿಯೊಂದು ಕೋಲಾಟದವರ ಬಾಯಲ್ಲಿ ಯಾವ ಮಟ್ಟಿಗೆ ಹೊಂದಿಕೊಂಡು ಇದ್ದರೂ. ಗ್ರಂಥರೂಪದಲ್ಲಿ ಮೂಲಧಾಟಿಯು ಬರುವುದಿಲ್ಲ. ಏಕೆಂದರೆ ಯಾವುದೇ ಒಂದು ಸಾಹಿತ್ಯವು ಮೌಖಿಕ ರೂಪದಿಂದ ಸಂಗ್ರಹಿಸಲಾದ ಪ್ರಕಾರಗಳು ಮುದ್ರಣದಲ್ಲಿ ಬದಲಾವಣೆಯನ್ನು ಪಡೆದುಕೊಂಡಿರುತ್ತವೆ. ಆದ್ದರಿಂದ ಮೂಲ ಧ್ವನಿಯ ಧಾಟಿ ಇರುವುದಿಲ್ಲ. ಇದನ್ನು ಅವರ ಬಾಯಿಂದ ಹಾಡಿದರೆ ಕೇಳಲು ಸುಂದರವಾಗಿರುತ್ತದೆ. ನಾಡಪದಗಳನ್ನು ಸಂಗ್ರಹಿಸಿದಂತಹ ಮತಿಘಟ್ಟ ಸೋದರರು ಸಂಪಾದನೆಯ ಕಾರ್ಯವನ್ನು ಮುಂದುವರೆಸಿಕೊಂಡು ಬಂದರು. ನಾಡಪದಗಳಂತಹ ಜನಪದ ಪದಗಳನ್ನು ಸಂಗ್ರಹಿಸುತ್ತ, ಉತ್ತರ ಕರ್ನಾಟಕದ ಕಥನ ಗೀತೆಯಂತಹ 'ಏಳುಕೊಳ್ಳದ ಎಲ್ಲಮ್ಮ' ಮುಂದೆ ಕಥನ ಗೀತೆಗಳನ್ನು ಸಂಪಾದಿಸಿದ್ದಾರೆ. ಇದರ ಜೊತೆಯಲ್ಲಿ ಇವರ ಗೆಳೆಯರಿಗೂ ಈ ಕೃತಿಯ ಸಂಪಾದನೆಯು ಯಶಸ್ವಿಯಾಗಲು ಸಹಾಯಕಾರಿ ಯಾಗಿದ್ದಾರೆ.

ಜನಪದ ಸಾಹಿತ್ಯ ಸಂಪಾದನೆಯ ಕಾರ್ಯ ಕೆಲಕಾಲ ನಡೆಯಲಿಲ್ಲ. ನಂತರ ಕೆಲವು ವಿದ್ವಾಂಸರು ಸಂಪಾದನೆಯ ಕಾರ್ಯದಲ್ಲಿ ತೊಡಗಿದರು. ಅದರಲ್ಲಿ ತೀ.ನಂ.ಶ್ರೀಕಂಠಯ್ಯನವರು 'ಹೆಣ್ಣುಮಕ್ಕಳ ಪದಗಳು' ಎಂಬಂತಹ ಸಂಕಲನವನ್ನು ಪ್ರಕಟ ಮಾಡಿದ್ದು, ಇದು ಆಯ್ದ ತ್ರಿಪದಿಗಳಿಂದ ಕೂಡಿದ ಅಪೂರ್ವ ಸಂಕಲನವಾಗಿದೆ. ಇದರಲ್ಲಿ ಹೆಣ್ಣುಮಕ್ಕಳು ಪ್ರಮುಖವಾಗಿ ಹಾಡಿರುವಂತಹ ಗೀತೆಗಳನ್ನು ಸಂಗ್ರಹಿಸಿದ್ದಾರೆ. ಜೊತೆಗೆ ಅವರು ಎಲ್ಲೇ ಕೆಲಸ ಕಾರ್ಯದಲ್ಲಿ ತೊಡಗಿದರೂ. ಪದಗಳನ್ನು ಕಟ್ಟಿ ಹಾಡಿ ಅವುಗಳನ್ನು ಮುಂದುವರಿಸುತ್ತ ತಮ್ಮ ಕೆಲಸ ಕಾರ್ಯವನ್ನು ಮಾಡುತ್ತಿದ್ದರು. ಈ ಸಮಯದಲ್ಲಿ ಡಿ.ಎಲ್.ನರಸಿಂಹಚಾರ್ಯರು 'ಗೋವಿನ ಹಾಡು' ಸಂಪಾದನೆಯನ್ನು ಮಾಡುತ್ತಾರೆ. ಇದು ಜಾನಪದ ಕಾವ್ಯದಲ್ಲಿ ಮಹತ್ವದ ಸಂಕಲನವಾಗಿದೆ. ಈ ಗೋವಿನ ಹಾಡು' ಹಸು ಮತ್ತು ಅದರ ತ್ಯಾಗದ ಬಗ್ಗೆ ಇರುವಂತಹ ಒಂದು ಕಾವ್ಯವಾಗಿದೆ. ಡಿ.ಎಲ್.ನರಸಿಂಹಾಚಾರ್ಯರು ತನ್ನದೆಯಾದ ವಿಶಿಷ್ಟ ಜಾನಪದ ಮಟ್ಟಿನ ಹಾಡುಗಳು ಗ್ರಂಥಸ್ಥವಾಗಿ ಉಳಿದುಬಂದಿದ್ದರೂ, ಜನರಿಂದ ಹಾಡಿರುವಂತಹ ಹಾಡುಗಳನ್ನು ಸಂಗ್ರಹಿಸಿರಬಹುದು. ಹಲಸಂಗಿ ಗೆಳೆಯರು ಈ ಕಥೆಯನ್ನು ಮತ್ತೊಂದು ಬಗೆಯಲ್ಲಿ ಅಂದರೆ 'ಆಕಳ ಹಾಡು' ಎಂಬ ಹೆಸರಿನಲ್ಲಿ ಸಂಗ್ರಹಿಸಿರುವುದನ್ನು ಗಮನಿಸಬಹುದು. ಗೋವಿನ ಹಾಡಿಗೂ, ಆಕಳ ಹಾಡಿಗೂ ಸ್ವರೂಪದಲ್ಲಿ, ಲಯದಲ್ಲಿ ವಿವಿಧ ರೀತಿಯ ವ್ಯತ್ಯಾಸಗಳಿದ್ದರೂ, ಗೋವಿನ ಹಾಡು ಮೌಖಿಕ ಸಂಪ್ರದಾಯದ ಕಥನಗೀತೆಯೇ ಇರಬಹುದು ಎಂಬುದಾಗಿ ಊಹಿಸಿರಬಹುದು.

ಸ್ವತಂತ್ರ್ಯದ ನಂತರ ಮೂರು ನಾಲ್ಕು ವರ್ಷಗಳು ಯಾವ ಸಂಪಾದನೆಯೂ ನಡೆಯಲಿಲ್ಲ. ಅಧ್ಯಯನ ಮತ್ತು ಸಂಪಾದನೆಯಲ್ಲಿ ಕುಂಠಿತವಾಯಿತು. ೧೮೫೦ರ ನಂತರ ಸಂಪಾದನೆಯು

ಸ್ವಲ್ಪಮಟ್ಟಿಗೆ ತನ್ನ ದಾರಿಯನ್ನು ಮುಂದುವರೆಸಿತು. ಡಾ.ಗದ್ದಗಿಮಠ ಅವರು ಜಾನಪದ ಪ್ರವೇಶದಿಂದ ಮಹತ್ವಪೂರ್ಣವಾದ ಅರ್ಥವನ್ನು ಪಡೆಯಿತು. ಇವರು ಉತ್ತರ ಕರ್ನಾಟಕದ ಜನಪದ ಗೀತೆಗಳ ಅಪಾರ ಸಂಗ್ರಹ ಕಾರ್ಯದಲ್ಲಿ ತೊಡಗಿ ಉತ್ತಮ ಜನಪದ ಸಂಪಾದಕರಲ್ಲಿ ಒಬ್ಬರಾಗಿ ಹೆಸರನ್ನು ಮಾಡಿದರು. ಜನಪದ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಸ್ವತಃ ಸಂಗ್ರಹಕಾರರಾಗಿ, ಜನಪದ ವಿದ್ವಾಂಸರಾಗಿ, ಲೇಖಕರಾಗಿ ಗದ್ದಗಿಮಠ ಅವರು ಜನಪದ ಸಂಪಾದನೆಯ ಕಾರ್ಯಕ್ಕೆ ಹೊಸ ದಾರಿಯನ್ನು ತೋರಿದರು. ಇವರು ಉತ್ತರ ಕರ್ನಾಟಕದ ಅನೇಕ ಜನಪದ ಸಂಪ್ರದಾಯಗಳನ್ನು ಅನೇಕ ಕಥನಗೀತೆಗಳನ್ನು, ಅನೇಕ ಹಾಡುಗಳನ್ನು ಸಂಪಾದನೆ ಮಾಡಿ ನಂತರ ಅವುಗಳನ್ನು ಕುರಿತು ಅಧ್ಯಯನ ಮಾಡಿ, ಇವರು ಸಂಪಾದನೆ ಮಾಡಿದ ಕೆಲವು ಕೃತಿಗಳು ಮಾತ್ರ ಪ್ರಕಟವಾಗಿವೆ. ಗದ್ದಗಿಮಠ ಅವರು ಅನೇಕ ವರ್ಷಗಳಿಂದ ಸಂಪಾದನೆಯ ಕಾರ್ಯವನ್ನು ನಡೆಸಿಕೊಂಡು ಬಂದಿದ್ದರೂ ಇವರ ಪ್ರಥಮ ಜಾನಪದ ಸಂಕಲನ 'ನಾಲ್ಕು ನಾಡಪದಗಳು' ಉತ್ತಮ ಸಂಪಾದನೆಯ ಕೃತಿಯಾಗಿ ಇದು ೧೯೫೭ರಲ್ಲಿ ಪ್ರಕಟವಾಗಿದೆ. ಇವರು ಉತ್ತರ ಕರ್ನಾಟಕದ ಹಳ್ಳಿಯ ಪ್ರದೇಶದ ಜನರ ಬಾಯಲ್ಲಿ ಇರುವಂತಹ ಪದಗಳನ್ನು ಮುಂದಿನ ಪೀಳಿಗೆಗೆ ತಿಳಿಸುವ ದೃಷ್ಟಿಯಿಂದ ಪ್ರಕಟಿಸಿದರು. ಕೆಲವು ಉತ್ತರ ಕರ್ನಾಟಕದ ಕಥನಗೀತೆಗಳನ್ನು ಸಂಗ್ರಹಿಸಿದ್ದಾರೆ. ಕೊಳೂರು ಕೊಡಗುಸು, ಗೊಲ್ಲಾಳ ಮುಂತಾದ ಶರಣಕಥೆಗಳನ್ನು ಸಂಗ್ರಹಿಸಿದ್ದಾರೆ.

ಡಾ.ಗದ್ದಗಿಮಠ ಅವರ ಉತ್ತಮ ಸಂಕಲನಗಳಲ್ಲಿ 'ಜನತಾ ಗೀತೆಗಳು' ಒಂದು ಗರತಿಯ ಹಾಡು, ಮಲ್ಲಿಗೆ ದಂಡೆ, ನಾಡಪದಗಳು. ಈ ಕೃತಿಗಳು ಜನಪದ ಮೊದಲ ಸಂಪಾದನೆಯ ಕೃತಿಗಳು. ಇವುಗಳ ಸಾಲಿಗೆ ಡಾ.ಗದ್ದಗಿಮಠ ಅವರ ಉತ್ತರ ಕರ್ನಾಟಕದ ಜನಪದ ಭಾವಗೀತೆಗಳು ಸೇರುತ್ತದೆ ಎಂಬುದಾಗಿ ಹೇಳಬಹುದು. ಉತ್ತರ ಕರ್ನಾಟಕದ ವಿಶಿಷ್ಟ ರೀತಿಯ ಜನಪದ ವಿವಿಧ ಪ್ರಕಾರಗಳನ್ನು ಒಳಗೊಂಡಿದ್ದು ಭಾವಗೀತೆಗಳ ಪ್ರಮುಖವಾಗಿದೆ. ಈ ಭಾವಗೀತೆಗಳು ಸಂಗ್ರಹಣೆಯು ವಿಶಿಷ್ಟವೆನಿಸುತ್ತದೆ. ಇವು ವಿಶೇಷವಾಗಿ ಅಧ್ಯಯನ ಮಾಡಿ ಸಂಗ್ರಹಿಸಿರುವ ಕೀರ್ತಿ ಗದ್ದಗಿಮಠ ಅರವರಿಗೆ ಸೇರುತ್ತದೆ. ಇವರು ಜನಪದದ ಮಹತ್ವದ ವಿದ್ವಾಂಸರು ಜನಪದ ಸಂಸ್ಕೃತಿಯನ್ನು ಚೆನ್ನಾಗಿ ತಿಳಿದಂತವರು. ಇವರ ಅಧ್ಯಯನದ ಪ್ರಾಮಾಣಿಕತೆ ಮತ್ತು ಆಸಕ್ತಿ ಅವರ ಸಂಪಾದನ ಕೃತಿಯನ್ನು ಗಮನಿಸಿದಾಗ ತಿಳಿದುಬರುತ್ತದೆ. 'ಲೋಕಗೀತೆಗಳು' ಎಂಬ ಜನಪದ ಸಂಕಲನವನ್ನು ಸಹ ಪ್ರಕಟಣೆ ಮಾಡಿದರು. ಕಾವ್ಯ ಪ್ರಕಾರತೆಯನ್ನು ಹೊಂದಿದ್ದು, ಹಾಡುಗಳ ರೂಪದಲ್ಲಿ ಇದನ್ನು ಸಂಗ್ರಹಿಸಿದ್ದಾರೆ. ಇವುಗಳನ್ನು ಸಂಗ್ರಹಿಸುವಾಗ ಜನರು ಹಾಡುವಾಗ ಯಥಾವತ್ತಾಗಿ ಸಂಗ್ರಹಿಸಿ ಮೂಲಕಾವ್ಯಕ್ಕೆ ಧಕ್ಕೆ ಬರದಂತೆ ಸಂಪಾದಿಸಿರುವುದು ಇವರ ವ್ಯಕ್ತಿತ್ವಕ್ಕೆ ಮತ್ತೊಂದು ಗೌರವ ಎನಿಸುತ್ತದೆ. ಲೋಕಗೀತೆಗಳಲ್ಲಿ ಹೆಚ್ಚಾಗಿ ಕೋಲಾಟ,

ಮದುವೆಗೆ ಸಂಬಂಧಪಟ್ಟಂತಹ ಕಾವ್ಯಗಳು ಇರುವುದನ್ನು ಗಮನಿಸಬಹುದು. ಉತ್ತರ ಕರ್ನಾಟಕದಲ್ಲಿ ಹಬ್ಬ, ಮದುವೆಯ ಸಮಯದಲ್ಲಿ ಹಾಡುವ ಗೀತೆಗಳನ್ನು ಸುಗ್ಗಿಯ ಸಮಯದಲ್ಲಿ ಕೋಲಾಟದ ಹಾಡುಗಳನ್ನು ಈ ಸಂಕಲನದಲ್ಲಿ ಸಂಗ್ರಹಿಸಿದ್ದಾರೆ. ಉತ್ತರ ಕರ್ನಾಟಕದ ಜನಪದ ಕಾವ್ಯದ ಮಹತ್ವವನ್ನು ಮೊದಲಬಾರಿಗೆ ಜನತೆಗೆ ತಿಳಿಸಿದವರು. ಇವರು ಸಾವಿರಾರು ಹಾಡುಗಳನ್ನು ಸಂಗ್ರಹಿಸಿದರೂ ಕೂಡ ಕೆಲವೇ ಕೆಲವು ಮಾತ್ರ ಪ್ರಕಟಣೆಯಾಗಿವೆ ಇನ್ನೂ ಉಳಿದ ಸಾವಿರಾರು ಹಾಡುಗಳು ಮತ್ತು ಗೀತೆಗಳೂ ಪ್ರಕಟಣೆಗೊಂಡಿಲ್ಲ ಎಂಬುದಾಗಿ ಅವರ ಕುರಿತ ಓದಿನಿಂದ ತಿಳಿಯಬಹುದಾಗಿದೆ.

'ಕರ್ನಾಟಕ ಜಾನಪದ ಗೀತೆಗಳು' ಕೃತಿಯು ಕರ್ನಾಟಕದ ಜನಪದ ವಿಶಿಷ್ಟ ಗೀತೆಗಳನ್ನು ಒಳಗೊಂಡಿದ್ದು, ಎಲ್ಲಾ ಪ್ರಕಾರದ ಗೀತೆಗಳು ಇದರಲ್ಲಿ ಸೇರಿಕೊಂಡಿದೆ. ಹೆಣ್ಣುಮಕ್ಕಳ ಹಾಡಿನ ಜೊತೆಯಲ್ಲಿ ಮಕ್ಕಳಹಾಡುಗಳು ಇದರಲ್ಲಿವೆ. ಇದು ೧೯೫೩ರಲ್ಲಿ ಪ್ರಕಟವಾಗಿದೆ, ಈ ಕೃತಿಯಲ್ಲಿ ಹಂತಿಯ ಪದಗಳು, ಡೊಳ್ಳಿನ ಪದಗಳು, ಬೀಸುವ ಪದಗಳು, ಸ್ತುತಿಪದಗಳು ಮುಂತಾದ ವಿವಿಧ ಗೀತೆಗಳನಗನ್ನು ನೋಡಬಹುದು. ಉತ್ತರ ಕರ್ನಾಟಕದ ಕೆಲವು ಭಾಗದ ಜನಪದ ಹಾಡುಗಳನ್ನು ಇದರಲ್ಲಿ ಸಂಗ್ರಹಿಸಲಾಗಿದೆ. ದಕ್ಷಿಣ ಕರ್ನಾಟಕದಲ್ಲಿ ೧೯೫೦ರ ನಂತರ ಜನಪದ ಕಾವ್ಯ ಸಂಪಾದನೆಯ ಕಾರ್ಯ ವಿವಿಧ ರೀತಿಯಲ್ಲಿ ನಡೆಯುತ್ತಾ ಬಂದಿದೆ. ಮತಿಘಟ್ಟ ಕೃಷ್ಣಮೂರ್ತಿಯವರು ಹಳ್ಳಿಹಳ್ಳಿಗಳಿಗೂ ಹೋಗಿ ಜನಪದ ಸಂಪಾದನೆಯ ಕಾರ್ಯದಲ್ಲಿ ತೊಡಗಿದಂತವರು. ಇವರ ನಂತರ ಜನಪದ ಗೀತಪ್ರಕಾರದಲ್ಲಿ ಜನಪ್ರಿಯತೆಯನ್ನು ಪಡೆದವರು ಕರೀಂಖಾನರು. ಇವರು ಹಾಸನ, ತುಮಕೂರು, ಕೊಡುಗು, ಸುತ್ತಲಿನ ಕೆಲವು ಜನಪದ ಕಾವ್ಯ ಪ್ರಕಾರವನ್ನು ಸಂಪಾದನೆಯನ್ನು ಮಾಡಿದ್ದಾರೆ. ನೂರಾರು ಕೋಲಾಟದ ಪದಗಳನ್ನು ಬೀಸುವ ಪದಗಳನ್ನು ಉತ್ತಮ ಕಥನಗೀತೆಗಳನ್ನೂ, ತಮ್ಮ ಸಂಪಾದನೆಯ ಕಾರ್ಯದಲ್ಲಿ ಸಂಗ್ರಹಿಸಿದ್ದಾರೆ. ಸುಮಾರು ೧೯೬೦ರ ಸುಮಾರಿನಲ್ಲಿ 'ಜನಪದಗೀತೆ' ಎಂಬ ಶೀರ್ಷಿಕೆಯಲ್ಲಿ ಪ್ರಕಟ ಮಾಡಿದ್ದಾರೆ. ಇದೇ ಕಾಲಕ್ಕೆ ಮತ್ತೊಬ್ಬ ಜನಪದ ವಿದ್ವಾಂಸರು ಜೀ.ಶಂ.ಪರಮಶಿವಯ್ಯನವರು. ಇವರು ದಕ್ಷಿಣ ಕರ್ನಾಟಕದ ಭಾಗದಲ್ಲಿ ಹೆಚ್ಚು ಕ್ಷೇತ್ರಕಾರ್ಯವನ್ನು ಮಾಡಿದಂತವರು 'ಜೀವನಗೀತ' ಎಂಬ ಸಂಕಲನವನ್ನು ಜಾರಿಗೆ ತಂದರು. ಇದು ದಕ್ಷಿಣ ಕರ್ನಾಟಕದ ವಿವಿಧ ಊರುಗಳಿಂದ ಸಂಗ್ರಹಿಸಿದಂತಹ ಕಾವ್ಯಗಳಾಗಿವೆ. ಇದು ಜೀ.ಶಂ.ಪ ಅವರಿಗೆ ಹೆಚ್ಚಿನ ಹೆಸರನ್ನು ತಂದುಕೊಟ್ಟಿತು. ಅಲ್ಲಿಂದ ಹೆಚ್ಚು ಜನಪದ ಸಂಪಾದನೆಯ ಕಾರ್ಯದಲ್ಲಿ ತೊಡಗಿದರು. ಇನ್ನೊಬ್ಬ ಪ್ರಮುಖ ಜನಪದ ವಿದ್ವಾಂಸರೆಂದರೆ, ಕ.ರಾ.ಕೃ. ಅವರು ಇವರು ಜನಪದ ಕಾವ್ಯ ಪ್ರಕಾರದಲ್ಲಿ ಹೆಚ್ಚಿನ ಸಂಪಾದನೆ ಕಾರ್ಯ ಮಾಡಿದವರು. ಇವರ ಕೊಡುಗೆಯಿಂದ ಜನಪದ ಕ್ಷೇತ್ರವು ಶ್ರೀಮಂತವಾಗಿದೆ.

ಕ.ರಾ.ಕೃ. ಅವರು ಮತ್ತು ಜೀ.ಶಂ.ಪ ಅವರು ಬಯಲುಸೀಮೆಯ ಹಳ್ಳಿಗಳಲ್ಲಿ ಕೆಲವು ಅಪರೂಪದ ಕಥನಗೀತೆಗಳನ್ನು ಬಯಲು ಸೀಮೆಯ ಸಂಪ್ರದಾಯದ ವಿವಿಧ ಹಾಡುಗಳನ್ನು ಸಂಗ್ರಹಣೆಯನ್ನು ಮಾಡಿದ್ದಾರೆ. ಇವರು ಬಯಲುಸೀಮೆಯ ಹಳ್ಳಿಗಳಲ್ಲಿ ಹಬ್ಬ, ಸುಗ್ಗಿ, ಮದುವೆ ಮುಂತಾದ ಸಂದರ್ಭದಲ್ಲಿ ಭೇಟಿ ನೀಡಿ ಅವರ ಸಂಪ್ರದಾಯದ ಹಾಡುಗಳನ್ನು ರೆಕಾರ್ಡ್ ಮಾಡಿ ಅವುಗಳನ್ನು ಸಂಗ್ರಹಿಸುತ್ತಿದ್ದರು. ಕ.ರಾ.ಕೃ ಅವರು ಅಪರಿಮಿತ ಉತ್ಸಾಹದಿಂದ ಜನಪದ ಸಾಹಿತ್ಯಕ್ಷೇತ್ರವನ್ನು ಅಧ್ಯಯನ ಮಾಡಲು ತೊಡಗಿದವರು. ಇದಕ್ಕೆ ಹೆಚ್ಚು ಸಹಕಾರವನ್ನು ನೀಡಿದವರು. ಜೀ.ಶಂ.ಪ. ಅವರು ಇವರ ಪ್ರೇರಣೆಯಿಂದ ಹಳ್ಳಿ ಪ್ರದೇಶದಲ್ಲಿ ಕ್ಷೇತ್ರಕಾರ್ಯವನ್ನು ಮಾಡಿ ಅಪಾರವಾದ ಜನಪದ ಗೀತೆಗಳನ್ನು ಸಂಗ್ರಹ ಮಾಡಿದರು. ನಂತರ ಇಪ್ಪತ್ತೈದು ಸಂಕಲನಗಳನ್ನು ಹೊರತಂದರು. ಇದರಲ್ಲಿ ಗೀತೆಗಳು ಮತ್ತು ಕಥನಗೀತೆಗಳು ಹೆಚ್ಚಿನ ಸಂಖ್ಯೆಯಲ್ಲಿದ್ದವು. ಕ.ರಾ.ಕೃ ಅವರು ಮೊದಲಬಾರಿಗೆ 'ಜೇನುಹನಿಗಳು' ಎಂಬಂತಹ ಸಂಕಲನವನ್ನು ಪ್ರಕಟಮಾಡಿತು. ಇದು ಹಳ್ಳಿ ಜನರ ರಸಗೀತೆಗಳನ್ನು ಕೂಡಿರುವ ಸಂಕಲನವಾಗಿದೆ. ೧೯೫೭ರಲ್ಲಿ ಜನಪದ ಪ್ರೇಮಗೀತೆಗಳು, ಮಲ್ಲಿಗೆ ನಗುತಾವೆ ಎಂಬುವಂತಹ ಸಂಕಲನವನ್ನು ಬೆಳಕಿಗೆ ತಂದರು. 'ಮಲ್ಲಿಗೆ ನಗುತಾವೆ' ಸಂಕಲನವು ವಿಶಿಷ್ಟ ಕೃತಿಯಾಗಿದೆ. ಕ.ರಾ.ಕೃ ಅವರಿಗೆ ಬೇರೆ ಎಲ್ಲಾ ಸಂಕಲನಗಳಿಗಿಂತ ಈ ಸಂಕಲನವು ಹೆಚ್ಚು ಜನಪ್ರಿಯತೆಯನ್ನು ತಂದುಕೊಟ್ಟಿತು. ಬಯಲುಸೀಮೆಯ ಕೃತಿಗಳನ್ನು ಸಂಗ್ರಹಿಸಿ ಅವುಗಳಲ್ಲಿ ಮುಖ್ಯವಾದಂತಹ ಕಾವ್ಯಗಳನ್ನು ಆರಿಸಿಕೊಂಡು ಕೃತಿಯನ್ನು ಪ್ರಕಟಣೆ ಮಾಡಿದರು. ಈ ಕೃತಿಯಲ್ಲಿ ವಿವಿಧ ರೀತಿಯ ಸ್ತುತಿ ಗೀತೆಗಳನ್ನು ವಿಸ್ತಾರವಾಗಿ ರಚನೆಯನ್ನು ಮಾಡಲ್ಪಟ್ಟಿವೆ. ಇದರಲ್ಲಿ ಕೋಲಾಟ, ಬೀಸುವ ಪದಗಳು, ಜಾತ್ರೆ, ಉತ್ಸವಕ್ಕೆ ಸಂಬಂಧಪಟ್ಟ ಹಾಡುಗಳು, ಕೆಲವು ದೇವರಿಗೆ ಸಂಬಂಧಿಸಿರುವ ಹಾಡುಗಳು ಮತ್ತು ಭಾವಗೀತೆಗಳನ್ನು ಒಳಗೊಂಡಿರುವುದನ್ನು ಗಮನಿಸಬಹುದು. ಇದರ ಜೊತೆಯಲ್ಲಿ ಕುಟುಂಬ ವಿವಿಧ ಗುಣಲಕ್ಷಣಗಳನ್ನು ತಿಳಿಸುವಂತಹ ಗೀತೆಗಳು ಮತ್ತು ಬಿಡಿ ಹಾಡುಗಳು ಇದರಲ್ಲಿವೆ. 'ಮಲ್ಲಿಗೆ ನಗುತಾವೆ' ಸಂಕಲನವು ಜನಪದ ಸಾಹಿತ್ಯದಲ್ಲಿ ವಿಶೇಷ ಸ್ಥಾನವನ್ನು ಪಡೆದುಕೊಂಡಿದೆ.

ಜನಪದ ಗೀತಪ್ರಕಾರದಲ್ಲಿ ಜೀ.ಶಂ.ಪ. ಅವರು ಹೆಚ್ಚು ಕೃತಿಗಳನ್ನು ಸಂಪಾದನೆ ಮಾಡಿದ್ದಾರೆ. ಇವರ ಜೊತೆಯಲ್ಲಿ ಇವರಿಗಿಂತ ಮುಂಚಿತವಾಗಿ ಸಿಂಪಿ ಲಿಂಗಣ್ಣ ನವರು ಗೀತಪ್ರಕಾರದ ಕಾವ್ಯಗಳನ್ನು ಸಂಪಾದನೆ ಮಾಡಿದರು ಡಾ.ಗದ್ದಗಿಮಠರವರು ಕೂಡ ಹಲವು ಕೃತಿಗಳನ್ನು ಸಂಪಾದನೆ ಮಾಡಿದರೂ. ಕೂಡ ಕ.ರಾ.ಕೃ ಅವರು ವಿಶಿಷ್ಟವಾಗಿದ್ದ ವಿವಿಧ ರೀತಿಯ ಗೀತಪ್ರಕಾರವನ್ನು ಸಂಗ್ರಹಿಸಿರುವುದು. ಜನಪದ ಶ್ರೀಮಂತಿಕೆಯಿಂದ ಕೂಡಿದೆ.

ಕೋಲುಮಲ್ಲಿಗೆ ಕೋಲೆ, ಹೆಣ್ಣು ಕೊಟ್ಟೇವು, ಸಂಪಿಗೆ ಅರಳ್ಯಾವೆ, ಹಚ್ಚ ಹೊಂಬಾಳೆ ಕುಣಿದಾವೆ, ನಾಡ ಮೇಲೆಲ್ಲ ಹರಿದಾವೆ ಮುಂತಾದ ಕೃತಿಗಳು ಕ.ರಾ.ಕೃ ಅವರ ವಿಶಿಷ್ಟ ಜನಪದ ಸಂಪಾದನ ಕೃತಗಳು. ಕ.ರಾ.ಕೃ ಅವರು ಸಂಪಾದಿಸಿದಂತಹ ಹಲವು ಜನಪದ ಸಂಪಾದನ ಕೃತಿಗಳು ಜನಪದ ಶ್ರೇಷ್ಟತೆಗೆ ಕಾರಣವಾಗಿದೆ. ಹೀಗೆ ಜನಪದ ಕ್ಷೇತ್ರದ ಮೇಲೆ ಹೆಚ್ಚಿನ ಕಾಳಜಿಯನ್ನು ತೋರಿ, ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಸಂಪಾದನೆಯ ಕಾರ್ಯವನ್ನು ಮಾಡಿ ವಿವಿಧ ಕೃತಿಗಳನ್ನು ಜನಪದ ಸಾಹಿತ್ಯಕ್ಕೆ ಕೊಡುಗೆಯಾಗಿ ನೀಡಿದ್ದಾರೆ.

ಜನಪದ ಗೀತೆಗಳ ಸಂಪಾದನೆಯ ಕಾರ್ಯದಲ್ಲಿ ತೊಡಗಿದ ವಿದ್ವಾಂಸರಲ್ಲಿ ಎಚ್.ಎಲ್.ನಾಗೇಗೌಡರು ಸಹ ಪ್ರಮುಖ ಜನಪದ ವಿದ್ವಾಂಸರು. ಇವರು ತಮ್ಮ ಊರನ್ನೇ ವಸ್ತುವಾಗಿಸಿಕೊಂಡು ಆ ಊರಿನ ಜನಪದದ ವಿವಿಧ ಮಗ್ಗುಲುಗಳನ್ನು ಅಧ್ಯಯನ ಮಾಡಿ 'ನನ್ನೂರು' ಎಂಬ ಕೃತಿ ರಚನೆ ಮಾಡಿದರು. ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ ಬೆಳೆದ ನಾಗೇ ಗೌಡರು, ಗ್ರಾಮಾಂತರ ಬದುಕಿನ ಸಮಸ್ತ ಜನರ ಬದುಕನ್ನು ಎಳೆ ಎಳೆಯಾಗಿ ಅಧ್ಯಯನ ಮಾಡಿದರು. ಜಾನಪದ ವಿಷಯಗಳನ್ನು ಮತ್ತು ಸಾಹಿತ್ಯವನ್ನು ಆಯಾ ಸಮಯಕ್ಕೆ ತಕ್ಕಂತೆ ಸಂಪಾದನೆಯನ್ನು ಮಾಡಿದ್ದಾರೆ. ನಾಗೇಗೌಡರು ತುಮಕೂರು ಮತ್ತು ಮಂಡ್ಯ ಜಿಲ್ಲೆಯ ಹಳ್ಳಿಗಳ ವಿವಿಧ ಜನಪದ ಕಲಾವಿದರಿಂದ ಕೃತಿಗಳ ಸಂಗ್ರಹಣೆಯನ್ನು ಮಾಡಿದ್ದಾರೆ. ಇವರಿಗೆ ಜನಪದ ಸಾಹಿತ್ಯದ ಬಗ್ಗೆ ಅಪಾರವಾದ ಮತ್ತು ವಿಶೇಷವಾದ ಒಲವು. ತಮ್ಮ ಕೆಲಸದ ವೇಳೆಯನ್ನು ಹೊರತುಪಡಿಸಿ ಉಳಿದ ಸಮಯವನ್ನು ಜನಪದ ಕ್ಷೇತ್ರಕಾರ್ಯದಲ್ಲಿ ತೊಡಗುತ್ತಿದ್ದರು. ಇವರು ಸಂಪಾದಿಸಿದ ಹೆಳವರ ಪದಗಳು, ಮದುವೆಯ ಪದಗಳು, ಕೋಲಾಟದ ಪದಗಳು, ಹೊಗಳುವ ಪದಗಳು, ಕಥನಗೀತೆಗಳು ಹೀಗೆ ಅನೇಕ ಜನಪದ ಪ್ರಕಾರಗಳನ್ನು ಸಂಗ್ರಹಿಸಿದ್ದಾರೆ.

ಜನಪದ ಸಂಪಾದನೆಯ ಕಾರ್ಯ ಕರ್ನಾಟಕದಲ್ಲಿ ತನ್ನದೆಯಾದ ಮಹತ್ವವನ್ನು ಪಡೆದುಕೊಂಡಿದೆ. ಜನಪದ ಕಾವ್ಯದ ವಿವಿಧ ಪ್ರಕಾರಗಳನ್ನು ಅಧ್ಯಯನ ಮಾಡುತ್ತ, ಜನಪದ ಉನ್ನತಮಟ್ಟದಲ್ಲಿ ಹಿರಿಮೆಯನ್ನು ಕೊಂಡೊಯ್ದವರು. ಜನಪದ ಸಂಗ್ರಹಕಾರರು, ಪ್ರಸಿದ್ಧ ಜನಪದ ವಿದ್ವಾಂಸರು ಜನಪದ ಮೌಲ್ಯ ಮತ್ತು ಮಹತ್ವವನ್ನು ಮೂಲದಲ್ಲಿ ತಿಳಿದು ಅದರ ರೂಪ ಲಯವನ್ನು ಜನತೆಗೆ ತಿಳಿಸಿದಂಥವರು. ಇಂಥವರಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಮಧುರಚೆನ್ನರು, ಬಿ.ಎಂ.ಶ್ರೀ, ಬೇಂದ್ರೆಯವರು ನವೋದಯ ಕಾಲದಲ್ಲಿ ಜನಪದಸಾಹಿತ್ಯ ನೆಲೆ ಬೆಲೆಯನ್ನು ಕುರಿತು ಅಂದಿನ ಜನಪದ ಸಂಪಾದನ ಕಾರ್ಯದಲ್ಲಿ ತೊಡಗಿದವರಿಗೆ ಪ್ರೇರಣೆಯನ್ನು ನೀಡಿದರು. ಇವರ ಜೊತೆಯಲ್ಲಿ ದೇವುಡು ಅವರು 'ಕರ್ನಾಟಕ ಸಂಸ್ಕೃತಿ' ಲೇಖನದಲ್ಲಿ ಸಂಸ್ಕೃತಿ ಮತ್ತು ಜನಪದಕ್ಕೆ ಕುರಿತಂತೆ ಹಲವಾರು ಮಾತುಗಳನ್ನು ಆಡಿದ್ದಾರೆ. ಜನಪದ

ಹಾಸ್ಯ, ನಿತ್ಯಜೀವನದ ಕಷ್ಟ ನಷ್ಟಗಳು, ಹಳ್ಳಿಯ ಹೆಣ್ಣು ಮಕ್ಕಳ ಹಾಡುಗಳು, ಗರತಿಯ ಹಾಡು, ಮಕ್ಕಳ ಲಾಲಿ ಹಾಡುಗಳು, ಮದುವೆಯ ಹಾಡುಗಳು, ಲಾವಣಿ ಹಾಡುಗಳು ಹೀಗೆ ವಿಶ್ಲೇಷಣೆ ಮಾಡಿದರೆ ಸಿಂಪಿ ಲಿಂಗಣ್ಣನವರು ಜನಪದ ಕಾವ್ಯಗಳ ಸಂಪಾದನೆಯಲ್ಲಿ ಮಹತ್ವದ ಕಾರ್ಯವನ್ನು ಕೈಗೊಂಡು ಗರತಿ ಬದುಕಿನ ನಾನಾ ಮಹತ್ವವನ್ನು ತಿಳಿಸಿಕೊಟ್ಟವರು. ಜೀವನದುದ್ದಕ್ಕೂ ಹೆಣ್ಣಿನ ಬದುಕನ್ನು ತಮ್ಮ ಜನಪದ ಕಾವ್ಯ ಸಂಗ್ರಹಣೆಯಲ್ಲಿ ಸಂಪಾದಿಸಿದ್ದಾರೆ.

ಸಿಂಪಿ ಲಿಂಗಣ್ಣನವರ ನಂತರ ಜನಪದ ಕಾವ್ಯ ಸಂಪಾದನೆಯಲ್ಲಿ ತೊಡಗಿದ ಜನಪದ ವಿದ್ವಾಂಸರು ಎಂದರೆ ಡಾ.ಗದ್ದುಗುಮಠ ಅವರು 'ಕನ್ನಡ ಜನಪದ ಗೀತೆಗಳನ್ನು' ೧೯೬೩ರಲ್ಲಿ ಪ್ರಕಟಿಸಿದರೆ. ಗೀತಪ್ರಕಾರಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದ್ದಾರೆ. ಈ ವಿಷಯಕ್ಕೆ ಇವರಿಗೆ ಪಿಎಚ್.ಡಿ. ಪದವಿಯನ್ನು ನೀಡಲಾಗಿದೆ. ಇದು ಜನಪದ ಸಾಹಿತ್ಯ ಕುರಿತ ಮೊದಲ ಪಿಎಚ್.ಡಿ.ಪದವಿಯಾಗಿದೆ. ಇವರ ಜನಪದಲ್ಲಿ ಅಪಾರ ಶ್ರಮವನ್ನು ಹಾಕಿದ್ದಾರೆ. ಕನ್ನಡ ಜನಪದ ಉತ್ತುಂಗ ಶಿಖರವನ್ನು ಹೇರಲು ಕಾರಣರಾಗಿದ್ದಾರೆ. ಡಾ.ಗದ್ದಗಿಮಠ ಅವರು ಅಪಾರವಾದ ಜನಪದ ಸಾಹಿತ್ಯ ಸಂಗ್ರಹದಲ್ಲಿ ತೊಡಗಿದ್ದವರು. ಇವರು ಸ್ತುತಿಪದಗಳು, ಹಳ್ಳಿಯ ಕುಣಿತಗಳು, ಮಕ್ಕಳ ಆಟದ ಹಾಡುಗಳು, ಹಾಸ್ಯದ ಹಾಡುಗಳು, ಸುಗ್ಗಿಯ ಸಂಪ್ರದಾಯ, ಹಳ್ಳಿಯ ಹಬ್ಬದ ಹಾಡುಗಳು, ಹಂತಿಯ ಹಾಡುಗಳು. ಹೀಗೆ ಹಲವು ಜನಪದ ಕಾವ್ಯಪ್ರಕಾರಗಳನ್ನು ಸಂಪಾದಿಸಿದ್ದಾರೆ.

ಗದ್ದಗಿಮಠರವರ ನಂತರ ಜಾನಪದ ಕ್ಷೇತ್ರದಲ್ಲಿ ಕಂಡುಬರುವಂತಹ ಮತ್ತೊಬ್ಬ ಸಾಹಿತ್ಯ ವಿದ್ವಾಂಸರೆಂದರೆ 'ಶಿವರಾಮ ಕಾರಂತರು' ಇವರು ೧೯೬೬ರಲ್ಲಿ 'ಜಾನಪದ ಗೀತೆಗಳು' ಎಂಬಂತಹ ಕೃತಿಯನ್ನು ಸಂಪಾದಿಸಿದ್ದಾರೆ. ಇದು ಜಾನಪದ ಗೀತ ಪ್ರಕಾರದ ಕೃತಿಯಾಗಿದೆ. ಜನಪದ ಗೀತೆಗಳ ಬಗೆಗೆ ವಿಶಿಷ್ಟವಾದ ಬದಲಾವಣೆಯನ್ನು ತಮ್ಮ ಆಲೋಚನೆಯ ಮೂಲಕ ಜನಪದ ವಿದ್ವಾಂಸರ ಗಮನವನ್ನು ಸೆಳೆಯುತ್ತಾರೆ. 'ಜಾನಪದ ಗೀತೆಗಳು' ಕೃತಿಯಲ್ಲಿ ಗೀತೆಗಳ ವಸ್ತು ಅದರ ಪ್ರಕಾರಗಳು ತಿಳಿಸಿದ್ದಾರೆ. ಜೊತೆಗೆ ಮಾರ್ಗ ಮತ್ತು ದೇಸಿ ವ್ಯತ್ಯಾಸವನ್ನು ವಿವೇಚಿಸಿದ್ದಾರೆ. ಕಾರಂತರು ಬೆರಳೆಣಿಕೆಯಷ್ಟು ಕೊಡುಗೆಯನ್ನು ಜನಪದಕ್ಕೆ ನೀಡಿರುವುದನ್ನು ಗಮನಿಸಬಹುದು.

ಜನಪದ ಸಂಪಾದನೆಯು ಆರಂಭದಿಂದ ತನ್ನದೆಯಾದ ನೆಲೆಯನ್ನು ಗುರುತಿಸಿಕೊಂಡು ನಡೆಯುತ್ತ ಬರುವಾಗ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಸಾಮಾನ್ಯ ಜನರನ್ನು ದೃಷ್ಟಿಯಲ್ಲಿಟ್ಟುಕೊಂಡು ಜನಪದ ಕೃತಿಗಳನ್ನು ಸಂಗ್ರಹಿಸಲಾಗಿದೆ. ಜನಪದವನ್ನು ಏಕೆ ಸಂಪಾದಿಸಬೇಕು? ಅದರ ಮೌಲ್ಯವೇನು ಎಂಬ ಪ್ರಶ್ನೆಗೆ ಕೆಲವು ಜಾನಪದ ವಿದ್ವಾಂಸರು

ಸಂಪಾದಿಸಿರುವ ಕೃತಿಗಳೇ ಉತ್ತಮವಾಗಿವೆ. ಜನಪದ ಸಾಹಿತ್ಯ ಆಳವಾದ ಅಧ್ಯಯನದಿಂದ ವಿದ್ವಾಂಸರ ಪರಿಶ್ರಮದಿಂದ ಜನಪದ ಕಾವ್ಯಪ್ರಕಾರವೂ ಶ್ರೀಮಂತವಾಗಿದೆ ಎಂಬುದಾಗಿ ಹೇಳಬಹುದು.

ಉತ್ತರ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯವಾಗಿರುವಂತಹ ಅನೇಕ ಕಥನಗೀತೆಗಳು ಗಮನಿಸಬಹುದು. ಆದರೆ ಜಾನಪದ ಬಯಲುನಾಟಕಕ್ಕೆ ಸೇರಿರುವಂತಹ 'ಸಂಗ್ಯಾಬಾಳ್ಯಾ' ಎಂಬಂತಹ ಜನಪದ ನಾಟಕವನ್ನು ಕುರ್ತಕೋಟಿ ಮತ್ತು ಚಂದ್ರಶೇಖರ ಕಂಬಾರರು ಸಂಪಾದನೆಯನ್ನು ಮಾಡಿದ್ದಾರೆ. ಈ 'ಸಂಗ್ಯಾಬಾಳ್ಯಾ' ಕೃತಿಯು ನಾಟಕ ಪ್ರಕಾರವಾಗಿದ್ದರೂ ಜನಪದ ಧಾಟಿಯನ್ನೇ ಮೂಲವಾಗಿ ಹೊಂದಿರುವುದರಿಂದ ಹಾಗೂ ಉತ್ತರ ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಕಾವ್ಯರೂಪದಲ್ಲಿ ಇದನ್ನು ಹೇಳುವ ಸಂಪ್ರದಾಯ ಇರುವುದನ್ನು ಗಮನಿಸಬಹುದು. ಆದರೂ ಕಂಬಾರರು ಜನಪದ ಕ್ಷೇತ್ರದಲ್ಲಿ ಅಪಾರವಾದ ಕೆಲಸವನ್ನು ಮಾಡಿದ್ದಾರೆ. ಎರಡನೇ ಘಟ್ಟದ ಜನಪದ ಕಾವ್ಯ ಸಂಪಾದನೆಯ ಕಾರ್ಯದಲ್ಲಿ ಕೊನೆಯಲ್ಲಿ ಪ್ರಮುಖ ಎನಿಸುವವರು ಜೀ.ಶಂ.ಪರಮಶಿವಯ್ಯನವರು. ಇವರು ಹೆಚ್ಚು ಸಂಗ್ರಹಣೆ ಕಾರ್ಯವನ್ನು ಮಾಡಿದ್ದು, ಮಂಡ್ಯ, ಮೈಸೂರು, ಹಾಸನ, ತುಮಕೂರು ಹಾಗೂ ಚಿತ್ರದುರ್ಗ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡು, ಜನಪದ ವಿವಿಧ ಕಾವ್ಯ ಪ್ರಕಾರದ ಕಥನಗೀತೆಗಳನ್ನು ಸಂಗ್ರಹಣೆಯನ್ನು ಮಾಡಿದ್ದಾರೆ. ಅವುಗಳೆಂದರೆ ಹೆಳವರ ಕಥೆಗಳು, ಮಂಟೇಸ್ವಾಮಿ ಕಥೆಗಳು, ಕಂಸಾಳೆ ಪದಗಳು, ಜುಂಜಪ್ಪನ ಕತೆಗಳು, ತಂಬೂರಿಯ ಕಥೆಗಳೂ, ದೊಂಬಿದಾಸರ ಕತೆಗಳು, ಹೊನ್ನಾಲದೇವಿ, ಗುಣಸಾಗರಿ, ಉತ್ತರ ದೇವಿ, ಭೈರವ–ಮಾಳವ್ವ, ಗಂಗೇ ಗೌರಿ ಮೊದಲಾದಂತಹ ಕಥನ ಗೀತೆಗಳನ್ನೂ ಸಂಪಾದನೆಯನ್ನು ಮಾಡಿರುವುದನ್ನು ತಿಳಿಯಬಹುದು. ಜೀ.ಶಂ.ಪ. ಅವರು ಸಂಪಾದಿಸಿರುವ ಕೃತಿಗಳಲ್ಲಿ ಹೆಚ್ಚಿನದಾಗಿ ಕಾವ್ಯರೂಪದ್ದಾಗಿರುವುದರಿಂದ ಕಥೆಗಳು ಒಳಗೊಂಡಿರುವುದನ್ನು ತಿಳಿಯಬಹುದು. ಆದರೂ ಮೇಲಿನ ಕೃತಿಗಳು ಹೆಚ್ಚು ಕಾವ್ಯಗಳಾಗಿರುವುದು ಇಂದಿಗೂ ಗಮನಾರ್ಹ.

ಒಟ್ಟಿನಲ್ಲಿ ಎರಡನೆಯ ಘಟ್ಟದ ಸಂಪಾದನೆಯು ಅನೇಕ ಜನಪದ ವಿದ್ವಾಂಸರಿಂದ ಸಾವಿರಾರು ಕಾವ್ಯಗಳು ಸಂಗ್ರಹಿಸಲ್ಪಟ್ಟವು. ಕರ್ನಾಟಕದ ವಿವಿಧ ಭಾಗಗಳಲ್ಲಿ ವಿದ್ವಾಂಸರು ಸಂಪಾದನೆಯ ಕಾರ್ಯದಲ್ಲಿ ತೊಡಗಿ, ಜನಪದ ಕಾವ್ಯವನ್ನು ಬೆಳೆಸುತ್ತಾ ಬಂದರು. ಇದರಲ್ಲಿ ಮತಿಘಟ್ಟ ಕೃಷ್ಣಮೂರ್ತಿ, ಅರ್ಚಕ ರಂಗಸ್ವಾಮಿ, ಡಾ.ಗದ್ದಗಿಮಠ, ಕ.ರಾ.ಕೃ, ಗೊ.ರು.ಚನ್ನಬಸಪ್ಪ, ಜೀ.ಶ.ಪರಮಶಿವಯ್ಯ, ಚಂದ್ರಶೇಖರ ಕಂಬಾರರು ಎರಡನೆ ಘಟ್ಟದ ಸಂಪಾದನೆಯ ಕಾರ್ಯದಲ್ಲಿ ಯಶಸ್ವಿಯಾದ ಸಂಪಾದನೆಯ ಕಾರ್ಯವನ್ನು ಗುರುತಿಸಬಹುದು.

ಕೊನೆ ಟಿಪ್ಪಣಿ

೧. ಜಾನಪದ ಕೆಲವು ಮುಖಗಳು, ಪು.೧೪೭

೨. ಜನಪದ ಭಾವಗೀತೆಗಳು, ಪು.೮೩

೩. ಮಲ್ಲಿಗೆ ದಂಡೆ, ಪು.೧೯

೪. ಜಾನಪದ ಕೆಲವು ಮುಖಗಳು, ಪು.೧೮೩

ಅಧ್ಯಾಯ ಐದು

ಜನಪದ ಸಾಹಿತ್ಯದ ಸಂಪಾದನೆಯ ಇತ್ತೀಚಿನ ಒಲವುಗಳು

ಅಧ್ಯಾಯ ಐದು

ಜನಪದ ಸಾಹಿತ್ಯದ ಸಂಪಾದನೆಯ ಇತ್ತೀಚಿನ ಒಲವುಗಳು

ಕನ್ನಡ ಜನಪದ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸಹೊಸ ತಿಳುವಳಿಕೆಯನ್ನು ತನ್ನ ಭಾಗಕ್ಕೆ ಸೇರಿಸಿಕೊಳ್ಳುತ್ತ ಬರುತ್ತಿದೆ. ವಿವಿಧ ಜನಪದರು ಸೇರಿಕೊಂಡಿರುವ ಈ ಸಂಪಾದನೆಯಲ್ಲಿ ಕಾಲದಿಂದ ಕಾಲಕ್ಕೆ ಹೊಸ ರೀತಿಯ ಚಿಂತನೆ ಮತ್ತು ಸಂಗ್ರಹಣೆಯನ್ನು ಮಾಡುತ್ತ ಬಂದಿದ್ದಾರೆ. ಕನ್ನಡ ಜನಪದ ಅಧ್ಯಯನ ವಾಙ್ಮಯದಲ್ಲಿ, ಬದಲಾಗುತ್ತಿರುವ ಜಾಗತಿಕ ಕಾಲಮಾನದಲ್ಲಿ ವಿವಿಧ ರೀತಿಯ ಅಧ್ಯಯನ ಕ್ರಮಗಳು ರೂಪುಗೊಳ್ಳುತ್ತಿರುವುದು. ಗಮನಿಸಬೇಕಾದ ಸಂಗತಿಯಾಗಿದೆ. ಹಿಂದೆ ಇದ್ದಂತಹ ಚಿಂತನಕ್ರಮಗಳು, ಸಾಂಪ್ರದಾಯಿಕ ಚಿಂತನೆಗಳು, ಜಾಗತೀಕರಣ ಕಾಲದಲ್ಲಿ ಬದಲಾವಣೆಯ ನಿಟ್ಟಿನಲ್ಲಿ ಇದೆ. "ಜನಪದ ಮಹಾಕಾವ್ಯ ಸಂಗ್ರಹ ಸಂಪಾದನೆಯಲ್ಲಿ ಎರಡು ಮಾದರಿಗಳು ರೂಢಿಗತವಾಗಿದೆ. ಒಂದು ಪ್ರಾಚೀನ ಕೃತಿಗಳ ಗ್ರಂಥ ಸಂಪಾದನೆಯ ಕ್ರಮ, ಇನ್ನೊಂದು ಒಬ್ಬ ಕಲಾವಿದ ಅಥವಾ ಕಲಾತಂಡ ಹಾಡಿದ ಮಹಾಕಾವ್ಯವನ್ನು ಲಿಪ್ಯಂತರ ಮಾಡಿ ಪ್ರಕಟಿಸುವುದು."೧ ಈ ಎರಡೂ ಕ್ರಮಗಳಲ್ಲಿ ಇರುವಂತಹ ಭಿನ್ನ ಭಿನ್ನ ಅಭಿಪ್ರಾಯಗಳನ್ನು ಸಂಪಾದಕರು ಅಧ್ಯಯನ ಮಾಡಿ ಮಾದರಿಯೊಂದನ್ನು ಕಟ್ಟಿಕೊಡುವಲ್ಲಿ ಸಂಪಾದನ ಕಾರ್ಯವೂ ಬಹುಮುಖ್ಯವಾಗಿದೆ.

ಮೊದಲು ಮತ್ತು ಎರಡನೆಯ ಕಾಲಘಟ್ಟದ ಸಂಪಾದನೆಯ ಕಾರ್ಯಗಳು ಜನಪದ ಕಾವ್ಯ ಸಂಪಾದನಾಕಾರರು ವಿವಿಧ ಶಿಷ್ಟ ಮಹಾಕಾವ್ಯಗಳ ದೊಡ್ಡ ಪ್ರಮಾಣದ ಪಠ್ಯದ ಕಲ್ಪನೆಯಲ್ಲಿ ಮೌಖಿಕ ಕಾವ್ಯಗಳಿಗೂ ಅನ್ವಯಿಸಿಕೊಂಡು ಸಂಗ್ರಹ ಹಾಗೂ ಸಂಪಾದನೆಗಳನ್ನು ಮಾಡಿದ್ದಾರೆ. ಇದರಿಂದ ಜನಪದ ಮಹಾಕಾವ್ಯಗಳು ನಿರೀಕ್ಷಿಸಿದ ಮಟ್ಟದಲ್ಲಿ ಸಂಪಾದನಾಕಾರರನ್ನು ತಲುಪುವಲ್ಲಿ ಎಷ್ಟರ ಮಟ್ಟಿಗೆ ಸಹಾಯಕಾರಿಯಾಗಿವೆ ಎಂಬುದನ್ನು ಮೂರನೆಯ ಆದರೆ ಹೊಸ ಅಧ್ಯಯನ ವಿಧಾನದಿಂದ ತಿಳಿಯಬಹುದು. ಕನ್ನಡದ ಅದೆಷ್ಟೋ ಹಿಂದಿನ ಕಾವ್ಯಗಳು

ಸಂಗ್ರಹ ಸಂಪಾದನೆಗಳು ಬಂದ ಹಾಗೆ ಮೌಖಿಕ ಕಾವ್ಯಗಳು ತನ್ನದೆಯಾದ ಗುಣವನ್ನು ಉಳಿಸಿಕೊಂಡು ಬಂದಿವೆ. ಈ ಹಿಂದೆ ಜನಪದ ಸಂಪಾದನೆಯ ಕಾರ್ಯವು ಜನಪದವನ್ನು ಒಟ್ಟಾಗಿ ಅಧ್ಯಯನ ಮಾಡುವ ವಿಧಾನ ಬಂದಿತು. ಆದರೆ ಆ ವಿಧಾನ ಬದಲಾಗಿದೆ.

ಸ್ವಾತಂತ್ರ್ಯೋತ್ತರ ಜನಪದ ಸಾಹಿತ್ಯ ಸಂಪಾದನೆಯ ಕಾರ್ಯವು ಹಲವಾರು ವಿದ್ವಾಂಸರಿಂದ ನಡೆದಿದೆ. ಈ ವಿದ್ವಾಂಸರು ಮೌಖಿಕ ಸಂಪ್ರದಾಯದ ಎಲ್ಲಾ ರೀತಿಯ ಕಾವ್ಯಗಳನ್ನು ಸಂಗ್ರಹಣೆ ಮಾಡಿದರು. ಕೆಲವು ಸಂಪಾದನೆಯಲ್ಲಿ ಸಂಪಾದಕರ ವಿವಿಧ ನೆಲೆಗಳ ಕಾರ್ಯಗಳು ವಿಫಲವಾಗಿವೆ. ಶುದ್ಧ ಮೌಖಿಕ ಸಮುದಾಯದ ಕಾವ್ಯಗಳನ್ನೇ ಸಂಗ್ರಹಣೆ ಮಾಡಬೇಕು ಎಂಬ ನಿಯಮ ಹಾಕಿಕೊಂಡಿದ್ದಾರೆ. ಇದರಿಂದ ದೂರವಿರುವಂತಹ ಕಾವ್ಯಗಳನ್ನು ಸಂಪಾದನೆಯಿಂದ ದೂರ ಮಾಡಿರುವುದನ್ನು ಗಮನಿಸಬಹುದು. ಎರಡನೇ ಘಟ್ಟದ ಸಂಪಾದನೆಯ ಕಾರ್ಯವು ಹಳ್ಳಿ ಮತ್ತು ಪ್ರದೇಶದ ಆಧಾರವಾಗಿಟ್ಟುಕೊಂಡೇ ಅಧ್ಯಯನವಾಗಿರಬಹುದು ಎನಿಸುತ್ತದೆ. ಏಕೆಂದರೆ ಯಾವುದೇ ರೀತಿಯ ಕೆಳಸ್ತರದ ಸಮುದಾಯದ ಸಂಸ್ಕೃತಿಯ ಜನಪದ ಚರಿತ್ರೆಯನ್ನು, ಅದರ ಸಂಸ್ಕೃತಿಯನ್ನು ಹೆಚ್ಚು ಅಧ್ಯಯನ ಮಾಡಿಲ್ಲ. ಶಿಷ್ಟ ಮತ್ತು ಪರಿಶಿಷ್ಟ ಎಂಬ ಕಲ್ಪನೆಯು ಈ ಹಂತದಲ್ಲಿ ಕಾರ್ಯವನ್ನು ನಿರ್ವಹಿಸುವುದನ್ನು ಗಮನಿಸಬಹುದು.

ಇಪ್ಪತ್ತೊಂದನೆಯ ಶತಮಾನದಲ್ಲಿ ಜನಪದ ಸಂಪಾದನೆಯ ಕಾರ್ಯವು ವಿಭಿನ್ನ ನೆಲೆಯನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದೆ. ಜನಪದ ವಿವಿಧ ಪ್ರಕಾರಗಳ ಬಗ್ಗೆ ಈಗಾಗಲೇ ಈ ಹಿಂದೆ ಹೆಚ್ಚು ಅಧ್ಯಯನಗಳು ನಡೆದಿವೆ, ಕಾವ್ಯ ಸಂಗ್ರಹಣೆಯ ಮೇಲೆ ಕಥೆ, ಗಾದೆ, ಒಗಟು, ಗೀತೆ, ಒಡಪು ಮುಂತಾದಂತಹ ಪ್ರಕಾರಗಳಲ್ಲಿ ಹೆಚ್ಚಿನ ಅಧ್ಯಯನ ನಡೆದಿದೆ ಇಂದು ವಿದ್ವಾಂಸರ ಸಂಪಾದನೆಯ ವಿಧಾನವು ಕಾಲದಿಂದ ಕಾಲಕ್ಕೆ ಬದಲಾವಣೆಯನ್ನು ಪಡೆಯುತ್ತ ಜನಪದ ಸಾಹಿತ್ಯ ಸಂಗ್ರಹಣೆಯು ಹೊಸ ಒಲವಿನತ್ತ ನಡೆದಿರುವುದನ್ನು ಗಮನಿಸಬಹುದಾಗಿದೆ. ಇದರ ಜೊತೆಯಲ್ಲಿ ಹೊಸ ಹೊಸ ಆಲೋಚನೆಗಳು, ದೃಷ್ಟಿಕೋನಗಳು, ಅಧ್ಯಯನ ಮಾದರಿಗಳು ಬದಲಾಗಿ ಯಾವುದು ಜನಪದ ಎಂಬುದಾಗಿ ಗುರುತಿಸಲು ಅಸಾಧ್ಯ ಎನ್ನಲಾಗಿತ್ತೊ, ಆ ಜನಪದವನ್ನೇ ಶ್ರೇಷ್ಠತೆಯನ್ನು ತಿಳಿಸುವ ಮುಂಚೂಣಿಯಲ್ಲಿ ಇರುವುದನ್ನು ಹೊಸ ಸಂಪಾದನೆಯ ನೆಲೆಯಲ್ಲಿ ನೋಡಬಹುದು. ಒಬ್ಬ ಸಾಮಾನ್ಯ ವ್ಯಕ್ತಿ ಒಂದು ಚರಿತ್ರೆಯನ್ನು ಕಟ್ಟುವಲ್ಲಿ ಪ್ರಮುಖನಾಗುತ್ತಾನೆ. ಅದೇ ರೀತಿಯಲ್ಲಿ ಒಬ್ಬ ವ್ಯಕ್ತಿಯು ಮಾತ್ರ ತಂತ್ರಗಳನ್ನು ಬಲ್ಲವನು ಒಂದು ವಿದ್ವತ್ತನ್ನು ಮಾಡಬಹುದು. ಇದರ ಜೊತೆ ಜೊತೆಯಲ್ಲಿಯೇ ವಿವಿಧ ಪವಾಡಗಳನ್ನು ಮಾಡುತ್ತ ಬೇರೆ ಬೇರೆ ಕಾಯಕದಲ್ಲಿ ತೊಡಗಿಕೊಂಡು ಒಂದು ಸಮುದಾಯವನ್ನು ಕಟ್ಟುವ ಜನ ಸಮುದಾಯದ ಚರಿತ್ರೆಯನ್ನು ಕಟ್ಟುವಲ್ಲಿ ಪ್ರಮುಖರಾಗಿದ್ದಾರೆ. ಈ ರೀತಿಯಾಗಿ ಹೊಸ

ಸಂಪಾದಕರು ಇದರ ಅಧ್ಯಯನದಲ್ಲಿ ತೊಡಗಿರುವುದನ್ನು ನೋಡಬಹುದು. ೧೯೬೦ರ ನಂತರದ ಸಂಪಾದನೆಯ ಕಾರ್ಯಗಳು ವಿಭಿನ್ನವಾಗಿದ್ದು, ಸಂಗ್ರಹಣೆಯಲ್ಲಿ ತೊಡಗಿರುವ ವಿದ್ವಾಂಸರೂ ಸಹ ಹಲವು ಆಯ್ಕೆಗಳನ್ನು ಮಾಡಿಕೊಂಡು ಸಾಮುದಾಯಿಕ ನೆಲೆಯಲ್ಲಿ ಸಂಪಾದನೆಯು ನಡೆದಿದೆ.

ಜನಪದ ವಾಙ್ಮಯದಲ್ಲಿ ಅಥವಾ ಜನಪದ ಸಮುದಾಯದ ಅಭಿವ್ಯಕ್ತಿಯಲ್ಲಿ ವಿವಿಧ ಸಂಸ್ಕೃತಿಯನ್ನು ಒಳಗೊಂಡಂತಹ ಒಂದು ಕ್ಷೇತ್ರದಲ್ಲಿ ಅವರದೇ ಆದ ಆಚರಣೆಗಳು, ಸಾಂಸ್ಕೃತಿಕ ವಿಧಾನಗಳು, ಜೀವನಶೈಲಿ ಮುಂತಾದ ಅಭಿವ್ಯಕ್ತಿಗಳನ್ನು ನಾವು ಆಧುನಿಕ ಓದಿನಿಂದ ನಿರ್ಧರಿಸುವ ಒಂದು ಪ್ರಕಾರ ಬದ್ಧತೆಗಳು ಇರಲಿಲ್ಲ. ಹಿಂದೆ ಜನಪದ ಕಾವ್ಯಗಳ ಸಂಪಾದನೆಯಲ್ಲಿ ವ್ಯಕ್ತಿ ಮತ್ತು ಅವರ ಕಾರ್ಯದ ಅನುಗುಣವಾಗಿರುವಂತಹ ಸಂಗ್ರಹಣೆಯ ಕಾರ್ಯವು ಕಾರ್ಯರೂಪಕ್ಕೆ ಬಂದಿದ್ದರೆ, ಆಧುನಿಕ ಓದಿನ ಪರಿಣಾಮವು ಜನಪದ ಸಮುದಾಯದ ಒಂದು ನಿರ್ದಿಷ್ಟ ಪ್ರಕಾರವನ್ನು ಗುರುತಿಸಲು ಅಸಾಧ್ಯ. ಏಕೆಂದರೆ ಒಂದೊಂದು ಸಮುದಾಯದ ಅಭಿವ್ಯಕ್ತಿಯೂ ವಿಭಿನ್ನವಾಗಿರುತ್ತದೆ. ಜನಪದದಲ್ಲಿ ಗಾದೆ, ಒಗಟು, ಕಥೆ, ಕಥಾಗೀತೆ, ಕಾವ್ಯ, ಒಡಪು ಮುಂತಾದ ಜನಪದ ಪ್ರಕಾರವನ್ನು ಅಧ್ಯಯನ ಮಾಡುವರು. ಒಂದೊಂದು ವಿಭಾಗವಾಗಿ ಮಾಡಿಕೊಂಡು ಅವುಗಳನ್ನು ಅಧ್ಯಯನ ಮಾಡುವಲ್ಲಿ ಪ್ರಾಮುಖ್ಯತೆಯನ್ನು ತೋರಿದರು. ಜನಪದವು ವಿಶಾಲವಾದ ಪ್ರದೇಶವನ್ನು ಹೊಂದಿದ್ದು, ತನ್ನಲ್ಲಿ ಎಲ್ಲವನ್ನು ಅಡಕ ಮಾಡಿಕೊಂಡಿದೆ. ಇದು ಅಂದಿನ ವಿದ್ವಾಂಸರಿಗೆ ಮುಖ್ಯವಾಗಲಿಲ್ಲ. ಏಕೆಂದರೆ ಮೊದಲು ಜನಪದ ಅಧ್ಯಯನ ಮಾಡಿದವರಲ್ಲಿ ಕಾವ್ಯ ಪ್ರಕಾರವನ್ನು ಅಧ್ಯಯನ ಮಾಡಿದ್ದಾರೆ. ಇವರಿಗೆ ಮುಖ್ಯವಾಗಿದ್ದುದು ಕಾವ್ಯಗಳು. ಅದೇ ರೀತಿಯಾಗಿ ಎರಡನೆಯ ಘಟ್ಟದ ಸಂಪಾದನೆಯಲ್ಲಿ ಕಥನ ಕಾವ್ಯಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ಇದರಲ್ಲಿ ಗಾದೆ, ಒಗಟು ಮುಂತಾದಂತಹ ಜನಪದವನ್ನು ಬೇರೆ ಬೇರೆ ಅಧ್ಯಯನ ಕ್ಷೇತ್ರಕ್ಕೆ ಒಳಪಟ್ಟಿದ್ದರೂ ಆ ವಲಯ ಒಂದೆ ಆಯಾಗಿತ್ತು. ಈ ಕಾಲಘಟ್ಟದಲ್ಲಿ ಅಂದರೆ ಇಪ್ಪತ್ತೊಂದನೇ ಶತಮಾನದ ಮೊದಲ ಘಟ್ಟದಲ್ಲಿನ ನಮ್ಮ ಜನಪದ ಅಧ್ಯಯನಗಳು ಸಮಗ್ರವಾಗಿ ನೋಡುವ ವಾತಾವರಣ ನಿರ್ಮಾಣವಾಯಿತು. ಜನಪದ ಎನ್ನುವಂತಹದ್ದು ಒಂದೇ. ಇದರಲ್ಲಿ ಜನಪದದ ಎಲ್ಲಾ ಪ್ರಕಾರಗಳು ಸೇರಿಕೊಂಡಿವೆ ಎಂಬುದನ್ನು ೨೧ನೇ ಶತಮಾನದ ಸಂಪಾದಕರು ಅರಿತುಕೊಂಡರು.

ಒಂದು ಸಮುದಾಯದ ಜನಪದವನ್ನು ಯಾವುದೇ ಒಂದು ಪ್ರಕಾರದ ಮೂಲಕ ಅರ್ಥ ಮಾಡಿಕೊಳ್ಳುವುದು ಪರಿಪೂರ್ಣವಲ್ಲ. ವಿವಿಧ ದೃಷ್ಟಿಕೋನದಿಂದ ನೋಡಬೇಕು. ಉದಾಹರಣೆಗೆ: ಮಲೆಯ ಮಾದೇಶ್ವರ ಕಾವ್ಯವನ್ನು ನೀಲಗಾಗರರು ಹಾಡುತ್ತಾರೆ. ಸೋಲಿಗರು

ಮಾದಪ್ಪನ ಕಾವ್ಯವನ್ನು ಹಾಡುತ್ತಾರೆ. ಆದರೆ ಒಂದು ಸಮುದಾಯದ ಜನ ಒಂದು ರೀತಿಯಲ್ಲಿ ತಮ್ಮ ಕಾವ್ಯದಲ್ಲಿ ವರ್ಣಿಸಿದ್ದಾರೆ. ಮತ್ತೊಬ್ಬರು ಬೇರೊಂದು ರೀತಿಯಲ್ಲಿ ಕಾವ್ಯವನ್ನು ಹಾಡುತ್ತಾರೆ. ಈ ರೀತಿಯಾಗಿ ನಾವು ಒಂದೇ ಪ್ರಕಾರದಲ್ಲಿ ಅಧ್ಯಯನ ಮಾಡಲು ಅಥವಾ ಅರ್ಥ ಮಾಡಿಕೊಳ್ಳುವುದು ಸರಿಯಲ್ಲ. ಆದ್ದರಿಂದ ಸಮುದಾಯದ ಆಚರಣೆಯನ್ನಗಲಿ, ಸಂಸ್ಕೃತಿಯನ್ನಾಗಲಿ ಎಲ್ಲಾ ಅಭಿವ್ಯಕ್ತಿಯ ಹಿನ್ನೆಲೆಗಳಲ್ಲಿ ಅವುಗಳನ್ನು ನೋಡಬೇಕು ಎಂಬುದು ಈ ಕಾಲಘಟ್ಟದ ಚಿಂತನಕ್ರಮ. ಈ ಕಾಲಘಟ್ಟದಲ್ಲಿ ನಡೆಯಿತು. ಇದಕ್ಕೆ ಜನಪದ ಅಧ್ಯಯನಗಳ ಆಸಕ್ತಿ ಹೆಚ್ಚಿನ ಸಂಖ್ಯೆಯಲ್ಲಿ ಮೂಡಿತು. ಒಂದೇ ವಿಷಯವನ್ನು ಬೇರೆಬೇರೆ ನೆಲೆಯಲ್ಲಿ ಅಧ್ಯಯನ ಮಾಡುವುದಕ್ಕೆ ಮುಂದಾದರು. ಕನ್ನಡ ಜನಪದ ಸಾಹಿತ್ಯವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಇದರ ಜ್ಞಾನವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಅನೇಕ ಜ್ಞಾನಶಿಸ್ತುಗಳನ್ನು ಬೆಳೆಸಿಕೊಂಡರು. ಜೊತೆಯಲ್ಲಿ ಈ ನೆಲೆಯ ವಿಧಾನದ ಅಧ್ಯಯನಕ್ಕೆ ಮೂರು ಲೋಕವನ್ನು ನೋಡುವ ಪ್ರಯತ್ನ ಮಾಡಿದರು. ೧. ಅಚರಣಾತ್ಮಕ ನೋಟ, ೨. ಅವರ ಮೌಖಿಕ ಅಭಿವ್ಯಕ್ತಿಯ ಲೋಕದ ಪಠ್ಯ, ೩. ನಮ್ಮ ಗತಕಾಲದ ಅರಿವಿನ ಜೊತೆಯಲ್ಲಿ ಅಥವಾ ತನ್ನ ಕಾಲದ ಅರಿವಿನ ಜೊತೆಯಲ್ಲಿ ಅವುಗಳನ್ನು ನೋಡುವುದು. ಸಮುದಾಯದ ಜೊತೆಯಲ್ಲಿಯೇ ಆಚರಣೆಗಳು, ನಡೆಯುತ್ತ ಹೋಗುತ್ತವೆ. ಈ ಸಮುದಾಯದ ಅಧ್ಯಯನದಲ್ಲಿ ತೊಡಗಿರುವವರು ಪ್ರಮುಖವಾಗಿ ಆ ಸಮುದಾಯದಲ್ಲಿ ಯಾವ ರೀತಿಯ ಆಚರಣೆಗಳು ಹುಟ್ಟಿವೆ, ಅವುಗಳ ವೈಶಿಷ್ಟವೇನು ಎಂಬುದನ್ನು ಮೊದಲು ತಿಳಿಯಬೇಕು. ಈ ಪ್ರಮುಖ ಆಚರಣೆಗಳು ಆಯಾ ಸಮುದಾಯದ ವೈಶಿಷ್ಟ್ಯತೆಯನ್ನು ಎತ್ತಿ ಹಿಡಿಯುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತವೆ. ಇದನ್ನು ಯಾವ ಪರಿಕಲ್ಪನೆಯಲ್ಲಿ ಅರ್ಥ ಮಾಡಿಕೊಳ್ಳಬೇಕು ಎಂಬುದು ಪ್ರಮುಖವಾದುದು. ಒಂದೇ ಸಮುದಾಯದ ಆಚರಣೆಯಲ್ಲಿ ಜನರ ಪ್ರಾತಿನಿಧ್ಯವು ಮತ್ತು ಅವರ ಅಭಿವ್ಯಕ್ತಿಯು ಒಂಟಿಯಾಗಿರುವುದಿಲ್ಲ. ಏಕೆಂದರೆ ಒಂದು ಆಚರಣೆಗೂ ಮತ್ತೊಂದು ಆಚರಣೆಗೂ ಸಂಬಂಧವನ್ನು ಹೊಂದಿರುತ್ತದೆ.

ಮೌಖಿಕ ಅಭಿವ್ಯಕ್ತಿಯ ಲೋಕದ ಪಠ್ಯವು ಒಂದು ಕಾವ್ಯದ ಪರಂಪರೆಯನ್ನು ಕಟ್ಟಿರುವ ಸಮುದಾಯವಾಗಿದೆ. ಇದೆ. ಮಹಾಕಾವ್ಯಗಳು ಎಂಬ ಕರೆಯುವ ರಾಮಾಯಣ, ಮಹಾಭಾರತವನ್ನು ಹೊರತುಪಡಿಸಿ, ಮಂಟೇಸ್ವಾಮಿ, ಮಾದೇಶ್ವರ, ಜುಂಜಪ್ಪ, ಮೈಲಾರ ಲಿಂಗ, ಜನಪದ ಮಹಾಕಾವ್ಯಗಳು ಸಮುದಾಯದ ನಡುವೆಯೇ ಒಂದು ಲೋಕಪಠ್ಯವನ್ನು ಸೃಷ್ಟಿ ಮಾಡಿರುವುದನ್ನು ಜನಪದ ಮಹಾಕಾವ್ಯಗಳಲ್ಲಿ ನೋಡಬಹುದು. ಒಂದೊಂದು ಕಾವ್ಯದ ಹಿನ್ನೆಲೆಯನ್ನು ಗಮನಿಸುತ್ತ ಹೋದಂತೆ ಆಯಾ ಪ್ರಾದೇಶಿಕ ಜನಸಮುದಾಯವನ್ನು ಗುರುತಿಸಬಹುದು. ಇದರ ಜೊತೆಯಲ್ಲಿ ಇದೇ ಸಂಸ್ಕೃತಿಯನ್ನು ತನ್ನ ದೈವ ಪರಂಪರೆಯೊಂದು ರೂಪಿಸಿಕೊಂಡಿರುವ ಸಮುದಾಯ, ತನ್ನ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಮೌಖಿಕ

ಕಂತಪಠ್ಯವನ್ನು ನಿರ್ಮಿಸಿಕೊಂಡಿದೆ. ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆ ಹೊಂದುತ್ತಿರುವ ಈ ಮೌಖಿಕ ಸಂಪ್ರದಾಯ ಅನೇಕ ಬದಲಾವಣೆಯನ್ನು ಕಾವ್ಯದಲ್ಲಿ ಹೊಂದುತ್ತಿದೆ. ಆದ್ದರಿಂದ ಇದರ ಸಂಪಾದನೆಯ ಸಂಪ್ರದಾಯದಲ್ಲಿ ತೊಡಗಿದಂತಹ ವಿದ್ವಾಂಸ ಸಮುದಾಯವವದ ಮೌಖಿಕ ಪರಂಪರೆಯ ಎಲ್ಲಾ ಕಾವ್ಯಭಾಗವನ್ನು ಮೊದಲು ಸಂಗ್ರಹಿಸಬೇಕಾಗುತ್ತದೆ. ಏಕೆಂದರೆ ಎಲ್ಲಾ ಮೌಖಿಕ ಪಠ್ಯಗಳು ಪ್ರಧಾನವಾಗಿ ಇರುವಂತಾಗಿವೆ. ಆದ್ದರಿಂದ ಮೌಖಿಕ ಅಭಿವ್ಯಕ್ತಿ ಲೋಕದ ಪಠ್ಯವಾಗುತ್ತದೆ.

ಯಾವುದೇ ಕಾವ್ಯಗಳನ್ನು ಅವುಗಳ ಚರಿತ್ರೆಯ ಮಾರ್ಗವಾಗಿ ಅಧ್ಯಯನ ಮಾಡುವುದು ಜೊತೆಗೆ ತನ್ನ ಕಾಲದಲ್ಲಿ ಕಾವ್ಯದ ವೈವಿಧ್ಯತೆಯನ್ನು ಗಮನಿಸಿ ಈ ಕಾವ್ಯದ ರಚನೆಯ ಅಥವಾ ಹುಟ್ಟಿರುವ ಬಗ್ಗೆ ಹಿಂದಿನ ಚರಿತ್ರೆಯನ್ನು ಗಮನಿಸುವುದು ಮುಖ್ಯವಾಗುತ್ತದೆ. ಇದರಲ್ಲಿ ಆಚರಣೆಯು ಪ್ರಮುಖವಾಗಿರುತ್ತದೆ. "ಆಚರಣೆಯು ಸಮುದಾಯದ ನಡುವೆಯು ಜೀವಂತವಾಗರುತ್ತದೆ. ಇದರ ತಿಳುವಳಿಕೆಯ ಮೂಲಕ ತನ್ನ ಕಾಲದ ಅರಿವಿನ ನೋಟಕ್ಕೂ, ಹಿಂದೆ ಚರಿತ್ರೆಯ ತಿಳುವಳಿಕೆಯ ನೋಟಕ್ಕೂ ವಿವಿಧ ಸಾಂಸ್ಕೃತಿಕ ಭಿನ್ನತೆಗಳನ್ನು ಗುರುತಿಸಬಹುದು. ಇದರ ನಡುವೆ ಒಂದು ಕಾವ್ಯ ತನ್ನದೆಯಾದ ಮಹತ್ವವಯನ್ನು ಉಳಿಸಿಕೊಂಡು ಮೌಖಿಕ ಪರಂಪರೆಯಿಂದ ಶಿಷ್ಟ ಪಠ್ಯಕ್ರಮಕ್ಕೆ ಬದಲಾವಣೆಯನ್ನು ಪಡೆದಿರುವುದು ಪ್ರಸ್ತುತತೆಯನ್ನು ತಿಳಿಯುವಲ್ಲಿ ಸಂಪಾದಕ ಪ್ರಾಮುಖ್ಯತೆಯು ಹೆಚ್ಚಾಗಿರುತ್ತದೆ. ಇದರಿಂದ ತಮ್ಮ ಕಾಲದ ಸಮುದಾಯದ ಕಾವ್ಯವನ್ನು ಪ್ರಮುಖವಾಗಿ ನೋಡುವ ಕ್ರಮಗಳು ಭಿನ್ನವಾಗಿರುತ್ತದೆ. ಹೇಗೆ ಎಂದರೆ ನಮಗೆ ಈಗಾಗಲೇ ಒಂದು ಪಠ್ಯ ಇದೆ. ಉದಾಹರಣೆಗೆ 'ಮಂಟೇಸ್ವಾಮಿ ಕಾವ್ಯ". ಈ ಕಾವ್ಯದಲ್ಲಿ ಸಿದ್ದಪ್ಪಾಜ್ಜಿ ಹಲವಾರು ಸಾಂಸ್ಕೃತಿಕ ನೆಲೆಯಿಂದ ಕಾವ್ಯದಲ್ಲಿ ದೀಕ್ಷೆಯನ್ನು ಪಡೆದುಕೊಂಡು, ಮಂಟೇಸ್ವಾಮಿಯ ಶಿಷ್ಯನಾಗುತ್ತಾನೆ. ಇದು ನಮ್ಮ ಸಂಪಾದನೆಯ ವಿವಿಧ ನೆಲೆಯಿಂದ ದೊರಕಿ ಸಂಗ್ರಹಿಸಿರುವಂತಹ ಪಠ್ಯದಲ್ಲಿ ಇರುವಂತಹ ವಿವರವಾಗಿದೆ. ಮತ್ತೊಂದು ವಿವರವೆಂದರೇ ಪಠ್ಯದಲ್ಲಿ ದೊರಕಿರುವ ಆಚರಣೆಯನ್ನು ನಡೆಸಿಕೊಂಡು ಹೋಗುವ ಸಮುದಾಯದವರೂ ಇದ್ದಾರೆ. ಮೌಖಿಕ ಪರಂಪರೆಯ ಕಾವ್ಯದಲ್ಲಿ ಸಾಂಪ್ರದಾಯಿಕ ಆಚರಣೆಯನ್ನು ನಡೆಸಿಕೊಂಡು ಹೋಗುವಸಮುದಾಯ ನಾವು ನೋಡಬಹುದು. ನೀಲಗಾರರು ಈ ಸಂಸ್ಕೃತಿಯನ್ನು ಮುಂದುವರೆಸುವ ಸಮುದಾಯವಾಗಿದೆ ತನ್ನ ಸಮುದಾಯದ ಒಬ್ಬ ಗುಡ್ಡನಿಗೆ ದೀಕ್ಷೆ ಕೊಡುವ ಆಚರಣೆಯನ್ನು ಮಾಡುವುದು ಅವನಿಗೆ ಸಿದ್ಧಪ್ಪಾಜಿ ತರಹವೇ. ಅವನನ್ನು ಪರಿವರ್ತನೆಯನ್ನು ಮಾಡುವುದು ಅನೇಕ ಸಾಂಪ್ರದಾಯಿಕ ಆಚರಣೆಯನ್ನು ನಡೆಸುವುದು ಕೆಲವೊಂದು ಸಮುದಾಯದಲ್ಲಿ ರೂಢಿಯಲ್ಲಿದೆ. ಆ ಮೂಲಕ ಅವರ ಮೌಖಿಕ ಮತ್ತು ಪಠ್ಯದ ನಡುವೆಯು ಭಿನ್ನತೆಯನ್ನು ಗಮನಿಸಬಹುದು. ಪಠ್ಯ ಹೇಳುತ್ತಿರುವುದು ಒಂದು

ವಿಧಾನವಾದರೆ, ಅದನ್ನು ಸ್ವೀಕರಿಸುವ ಇನ್ನೊಂದು ಸಮುದಾಯವಿದೆ. ಅದೇ ನಾವು ಆಧುನಿಕ ಓದಿನಿಂದ ತಿಳಿದಿರುವ ಪ್ರಕಾರ ಒಂದು ಚರಿತ್ರೆಯಲ್ಲಿ ಈ ರೀತಿಯ ಸಾಂಪ್ರದಾಯಿಕ ಆಚರಣೆಗಳು ಇರುತ್ತವೆ.

ಯಾವುದೇ ಚರಿತ್ರೆಯ ಕಾವ್ಯವನ್ನು ಗಮನಿಸಿದಾಗ ಹಿಂದಿನ ರಚನೆಯ ಮಾರ್ಗವನ್ನು ತಿಳಿಯುವುದು ಸರ್ವೇಸಾಮಾನ್ಯ. ಕೆಲವು ವಿದ್ವಾಂಸರು ೧೫-೧೬ನೆಯ ಶತಮಾನದಲ್ಲಿ ನಡೆದಿರುವ ಸಂಪ್ರದಾಯದ ಒಂದು ಚರಿತ್ರೆಯ ಕ್ರಮ ಎಂಬುದಾಗಿ ಕರೆಯುವುದು ಒಂದು ಚರಿತ್ರೆಯ ಓದಿನಿಂದ ತಿಳಿಯುತ್ತದೆ. ಕೆಲವೊಂದು ಚರಿತ್ರೆಯನ್ನು ಮೌಖಿಕವಾಗಿ ಕಟ್ಟಿಕೊಟ್ಟಿರುವುದರಿಂದ ತಿಳಿಯುತ್ತದೆ. ಈ ರೀತಿಯಾಗಿ ವಿವಿಧ ಭಿನ್ನಭಿನ್ನ ವಿದ್ಯಮಾನ ಇದಕ್ಕೆ ಪೂರಕವಾಗಿದೆ. ಕಾವ್ಯಗಳು ಒಂದೇ ಪ್ರಕಾರವನ್ನು ಹೊಂದಬೇಕಿಲ್ಲ. ನವೋದಯ ಕಾಲಪೂರ್ವದಲ್ಲಿ ಕಾವ್ಯ ಎಂಬುದರ ಬಗ್ಗೆ ಅನೇಕ ಚರ್ಚೆಗಳು ನಡೆದಿರುವುದು ಗಮನಾರ್ಹ. ಯಾವುದೇ ಒಂದು ಕಾವ್ಯವನ್ನು ತೆಗೆದುಕೊಂಡರ ಅದರಲ್ಲಿ ಒಬ್ಬ ನಾಯಕ ಇರುತ್ತಾನೆ. ಇವನ ವಿರುದ್ಧ ಒಬ್ಬ ಪ್ರತಿನಾಯಕ ಇರುವುದನ್ನು ಕಾವ್ಯಗಳಲ್ಲಿ ಗಮನಿಸುತ್ತೇವೆ. ಮಹಾಕಾವ್ಯದ ಕಲ್ಪನೆಯು ನಮ್ಮ ದೇಶದಲ್ಲಿ ಮತ್ತು ಪಾಶ್ಚಾತ್ಯರಲ್ಲೂ ಇದೆ. ಈ ಕುರಿತಂತೆ ಅನೇಕ ಚರ್ಚೆಗಳು ನಡೆದಿವೆ. ಆಧುನಿಕ ಕಾವ್ಯಗಳನ್ನು ಕುರಿತಂತೆ ಅನೇಕ ರೀತಿಯ ಚರ್ಚೆಗಳನಗನೂ ಬೆಳೆಸಿದ್ದಾರೆ. ಆದರೆ ಮೌಖಿಕ ಸಾಹಿತ್ಯವನ್ನು ಕುರಿತ ಚರ್ಚೆ ಅಷ್ಟಾಗಿ ಕಂಡುಬಂದಿಲ್ಲ. ನಮ್ಮ ಜನಪದ ಮಹಾಕಾವ್ಯಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ ಪ್ರೊ.ಹಿ.ಚಿ.ಬೋರಲಿಂಗಯ್ಯನವರು ಸಂಪಾದಿಸಿರುವ ಪತ್ಯದಲ್ಲಿ ಜನಪದ ಮಹಾಕಾವ್ಯಗಳಾಗುವುದಕ್ಕೆ ನಾವು ಮಹಾಕಾವ್ಯಗಳ ಕಲ್ಪನೆಯನ್ನು ಇಟ್ಟುಕೊಂಡು ನೋಡುತ್ತಿದ್ದೇವೆ. ಹಿಂದಿನಿಂದಲೂ ನಮ್ಮ ಭಾರತೀಯ ಮಹಾಕಾವ್ಯಗಳ ಕಲ್ಪನೆಯನ್ನು ೨೧ನೇ ಶತಮಾನದ ಕಾವ್ಯಗಳ ಮೇಲೆ ಅದೇ ರೀತಿಯ ಗ್ರಹಿಕೆಯನ್ನು ಮಾಡುವುದು ಸರಿಯಲ್ಲ ಎಂಬುದಾಗಿ ತಿಳಿಸುತ್ತಾರೆ. ಶಿಷ್ಟ ಮಹಾಕಾವ್ಯದ ಲಕ್ಷಣಗಳು ಜನಪದ ಮಹಾಕಾವ್ಯಗಳ ಲಕ್ಷಣಗಳು ಬೇರೆ ಬೇರೆ ಎಂಬುದಾಗಿ ಹೇಳುತ್ತಾರೆ. ಇವು ಒಂದಕ್ಕೊಂದು ವಿರುದ್ಧವಾಗಿವೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಶಿಷ್ಟ ಮಹಾಕಾವ್ಯಗಳಲ್ಲಿ ಛಂದಸ್ಸು, ಲಯ, ವ್ಯಾಕರಣಗಳು ಇರುತ್ತವೆ. ಇದರ ಜೊತೆಯಲ್ಲಿ ಕಾವ್ಯಭಾಗದಲ್ಲಿ ಕಾವ್ಯದ ಎಲ್ಲಾ ವರ್ಣನೆಯಲ್ಲೂ ವರ್ಣನೆಗೆ ನಾಯಕ ಒಳಪಟ್ಟಿರುತ್ತಾನೆ. ಆದರೆ ಪ್ರತಿನಾಯಕನನ್ನು ಯಾವುದೇ ವರ್ಣನೆಯು ಇರುವುದಿಲ್ಲ. ಕೆಲವು ಸಮಯದಲ್ಲಿ ಪಾತ್ರ ಪ್ರತಿನಾಯಕನ ಬಗ್ಗೆ ಗುರುತಿಸುತ್ತಾರೆ. ಈ ಪ್ರತಿನಾಯಕನಿಂದಲೇ ನಾಯಕರಿಗೆ ಹೆಚ್ಚು ಮಹತ್ವದ ಪಾತ್ರ ಎಂಬುದು ಕಾವ್ಯದಲ್ಲಿ ತಿಳಿಯುವುದಿಲ್ಲ. ರಾಮಾಯಣದಂತ ಮಹಾಕಾವ್ಯದಲ್ಲಿ

ರಾಮನನ್ನು ಸುಂದರವಾಗಿ, ಆಜಾನುಬಾಹು, ಶಕ್ತಿಶಾಲಿ, ವೀರ ಮುಂತಾದ ರೂಪಕಗಳಿಂದ ಚಿತ್ರಿಸುತ್ತಾರೆ. ಕಾವ್ಯದ ಉದ್ದಕ್ಕೂ ವೀರವರ್ಣನೆಯೇ ಇರುತ್ತದೆ. ಆದರೆ ಜನಪದ ಕಾವ್ಯಗಳಲ್ಲಿ ಈ ರೀತಿಯಾಗಿ ಇರದುದಿಲ್ಲ. ರೋಗಿ, ವಿಕಾರರೂಪ, ಕುಷ್ಠರೋಗಿ, ಕುಡುಕ, ಭಂಗಿ ಸೇವನೆ ಈ ರೀತಿಯಾಗಿ ಜನಪದ ಕಾವ್ಯದಲ್ಲಿ ಚಿತ್ರಿಸಿರುತ್ತಾರೆ. ನಾವು ಯಾವುದನ್ನು ಸಂಸ್ಕೃತಿ, ಸಂಸ್ಕಾರ ಎಂಬುದಾಗಿ ನಂಬಿಕೊಂಡಿದ್ದೆವೋ ಅದರ ಗುಣ ಸ್ವಭಾವವನ್ನು ತಿಳಿಸುತ್ತದೆ. ಮಂಟೇಸ್ವಾಮಿಯ ಕಾವ್ಯದಲ್ಲಿ ಕಲ್ಯಾಣಪಟ್ಟಣದ ಸಾಲಿನ ಭಾಗದಲ್ಲಿ ಮಂಟೇಸ್ವಾಮಿಯವರು ಬಸವಣ್ಣ ನೀಲಮ್ಮರ ಭಕ್ತಿಯನ್ನು ಪರೀಕ್ಷೆ ಮಾಡುವಾಗ ಅವರು ಬರುವಂತಹ ವರ್ಣನೆಯು ಹೀಗೆ ಇದೆ.

"ನಮ್ಮ ಮಂಟೇದಾ ಲಿಂಗಪ್ಪ
ನಮ್ಮ ಕಂಡಾಯದ ಮೂರುತಿ
ಅವರು ಉತ್ತುರು ಕಂಡವನ್ನೇ
ಬಿಟ್ಟು ಬಿಟ್ಟು ನನ್ನಪ್ಪ
ಅವರು ಕಾಲು ಜೊತ್ತು ಮಾಡಿ
ಗುರುವೇ ಕೈಯಿ ಜೊತ್ತು ಮಾಡಿ
ಅವರು ಕುಷ್ಠ ರೋಗಿ ಯಾಸವನ್ನೆ
ತಾಳಿಕಂಡುರು ಮಾಯಿಕಾರ "ಸಿದ್ಧಯ್ಯ"
ಗುರುವೇ ಕುಷ್ಠರೋಗಿಯ ಗುರುವೇ
ಯಾಸವಾ ಗುರುವೂ
ತಾಳಿಕಂಡು ನನ್ನಪ್ಪ
ಧರೆಗೆ ದೊಡ್ಡಯ್ಯ
ಗುರುವೇ ಆರು ಕಂಡುಗಾ
ಯಗ್ಗಜ್ಜಿ ಮಾಡಿಕಂಡು
ಮೂರು ಕಂಡುಗಾ
ತುರುಗಜ್ಜಿ ಮಾಡಿಕಂಡು
ಗುರುವೇ ಆರು ಕಂಡುಗಾ ಕೀವು
ಆರು ಕಂಡುಗ ರಸುಗು
ಆರು ಕಂಡುಗ ರಕುತ
ಏಳು ಕೋಟೆ ಹುಳವಾ

ಅವರು ಕಲ್ಯಾಣ ಗುರುವೇ ಅವರು
ಕಣ್ಣೆತ್ತಿ ನೋಡುತ್ತಾರೆ ಸಿದ್ಧಯ್ಯ"[೩]

ಈ ರೀತಿಯ ಕಲ್ಪನೆ ಜನಪದ ಮಹಾಕಾವ್ಯದಲ್ಲಿ ರೂಪಿತವಾಗಿದೆ. ಸಂಸ್ಕೃತಿಯನ್ನು ತಿರುಚ್ಚಿ ಹೇಳುವಂತಹ ಅಭಿವ್ಯಕ್ತಿಯು ಕ್ರಿಯೆ ನಡೆದಿದೆ. 'ಯಾವ ಸಮುದಾಯವನ್ನು ನಾವು ಒಳಗಡೆ ಸೇರಿಸಿಕೊಳ್ಳುತ್ತಿಲ್ಲವೊ ಅದನ್ನು ಹೊರಗಟ್ಟಿದ್ದಾರೆ. ಆ ಸಮುದಾಯದಿಂದಲೇ ಒಂದು ಸಂಸ್ಕೃತಿಯನ್ನು ಕಟ್ಟುವ ಕೆಲಸವನ್ನು ಜನಪದ ಮಹಾಕಾವ್ಯದಲ್ಲಿ ಕಾಣಬಹುದು. ಇದು ಹೊಸ ಸಂಪಾದನೆಯಿಂದ ಕಂಡುಕೊಂಡ ಅಂಶವಾಗಿದೆ. ಶಿಷ್ಟಪ್ರಧಾನ ಸಂಸ್ಕೃತಿ ಯಾವುದನ್ನು ಶ್ರೇಷ್ಠ ಎಂಬುದಾಗಿ ನಿರ್ವಚನ ಮಾಡಿಕೊಂಡಿತ್ತೋ ಆ ನಿರ್ವಚನಕ್ಕೆ ಇದರ ಒಳಗಡೆ ಈ ಸಮುದಾಯವನ್ನು ಸೇರಿಸಲಾಗಿದೆ. ಶೂದ್ರ ಎಂಬುದಾಗಿ ಕಲ್ಪನೆ ನಿಯಮ, ಕಾನೂನು, ಪುರಸ್ಕಾರ ಸಂಕೋಲೆ ಮಾಡಿಕೊಂಡು ಒಂದು ಚೌಕಟ್ಟನ್ನು ನಿರ್ಮಿಸಲಾಯಿತು. ಲಿಂಗಪೂಜೆ, ಉಪವಾಸ, ವ್ರತ, ಹೋಮ, ಯಜ್ಞ ಈ ರೀತಿಯ ನಿಯಮಗಳನ್ನು ಶಿಷ್ಟ ಧರ್ಮಗಳು ಕೆಲವು ಸಂಸ್ಕೃತಿಯನ್ನು ರೂಪಿಸಿಕೊಂಡು ಧರ್ಮದ ವ್ಯಾಪ್ತಿಯಲ್ಲಿ ಇರುವಂತಹವನ್ನು ಪ್ರೋತ್ಸಾಹಿಸುವುದು. ಶಿಷ್ಟಕಾವ್ಯಸಂಪ್ರದಾಯ ಮಹತ್ವದ್ದಾಗಿತ್ತು. ಪ್ರಾಚೀನ ಸಾಹಿತ್ಯದಿಂದ ಇಂದಿನ ಸಾಹಿತ್ಯದವರೆಗೆ ಹಲವಾರು ರೀತಿಯ ಜನಸಮುದಾಯಗಳ ನಡುವೆ ಭಿನ್ನ ವ್ಯತ್ಯಾಸಗಳನ್ನು ಗಮನಿಸುತ್ತಾ ಬಂದಿದ್ದೇವೆ ರಾಜಾಶ್ರಯದಲ್ಲಿ ಕೇವಲ ಮೇಲು ವರ್ಗದಕವಿಗಳಿಗೆ ಮಾತ್ರ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುತ್ತಾ ಬಂದಿದ್ದಾರೆ. ವಚನ ಸಾಹಿತ್ಯದಲ್ಲಿ ಅಲ್ಪಪ್ರಮಾಣದಲ್ಲಿ ಸಂಸ್ಕೃತಿಯ ಪರವಾದ ವಾದವನ್ನು ಗಮನಿಸಬಹುದು. ಆಧುನಿಕ ಕನ್ನಡ ಸಾಹಿತ್ಯ ಕಾಲದಲ್ಲಿ ಸಂಸ್ಕೃತಿ ಕುರಿತಂತೆ ಹಾಗೂ ಬೇರೆ ಬೇರೆ ಸಾಹಿತ್ಯ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ಭಿನ್ನಾಭಿಪ್ರಾಯಗಳನ್ನು ಗುರುತಿಸಬಹುದು. ಸಾಹಿತ್ಯ ಎಂಬುದು ಕೇವಲ ಪಂಡಿತರಿಗೆ, ಸಂಸ್ಕೃತವನ್ನು ಬಲ್ಲವರಿಗೆ ಮಾತ್ರವಾಗಿತ್ತು. ಇದು ಒಂದು ಕಾಲವಾದರೆ, ಇದೆ ಸಾಹಿತ್ಯವನ್ನು ಕೆಳವರ್ಗದ ಸಂಸ್ಕೃತಿಯನ್ನು ರಚಿಸಲ್ಪಟ್ಟ ಕಾಲ ಮತ್ತೊಂದು. ಇದರ ನಂತರ ಹೊಸಯುಗದ ಸಾಹಿತ್ಯ ಪ್ರಪಂಚದಲ್ಲಿ ನವೋದಯದ ರೂಪಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡುವುದರ ಮೂಲಕ ಸಾಹಿತ್ಯವನ್ನು ರಚನೆ ಮಾಡಿದರು. ಅದರಲ್ಲಿ ಯಾವುದೂ ಜನಪರವಾಗಿ ಕೆಳ ಸಮುದಾಯದ ಪರವಾಗಿ ಇರಲಿಲ್ಲ. ಇಪ್ಪತ್ತೊಂದನೆಯ ಶತಮಾನದಲ್ಲಿ ಎಪ್ಪತ್ತರ ದಶಕದಲ್ಲಿ ಇದರ ಧ್ವನಿಯನ್ನು ಮೊದಲಿಗೆ ಕಾಣಲಾಯಿತು. ಯಾವ ಸಮುದಾಯವನ್ನು ಸಾಂಸ್ಕೃತಿಕ, ಸಮಾಜದಿಂದ ದೂರ ಇಟ್ಟದ್ದವೋ ಆ ಸಮುದಾಯದಿಂದಲೇ ಒಂದು ಸಂಸ್ಕೃತಿಯನ್ನು ಕಟ್ಟುವ, ಈ ನಾಡಿನ ಸಂಸ್ಕೃತಿಯನ್ನು ತಿಳಿಯುವಲಿ ೨೦ನೇ ಶತಮಾನದ ಕೊನೆಯಲ್ಲಿ ಇಂತಹ ಭಾಗದ ಅಧ್ಯಯನಗಳು

ಪ್ರಮುಖವಾಗಿ ನಡದವು. ಯಾವುದು ಅಪವಿತ್ರ ಎಂಬುದಾಗಿ ಈ ಹಿಂದೆ ಕರೆಯುತ್ತಿದ್ದರೋ ಆ ಸಮುದಾಯದಿಂದಲೇ ಬಹುದೊಡ್ಡ ಸಂಸ್ಕೃತಿಯು ನಿರ್ಮಾಣವಾಗಿದೆ.

ಶಿಷ್ಟ ಪರಿಧಿಯಿಂದ ಹೊರಗೆ ಉಳಿದಿರುವಂತಹ ಸಮುದಾಯವು ಹೆಚ್ಚಿನ ಸಂಖ್ಯೆಯಲ್ಲಿ ಇದೆ. ಧರ್ಮವನ್ನು ಪಾಲನೆ ಮಾಡುತ್ತಿರುವ ಸಮುದಾಯಕ್ಕಿಂತ ಬಹುದೊಡ್ಡ ಸಮುದಾಯ ಇದರಲ್ಲಿದೆ. ಈ ಸಮುದಾಯವು ಇವರದೇ ಆದ ವಾಙ್ಮಯ ರೂಪಿಸಿಕೊಳ್ಳಬೇಕು ಎಂದು ಯಾರು ತಮ್ಮ ವ್ಯಾಪ್ತಿಯಿಂದ ಹೊರಗೆ ಇಟ್ಟಿದ್ದವೋ ಆ ವ್ಯಾಪ್ತಿಯಿಂದಲೇ ನಿರಾಕರಿಸಲ್ಪಟ್ಟ ವಸ್ತುವಿನ ಮೂಲಕ ಒಂದು ಸಂಸ್ಕೃತಿಯನ್ನು ಕಟ್ಟುವ ಹಠಗಾರಿಕೆ ನಮ್ಮ ಜನಪದ ಪಠ್ಯದಲ್ಲಿ ಕಾಣಲಾಗಿದೆ. ಹಿಂದೂ ಧರ್ಮದ ಪ್ರತಿಪಾದನೆ ಮಾಡುವ ರಾಮಾಯಣ, ಮಹಾಭಾರತ ಕೃತಿಗಳು ಏಕವ್ಯಕ್ತಿಯಿಂದ ರಚನೆಯನ್ನು ಹೆಣಿದಿರುವಂತಹವು. ಈ ಕೃತಿಗಳು ಜನರ ನಡುವೆ ಹುಟ್ಟಿದೆ ಎಂಬುದಕ್ಕೆ ಯಾವ ಪ್ರತ್ಯೇಕ ಆಧಾರಗಳು ದೊರೆತಿಲ್ಲ. ಕೆಲವೊಂದು ಇರಬಹುದು ಆದರೆ ಆ ಆಧಾರಗಳನ್ನು ನಂಬುವಂತಹ ವಿಚಾರಗಳು ಇಲ್ಲ, ಈ ಮಹಾಕಾವ್ಯಗಳು ಹಿಂದಿನ ಸಮುದಾಯ ಪ್ರಾಮುಖ್ಯತೆ ಪಾತ್ರವಾಗಿರುವಂತಹ ಸಂಸ್ಕೃತ ಭಾಷೆಯಲ್ಲಿ ರಚನೆಯಾಗಿರುವಂತಹ ಕಾವ್ಯಗಳು. ಸಾಮಾನ್ಯ ಜನ ಸಮುದಾಯಕ್ಕೆ ತಲುಪುವಂತಹ ಸಾಹಿತ್ಯ ಹಿಂದೆ ಇರಲಿಲ್ಲ. ಇದನ್ನೇ ಶ್ರೇಷ್ಠ ಸಂಸ್ಕೃತಿ ಎಂಬುದನ್ನು ಅರಿತ ಸಮುದಾಯ ಒಂದು ಕಡೆಯಾದರೆ, ಇದಕ್ಕೆ ಪ್ರತಿಯಾಗಿ ಸ್ಥಳೀಯ ಸಾಂಸ್ಕೃತಿಕ, ವೀರರ ಕಥೆಗಳನ್ನು ಅದರ ಪವಾಡಗಳನ್ನು ದೈವಪುರುಷರು, ಸಾಂಸ್ಕೃತಿಕ ನಾಯಕರಾಗಿ ತೋರುವಂತಹ ಇದನ್ನು ನಂಬಿಕೊಂಡು ಹೊಂದಿರುವಂತಹ ಸಮುದಾಯವನ್ನು ತಮ್ಮದೇ ನೆಲದ ಸಂಸ್ಕೃತಿಯನ್ನು ಬಿಂಬಿಸುವ ಕಾವ್ಯಗಳು ನಮ್ಮ ನೆಲೆಯಲ್ಲಿವೆ. "ಮಲೆಮಾದೇಶ್ವರ ಕಾವ್ಯದ ಮಾದಪ್ಪನದು ಸದಾ ಪಯಣದ ಬದುಕು. ಭಿಕ್ಷೆ ಬೇಡುವುದೇ ಅವನ ವೃತ್ತಿ. ಆದರೆ ಅವನಿಗೆ ಒಬ್ಬ ಸಾಮಾನ್ಯ ವ್ಯಕ್ತಿಗಿರಬಹುದಾದ ಆಸೆಗಳಿವೆ. ತನ್ನ ಒಕ್ಕಲುಗಳನ್ನು ಹೆಚ್ಚಿಸಿಕೊಂಡು ಒಂದು ಕಡೆ ನೆಲೆ ನಿಲ್ಲಬೇಕೆಂಬ ತವಕ ಅವನದು. ಈ ಆಸೆಯಿಂದಲೇ ಹಲವು ಜನವರ್ಗಗಳ ಪ್ರಮುಖರನ್ನು ತನ್ನೆಡೆಗೆ ಸೆಳೆಯುವ ಹುನ್ನಾರ ಹೂಡುತ್ತಾನೆ. ಫಲಿಸದಿದ್ದಾಗ ಮಾಟ ಮಂತ್ರಗಳ ಕಡೆಗೆ ವಾಲುತ್ತಾನೆ."[೬] ಇದು ಒಂದು ಸಮುದಾಯವನ್ನು ಸೃಷ್ಟಿಸುವ ಕೆಲಸದಲ್ಲಿ ಸಾಂಸ್ಕೃತಿಕ ನಾಯಕರು ಮುಖ್ಯವಾಗಿದ್ದಾರೆ. ಎಂಬುದನ್ನು ಸೂಚಿಸುತ್ತದೆ. ಈ ಸಾಂಸ್ಕೃತಿಕ ಎರಡು ಮಹಾಕಾವ್ಯಗಳನ್ನು ಕುರಿತು ವಚನ ಸಾಹಿತ್ಯವನ್ನು ಬಳಕೆಯನ್ನು ಮಾಡಬಹುದು. ಹನ್ನೆರಡನೆಯ ಶತಮಾನದಲ್ಲಿ ನಡೆದಂತಹ ವಚನ ಚಳವಳಿ ಹಲವು ದೃಷ್ಟಿಕೋನವನ್ನೇ ಬದಲಾವಣೆ ಮಾಡಿದಂತಹ ಅಪೂರ್ವ ಕಾಲ. ಸಾಮಾನ್ಯ ಜನರು ತಮ್ಮ ಭಾವನೆಯನ್ನು ಅಭಿವ್ಯಕ್ತಿಸಿದ ಮಹಾನ್ ಘಟ್ಟ. ಜನಸಾಮಾನ್ಯರ ಸ್ವಾಭಿಮಾನಕ್ಕೆ ಹೊಸ ರೂಪವನ್ನು ನೀಡಿದ ವಚನ ಚಳವಳಿಯು ಕೆಳವರ್ಗದ ಜನರ ಭಾಷೆಗೂ ಅವರ ಮಾತಿಗೂ

ಪ್ರಾಮುಖ್ಯತೆಯನ್ನು ಕೊಟ್ಟಿದೆ. ಅಲ್ಲಮ ಮತ್ತು ಬಸವಣ್ಣನವರು ಆ ಕಾಲಘಟ್ಟದ ಕೆಳಸಮುದಾಯದ ಪರ ತಮ್ಮ ವಚನ ವಾಙ್ಮಯವನ್ನೇ ಮಾಡಿದಂತಹ ಶರಣರು.

೧೨ನೇ ಶತಮಾನದ ವಚನ ಚಳವಳಿಯಲ್ಲಿ ನಡೆದ ಪ್ರಮುಖ ಅಂಶವೆಂದರೆ ಶಿಷ್ಟ ಸಮುದಾಯದ ನಡುವೆ ಇದ ಶಿಷ್ಟ ಸಂಪ್ರದಾಯ ಲೋಪಗಳ ಗ್ರಹಿಕೆಗಳನ್ನು ದೂರ ಮಾಡಲು ತೊಡಗಿದ್ದು. ಇದರಲ್ಲಿ ಸಂಪ್ರದಾಯಸ್ಥರೇ ತಮ್ಮ ನಿಯಮದ ಹೊರೆಯನ್ನು ಸಾಮಾನ್ಯ ಜನರ ಮೇಲೆ ಹೇರುತ್ತ ಅವರು ಸಹ ಸಂಸ್ಕೃತವನ್ನು ಅರಿತು ವೇದ ಮಂತ್ರಗಳನ್ನು ತಮ್ಮ ಜೀವನದ ಮೂಲ ಮಂತ್ರವಾಗಿಸಬೇಕು ಎಂದು ಪಣ ತೊಟ್ಟವರು. ಲಿಂಗಪೂಜೆ ದೈವದ ಆರಾಧನೆ ಈ ರೀತಿಯ ಅಲೌಖಿಕ ಪ್ರಪಂಚವನ್ನು ಸೃಷ್ಟಿಸಲು ಹೊರಟವರು. ಮಂಟೇಸ್ವಾಮಿ ಕಾವ್ಯದಲ್ಲಿ ಲಿಂಗ ಪೂಜೆಯನ್ನು ಕುರಿತಂತೆ ಲಿಂಗವನ್ನು ವಿರೋಧಿಸುತ್ತಾನೆ. 'ನಾಯಿಗೆ ಲಿಂಗ, ನರಿಗೆ ಲಿಂಗ, ಕೊತ್ತಿಗೆ ಲಿಂಗ, ಕೊರಳಿಗೆ ಲಿಂಗ' ಎಂಬುದಾಗಿ ಲಿಂಗಪೂಜೆಯನ್ನು ವಿರೋಧಿಸುತ್ತಾನೆ. ಶರಣರ ಚಳವಳಿಯ ಮೂಲಕ ಚರಿತ್ರೆಲ್ಲಿ ಪ್ರಥಮ ಬಾರಿಗೆ ಶೋಷಿತ ಪರವಾಗಿ ಬಂದ ಧ್ವನಿಯಿಂದಾಗಿ ಕೆಳ ಸಮುದಾಯದ ಜನರು ಸಾಹಿತ್ಯ ಕ್ರಾಂತಿಯನ್ನು ಮಾಡಿದರು. ಈ ರೀತಿಯ ಭಿನ್ನ ನೆಲೆಯಿಂದ ಮಾದೇಶ್ವರ ಮಂಟೇಸ್ವಾಮಿಯನ್ನು ಗ್ರಹಿಸಬೇಕಾಗುತ್ತದೆ.

ನಾವು ಮಾದೇಶ್ವರ ಮತ್ತು ಮಂಟೇಸ್ವಾಮಿ ಈ ಇಬ್ಬರು ಸಾಂಸ್ಕೃತಿಕ ನಾಯಕರು ಪ್ರಸ್ತುತ ಸಮಾಜದ ಸಮುದಾಯದ ಸಮಕಾಲೀನತೆ ಎಂಬುದನ್ನು ಗುರುತಿಸುತ್ತ ಹೋದಂತೆ ೧೫-೧೬ನೇ ಶತಮಾನದ ಕಾಲಾವಧಿಯಲ್ಲಿ ಇವರ ಪೂರ್ವ ನೆಲೆಗಳು ಕಂಡುಬಂದರೂ ವಾಸ್ತವದಲ್ಲಿ ಇವರಿಬ್ಬರೂ ಮಹತ್ವವನ್ನು ಪಡೆದುಕೊಂಡಿದ್ದಾರೆ. "ಕಂಸಾಳೆ ಗಾಯಕರಿಗೂ, ಮಂಟೇಸ್ವಾಮಿ ಗುಡ್ಡರಾದ ನೀಲಗಾರರಿಗೂ ಅನೇಕ ವ್ಯತ್ಯಾಸಗಳಿವೆ."[೨] ಈ ಭಿನ್ನತೆಯನ್ನು ಬೇರೆಯಾಗಿ ನೋಡದೆ ಮೂಲಪ್ರಜ್ಞೆ ಇಬ್ಬರಲ್ಲೂ ಸಮುದಾಯ ಪರ ಕಾಳಜಿಯನ್ನು ಹೊಸ ತಲೆಮಾರಿನ ಸಂಪಾದಕರು ಗುರುತಿಸಿರುವುದು ಗಮನಾರ್ಹ. ಕೇವಲ ಮಾದೇಶ್ವರ ಮತ್ತು ಮಂಟೇಸ್ವಾಮಿಯನ್ನು ಇಟ್ಟುಕೊಂಡು ನೋಡುವಂತಿಲ್ಲ. ಮತ್ತೊಂದು ಭಿನ್ನ ನೆಲೆಯಲ್ಲಿ ಮೈಲಾರಲಿಂಗನ ಕಾವ್ಯ ಮತ್ತು ಜುಂಜಪ್ಪನ ಕಾವ್ಯಗಳು ಸಹ ಮುಖ್ಯವಾಗುತ್ತವೆ.

ದಕ್ಷಿಣ ಕರ್ನಾಟಕದ ಕೆಲವು ಭಾಗಗಳಲ್ಲಿ ಮಾದೇಶ್ವರ ಮತ್ತು ಮಂಟೇಸ್ವಾಮಿಯು ಪ್ರಮುಖವಾದರೆ ಉತ್ತರ ಕರ್ನಾಟಕದ ಭಾಗದಲ್ಲಿ ಮೈಲಾರಲಿಂಗನ ಕಾವ್ಯ ಹೆಚ್ಚು ಮಹತ್ವವನ್ನು ಪಡೆದುಕೊಂಡಿದೆ. ಈ ಕಾವ್ಯದಲ್ಲಿ "ಮೈಲಾರಲಿಂಗನ ಹಲವಾರು ಪವಾಡಗಳು ವರ್ಣಿತವಾಗಿವೆ. ಗೋಮುಖಿ ಕರಣದಲ್ಲಿ ಧರ್ಮತರ್ಕವಾಗಿ ಜನಿಸಿ ಭಂಡಾರಕ್ಕೆ ಕಲಿರಾಯ ಆಗುತ್ತಾನೆ. ಕೋರಿ

ಅಂಗಿ ತೊಟ್ಟು, ಭಕ್ತರ ಮನೆ ಬಾಗಿಲಲ್ಲಿ ತಿರುಗಾಡಿದ್ದ, ಹನ್ನೆರಡಾಳು ಸೇದೊ ಬಾವಿ ಬಳಿ ಕೂತು ಜಪ ಮಾಡುವವರ ಕೈಯಲ್ಲಿನ ಲಿಂಗ ಮಾಯ ಮಾಡಿದ್ದು, ಭಂಡಾರ ಚೀಲವನ್ನು ಕೈಯಲ್ಲಿ ಹಿಡಿದುಕೊಂಡು ಅಂಡೆ ಕುರುವತ್ತಿ ತಂದು ಏಳೇಳು ಲೋಕವನ್ನು ಸಲಹಿದ್ದು ರಾಣಿ ಬೆನ್ನೂರಿನ ರಾಣಿ ಶೀಲವಂತೆಗೆ ಮಕ್ಕಳ ವರ ಕೊಟ್ಟಿದ್ದು ಆತನ ಪವಾಡಗಳಲ್ಲಿ ಪ್ರಮುಖವಾದವು."[೬] ಈ ಕಾವ್ಯವು ಬಂದಿರುವ ಪರಂಪರೆಯಲ್ಲಿ ಹಲವಾರು ಸಂಗತಿಗಳು, ಆಶ್ಚರ್ಯಕರ ರೀತಿಯ ಕಾವ್ಯಭಾಗವನ್ನು ಹೊಂದಿದೆ. ಮೈಲಾರಲಿಂಗನ ಹುಟ್ಟಿನ ಮೂಲವನ್ನು ತಿಳಿಯುವುದಾದರೆ ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನು ಅರಿಯಬೇಕಾಗುತ್ತದೆ. ಸಾವಿರಾರು ವರ್ಷದ ಚರಿತ್ರೆಯಲ್ಲಿ ಬೇರೆ, ಬೇರೆ ರೀತಿಯ ಜನಾಂಗಗಳ ಸಂಸ್ಕೃತಿಗಳ ಉದಯಕ್ಕೆ ಕಾರಣವಾಗಿದೆ. ಒಂದೇ ಸಮುದಾಯದಲ್ಲಿ ವಿವಿಧ ಗುಂಪುಗಳ ರಚನೆಯನ್ನು ಹೊಂದಿದರೂ. ಅವುಗಳನ್ನು ಪೋಷಿಸಿಕೊಂಡು ಮುನ್ನಡೆಸುತ್ತ ಬಂದಿದೆ. ಇಂತಹ ಸಾಂಸ್ಕೃತಿಕ ಪರಂಪರೆಯಾಗಿರುವ ಮೈಲಾರಲಿಂಗ ಸಂಪ್ರದಾಯವು ಗುರುತಿಸಬಹುದಾದ ಅಂಶವೆ. ನಮ್ಮ ಭಾರತಕ್ಕೆ ವಲಸೆ ಬಂದಂತಹ ಆರ್ಯ ಸಮುದಾಯವು ಇದೆ. ನೆಲದಲ್ಲಿ ಬದುಕನ್ನು ರೂಪಿಸುವಲ್ಲಿ ಯಶಸ್ವಿಯಾಯಿತು. ಭಾರತೀಯ ಮೂಲವಾದ ದ್ರಾವಿಡರು ತಮ್ಮ ನೆಲೆಯನ್ನು ಕಂಡುಕೊಳ್ಳುವಲ್ಲಿ ವಿಫಲವಾಗಿದ್ದಾರೆ. ಆದರೆ ಈ ಎರಡು ಜನಾಂಗಗಳ ಮಧ್ಯದ ಸಾಂಸ್ಕೃತಿಕ ಭಿನ್ನತೆಗಳನ್ನು ನಾವು ಅರಿಯಬೇಕಾಗುತ್ತದೆ. ಆರ್ಯರ ಮೂರ್ತಿಪೂಜೆ, ಯಜ್ಞಯಾಗದಿಗಳ ಕಲ್ಪನೆಗಳು ದ್ರಾವಿಡ ಸಮುದಾಯದ ಮೇಲೆ ಪ್ರಭಾವ ಬೀರತೊಡಗಿದವು. "ಮೂಲದಲ್ಲಿ ವೀರಭದ್ರ ಶೈವನಾದರೂ ಯಜ್ಞವನ್ನು ನಾಶ ಮಾಡುವನು ಮತ್ತೆ ಆರ್ಯ ಸಮುದಾಯದಲ್ಲಿ ಬೆಳೆಸಿಕೊಂಡು ಬಂದ ವೀರಶೈವದ ಆರಾಧ್ಯದೈವವಾಗಿ ಗೋಚರಿಸುತ್ತಾನೆ."[೭] ನಮ್ಮ ಚರಿತ್ರೆಲ್ಲಿ ಹಿಂದಿನ ದೃಷ್ಟಿಯಿಂದ ಕುರುಬರು ವಲಸೆಗಾರರು ಎಂಬುದಾಗಿ ಕೆಲವರು ಅಭಿಪ್ರಾಯಪಡುತ್ತಾರೆ. ವಲಸೆ ಬಂದು ಒಂದು ಕಡೆ ನೆಲೆಯನ್ನು ಕಂಡುಕೊಂಡು ತಮ್ಮ ಸಂಸ್ಕೃತಿಯನ್ನು ರೂಪಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಸಾಂಸ್ಕೃತಿಕ ನೆಲೆಯನ್ನು ಕಂಡುಕೊಂಡು ತಮ್ಮ ಗುರುತಿಸುವಿಕೆಯಿಂದ ಒಂದು ಸಮುದಾಯವನ್ನು ಬೆಳೆಸುದರಲ್ಲಿ ಈ ಮೈಲಾರಲಿಂಗ ಪ್ರಾಮುಖ್ಯತೆಯನ್ನು ಪಡೆದಿದೆ. ಇದು ಕೆಲವು ಸಮುದಾಯದ ಒಂದುಗೂಡುವ ಮೂಲಕ ತನ್ನು ಗುರುತಿಸುವವರಲ್ಲಿ ಮೈಲಾರಲಿಂಗನ ಕಾವ್ಯ ಪ್ರಮುಖವಾಗಿದೆ. ಈ ರೀತಿಯ ಸಮುದಾಯ ಕಟ್ಟುವಲ್ಲಿ ಕಾವ್ಯ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಇದರಂತೆಯೇ ಜುಂಜಪ್ಪನ ಕಾವ್ಯವು ಜನಪದ ಕಾವ್ಯದಲ್ಲಿ ತನ್ನದೆಯಾದ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಇದು ಕನ್ನಡ ಜನಪದ ಮಹಾಕಾವ್ಯಗಳಲ್ಲಿ ಒಂದಾಗಿದೆ.

ಕರ್ನಾಟಕ ಮಹಾಕಾವ್ಯಗಳ ಸಾಲಿನಲ್ಲಿ ಇರುವ ಪಶುಸಂಗೋಪನ ಸಂಸ್ಕೃತಿಯನ್ನು ಉಳಿಸಿಕೊಂಡು ಇಂದಿಗೂ ಬೆಳೆಸುತ್ತಿರುವ ಒಂದು ಪ್ರಮುಖ ಸಮುದಾಯ ಗೊಲ್ಲರು ಮತ್ತು ಕುರುಬರು. ಈ ಗೊಲ್ಲ ಸಮುದಾಯದಲ್ಲಿ ಎರಡು ರೀತಿಯ ವರ್ಗವನ್ನು ಗುರುತಿಸಬಹುದು. ಕಾಡುಗೊಲ್ಲರು ಮತ್ತು ಊರುಗೊಲ್ಲರು ಇವರು ಜನರ ನಡುವೆ ಸಂಬಂಧವನ್ನು ಇಟ್ಟುಕೊಳ್ಳದೇ ಊರಿನಿಂದ ಹೊರಭಾಗಗಳಲ್ಲಿ ಹಟ್ಟಿಯನ್ನು ನಿರ್ಮಾಣ ಮಾಡಿಕೊಂಡು ಬದುಕುತ್ತಿದ್ದಾರೆ ಗೊಲ್ಲ ಸಮುದಾಯದವರು. ಇವರು ಹೆಚ್ಚಾಗಿ ಪ್ರಾಣಿಗಳ ಸಾಕುವ ಕಾರ್ಯದಲ್ಲಿ, ಪಶುಸಂಗೋಪನೆಯಲ್ಲಿ ಪರಿಣತಿಯನ್ನು ಪಡೆದವರು. ಇವರು ಕರ್ನಾಟಕದ ತುಮಕೂರು, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಕಂಡುಬರುತ್ತಾರೆ. ಸಾಮಾನ್ಯವಾಗಿ ಇವರು ಗುಡ್ಡಬೆಟ್ಟಗಳ ಹುಲ್ಲುಗಾವಲುಗಳೇ ಹೆಚ್ಚಾಗಿರುವ ಪ್ರದೇಶದಲ್ಲಿ ನೆಲೆಸಿರುತ್ತಾರೆ. “ಊರುಗಳ ಸಂಸ್ಕೃರತಿಗೆ ಪರ್ಯಾಯವಾಗಿ ತಮ್ಮದೇ ಹಟ್ಟಿಗಳ ಸಂಸ್ಕೃತಿಯನ್ನು ಪೋಷಿಸುತ್ತಾ ಯಾವ ಕಾರಣಕ್ಕೂ ಊರಿನ ಕಲಾಪಗಳ ಜೊತೆ ಒಂದಾಗದ ಇವರು ಊರಿನ ಜನರನ್ನು ಮೈಲಿಗೆಯವರು ಎಂದೇ ಕರೆಯುತ್ತಾರೆ. ಜುಂಜಪ್ಪನ ಕಾವ್ಯವನ್ನು ಅವಲೋಕಿಸಿ ಹೇಳುವುದಾದರೆ ಬಹುಶಃ ಮೊದಲಿಗೆ ಪೂರಾ ಅಲೆಮಾರಿಗಳಾಗಿಯೇ ಜೀವನ ಸಾಗಿಸುತ್ತಿದ್ದ ಇವರು ಕ್ರಮೇಣ ಹಟ್ಟಿಗಳನ್ನು ಕಟ್ಟಿಕೊಂಡಂತೆ ಕಾಣುತ್ತದೆ.”[೮] ಹೀಗೆ ಇವರದು ವಿಶಿಷ್ಟ ರೀತಿಯ ಜೀವನಶೈಲಿಯನ್ನು ನಡೆಸುತ್ತಿರುವ ಸಮುದಾಯವಾಗಿದೆ.

ಜುಂಜಪ್ಪನ ಕಾವ್ಯಪರಂಪರೆಯಲ್ಲಿ ಗೊಲ್ಲಸಮುದಾಯದ ಜೀವನಕ್ರಮವು ಎಲ್ಲಾ ಕಾವ್ಯಗಳಿಗಿಂತ ಭಿನ್ನವಾಗಿದೆ. ಪಶುಸಂಗೋಪನೆಯನ್ನು ತಮ್ಮ ವೃತ್ತಿಯಾಗಿ ಮಾಡಿಕೊಂಡು ಒಬ್ಬ ನಾಯಕನನ್ನು ರೂಪಿಸಿಕೊಂಡಿರುವ ಕಾವ್ಯ ತನ್ನ ಸಾಂಪ್ರದಾಯಿಕ ನೆಲೆಯನ್ನು ಗುರುತಿಸಿದೆ. ಇದರ ಜೊತೆಯಲ್ಲಿ ಈ ಕಾವ್ಯದ ಸಂಪಾದನೆಯಲ್ಲಿ ತೊಡಗಿದಂತಹ ವಿದ್ವಾಂಸರು ವಿವಿಧ ನೆಲೆಯ ಹೊಸ ಆಲೋಚನ ಕ್ರಮಗಳನ್ನು ಮಾಡಿರುವುದು ಗಮನಾರ್ಹವಾಗಿದೆ. ಪಶುಸಂಗೋಪನೆ ಮಾಡುವಂತಹ ಒಂದು ಸಮುದಾಯವು ಒಂದು ಸಂಸ್ಕೃತಿಯನ್ನು ಕಟ್ಟುವಲ್ಲಿ ತನ್ನದೇ ಆದ ಸ್ಥಾನ ಪಡೆದುಕೊಂಡಿದೆ ಮಹಾಕಾವ್ಯ ವ್ಯಾಪ್ತಿಯಲಿ ಶ್ರೇಷ್ಠ ಕಾವ್ಯದಲ್ಲಿ ಇದೂ ಒಂದು. ಇದನ್ನು ಬುಡಕಟ್ಟು ಕಾವ್ಯ ಮಾಲೆಯ ಎಂಬುದಾಗಿ ಕರೆದಿರುವುದು ಗಮನಾರ್ಹ.

ಮಲೆಮಾದೇಶ್ವರ ಕಾವ್ಯವಾಗಲೀ, ಮಂಟೇಸ್ವಾಮಿ ಕಾವ್ಯವಾಗಲೀ, ಜುಂಜಪ್ಪನ ಕಾವ್ಯವಾಗಲೀ, ಮೈಲಾರಲಿಂಗನ ಕಾವ್ಯ, ಸಿರಿ ಕಾವ್ಯವಾಗಲೀ ಒಂದು ಕಾಲದ ಬುಡಕಟ್ಟು ಸಂಸ್ಕೃತಿಗಳ ನಡುವಿನ ಮೌಖಿಕ ಮೌಲ್ಯಗಳ ಸಂಘರ್ಷದ ಕಥಾನಕಗಳೇ ಆಗಿವೆ. ಸಂಗ್ರಹಕಾರರು ಕಥನಗಳ ಕೂಡುಸಂಪಾದನೆಯಲ್ಲಿ ವಿಶಾಲವಾದ ಕಾವ್ಯಪ್ರಕಾರಗಳನ್ನು ಸಂಗ್ರಹಿಸಿದ್ದಾರೆ. ಒಂದು

ಸಂಸ್ಕೃತಿಯನ್ನು ನಿರ್ಮಾಣ ಮಾಡುವಲ್ಲಿ ಈ ಮಹಾಕಾವ್ಯಗಳು ತನ್ನ ಶ್ರಮವನ್ನು ಗುರುತಿಸಬಹುದು. ಇದು ಹೊಸದಾದ ಜನಪದ ಸಂಪಾದನೆಯಲ್ಲಿ ಒಲವುಗಳನ್ನು ಗುರುತಿಸುತ್ತಿವೆ. ಅಕ್ಷರಸಂಸ್ಕೃತಿಯಿಂದ ದೂರ ಇರುವ ಮೌಖಿಕಸಂಸ್ಕೃತಿಯನ್ನು ಅಥವಾ ಅಲಕ್ಷಿತ ಸಮುದಾಯದ ಅಧ್ಯಯನ ಕುರಿತು ಇದುವರೆಗೆ ನಾವು ಬಿಟ್ಟಿರುವಂತಹ ಸಮುದಾಯದಲ್ಲಿ, ಅಂದರೆ ಯಾವ ಸಮುದಾಯದ ಆಚರಣೆಗಳು ವಿಧಾನಗಳು ಸಂಸ್ಕೃತಿ ಅಲ್ಲ ಎಂಬುದಾಗಿತ್ತೋ, ಅಂತಹ ಸಮುದಾಯದಲ್ಲಿ ಒಂದು ಸಂಸ್ಕೃತಿ ಅನ್ನುವಂತಹದ್ದು ಇದೆ ಇದನ್ನು ಶೋಧನೆಯನ್ನು ಮಾಡಬೇಕು ಎಂಬುದರ ದರೆ ಕಡೆ ಹೊಸ ಒಲವುಗಳ ಕಾರಣಕ್ಕೆ ಜನಪದ ಮಹಾಕಾವ್ಯಗಳು ವಿವಿಧ ಸಂಸ್ಕೃತಿಯಿಂದ ರೂಪುಗೊಂಡಿದೆ.

ಕೊನೆ ಟಿಪ್ಪಣಿ

೧. ಮಂಟೇಸ್ವಾಮಿ ಓದು ಪಠ್ಯ, ಪು.೮

೨. ಮಂಟೇಸ್ವಾಮಿ ಕಾವ್ಯ, ಪು.೫೮೩

೩. ಮಂಟೇಸ್ವಾಮಿ ಕಾವ್ಯ, ಪು.೧೦೧

೪. ಅದೇ, ಪು.xii

೫. ಅದೇ, ಪು.xiv

೬. ಮೈಲಾರಲಿಂಗನ ಕಾವ್ಯ, ಪು.೩

೭. ಅದೇ, ಪು.೮

೮. ಜುಂಜಪ್ಪನ ಕಾವ್ಯ, ಮುನ್ನುಡಿ

ಅಧ್ಯಾಯ ಆರು

ಪತ್ಯದ ಹಿಂದಿನ ದೃಷ್ಟಿಕೋನ

ಒಳಗೊಂಡಂತೆ ಒಂದು ಪಠ್ಯ ನಿರ್ಮಾಣವಾಗಿರುತ್ತದೆ. ಉದಾಹರಣೆಗೆ: ಪಂಪನ ಆದಿಪುರಾಣ ತೆಗೆದುಕೊಂಡರೆ ಒಂದೆ ಪಠ್ಯದಲ್ಲಿ ವಿವಿಧ ರೀತಿಯ ಬಿಡಿ ಸಂಗ್ರಹಗಳು ಇರುವುದನ್ನು ಗಮನಿಸಬಹುದು. ಈ ಸಂಗ್ರಹಣೆಯ ಪಠ್ಯದಲ್ಲಿ ದೊರೆತಿರುವ ಬೀಡಿ ಸಂಗ್ರಹಗಳಿಗೆ ಒಂದೊಂದು ಅಕ್ಷರಗಳನ್ನು ಕೊಂಡು ಗುರುತಿಸಲಾಯಿತು. 'ಅ' ಪ್ರತಿ 'ಕ' ಪ್ರತಿ, ಡಿ ಪ್ರತಿ, ತ ಪ್ರತಿ ಎಂಬ ಕ್ರಮವನ್ನು ಅನುಸರಿಸುತ್ತಿದ್ದರು. ಈ ಕ್ರಮವನ್ನು ಸಾಹಿತ್ಯ ಅಧ್ಯಯನದ ಸಂಪಾದನೆಯ ಕ್ರಮ ಎಂಬುದಾಗಿ ಕರೆಯುತ್ತೇವೆ. ಈ ಮೂಲಕ ಒಂದು ಸಂಪೂರ್ಣವನ್ನು ರಚನೆ ಮಾಡಲಾಗುತ್ತಿತ್ತು. ಪ್ರಾಚೀನ ಸಾಹಿತ್ಯದ ಪಠ್ಯಸಂಪಾದನೆಯಲ್ಲಿ ಒಂದು ಕೃತಿಯು ಒಂದೇ ನೆಲೆಯಲ್ಲಿ ಪಠ್ಯವು ರಚನೆಯಾಗಿರುವುದಿಲ್ಲ. ಆಯಾಯಾ ಸಂದರ್ಭಕ್ಕೆ ತಕ್ಕಂತೆ ಪಠ್ಯಗಳು ರಚನೆಗೊಳ್ಳುತ್ತ ಬಂದಿದ್ದು ಹೆಚ್ಚಾಗಿ ಬಹುಪಠ್ಯ ಹೊಂದಿರುತ್ತವೆ. ಒಂದೇ ಪಠ್ಯ ರೂಪಿತವಾಗಿರಲೂ ಸಾಧ್ಯವಿಲ್ಲ.

ಬಹುಪಠ್ಯ ಕ್ರಮದಲ್ಲಿ ಸಂಪಾದನೆಯಲ್ಲಿ ದೊರಕಿರುವ ಬಿಡಿ ಭಾಗಗಳನ್ನು ಸಂಗ್ರಹಿಸಿಕೊಂಡು ಅವುಗಳನ್ನು ಸಮೀಕರಿಸಿ ಒಂದು ಪಠ್ಯವನ್ನು ರೂಪಾಂತರ ಮಾಡುತ್ತಿದ್ದರೂ, ಯಾವುದೋ ಒಂದು ಪಠ್ಯದಲ್ಲಿ ಒಂದು ಘಟನೆಯ ಅಂಶವು ದೊರಕಿದೆ ಎಂದರೆ ಬೇರೊಂದು ಸಂಗ್ರಹಣೆಯಲ್ಲಿ ಇದಕ್ಕೆ ಪೂರಕವಾಗಿರುವಂತಹ ಪಠ್ಯಗಳು ದೊರಕಿದರೆ ಇವುಗಳನ್ನು ಇಟ್ಟುಕೊಂಡು ಒಂದು ಉತ್ತಮ ಪಠ್ಯವನ್ನು ಸಂಪಾದಿಸುತ್ತಿದ್ದರು. ಒಂದಕ್ಕೂ ಮತ್ತೊಂದಕ್ಕೂ ವಿಶ್ಲೇಷಣೆಯನ್ನು ಮಾಡಲಾಗುತ್ತಿತ್ತು. ಎರಡನ್ನು ಸೇರಿಸಿಕೊಂಡು ಇದೇ ಉತ್ತಮ ಪಠ್ಯ ಎಂಬುದಾಗಿ ಅಂತಿಮ ತೀರ್ಮಾನವನ್ನು ಮಾಡುತ್ತಿದ್ದರು. ಇದೇ ಶ್ರಮವನ್ನು ಜನಪದದಲ್ಲಿ ಸಂಪಾದನೆಯ ಪಠ್ಯಗಳಲ್ಲಿ ಬಳಸಿದರು. ಇದಕ್ಕೆ ಮಾದರಿಯಾಗಿ ಪಿ.ಕೆ.ರಾಜಶೇಖರ ಅವರು ಮಲೆಮಹಾದೇಶ್ವರ ಕಾವ್ಯವನ್ನು ಮೊದಲು ಸಂಪಾದನೆಯನ್ನು ಮಾಡಿದರು. ಇವರು ಮಹಾದೇಶ್ವರ ಕಾವ್ಯ ಪರಂಪರೆಯನ್ನು ಹಾಡುವಂತಹ ಐದು ಜನ ಕಲಾವಿದರನ್ನು ಸಂಪಾದನೆಯನ್ನು ಮಾಡಿ, ಈ ಸಂಪಾದನೆಯ ಪಠ್ಯವನ್ನು ಇಟ್ಟುಕೊಂಡು ಅವುಗಳನ್ನು ಸೂಕ್ಷ್ಮವಾಗಿ ಅರಿತು ಐದು ಜನ ಕಲಾವಿದರು ಹಾಡಿದಂತಹ ಕಾವ್ಯದಲ್ಲಿ ಹತ್ತಿರವಾದಂತಹ ಸನ್ನಿವೇಶಗಳು ಇರುವುದನ್ನು ಎಲ್ಲಾ ಪಠ್ಯದಲ್ಲಿ ಗಮನಿಸಿದರು. ಆ ಪಠ್ಯಕ್ಕೆ ಮೊದಲ ಸ್ಥಾನ ಕೊಡಲು ಸಾಧ್ಯ ಇಲ್ಲ. ಪಂಪನು ರಚನೆಯನ್ನು ಮಾಡಿರುವಂತಹ ಕೃತಿಯಲ್ಲಿ ಈ ರೀತಿಯಾಗಿ ಹೇಳಲು ಸಾಧ್ಯವಿಲ್ಲ, ಏಕೆಂದರೆ ಆದಿಪುರಾಣ ಎಂಬುದು ಒಂದೇ ಕೃತಿ. ಇದು ಪಂಪ ಮಹಾಕವಿಯಿಂದ ಮಾತ್ರ ರಚನೆಯಾಗಲು ಸಾಧ್ಯ ಮೊದಲಿಗೆ ಇದೇ ಶ್ರೇಷ್ಠವಾದ ಕಾವ್ಯ ಎಂಬುದಾಗಿ ಹೇಳಬಹುದು. ಆದರೆ ಜನಪದ ಪಠ್ಯದಲ್ಲಿ ಒಂದೇ ಪಠ್ಯ ಮಾತ್ರ ಶ್ರೇಷ್ಠ ಎಂಬುದಾಗಿ ನಿರ್ಧಾರ ಮಾಡಲು ಸಾಧ್ಯವಿಲ್ಲ.

ಅಂದರೆ ಒಬ್ಬ ಕಲಾವಿದ ಒಂದೊಂದು ಪರಿಸರದಲ್ಲಿ ಬೆಳೆದಿರುತ್ತಾನೆ. ಜೊತೆಗೆ ಜನಪದ ಕಾವ್ಯಗಳು ಓದಿನ ಮೂಲಕ ಬಂದಿರುವಂತಹ ಪರಂಪರೆಯಲ್ಲಿ ಮೌಖಿಕ ಪರಂಪರೆಯಿಂದ

ಬಾಯಿಂದ ಬಾಯಿಗೆ ತಲೆಮಾರಿನಿಂದ ತಲೆಮಾರಿಗೆ ಬಂದಿರುವ ಜನಪದ ಕಾವ್ಯಗಳು ವಿವಿದ ವಾತಾವರಣದಲ್ಲಿ ಆ ಭೌಗೋಳಿಕ ಪ್ರದೇಶಕ್ಕೆ ಅನುಗುಣವಾಗಿ ರಚನೆಯನ್ನು ಪಡೆದುಕೊಂಡಿರುತ್ತವೆ. ಮಂಟೇಸ್ವಾಮಿ ಕಾವ್ಯದಲ್ಲಿ ಒಬ್ಬ ಕಲಾವಿದ ಮಂಟೇಸ್ವಾಮಿಯ ಭೌಗೋಳಿಕ ನೆಲೆಯನ್ನು ಕುರಿತು ವರ್ಣನೆಯನ್ನು ಮಾಡುತ್ತಾನೆ. ಈ ವರ್ಣನೆಯಲ್ಲಿ ತನ್ನ ಇಂದ್ರಿಯಗಳಿಗೆ ತನ್ನ ಅನುಭವಕ್ಕೆ ಧಕ್ಕೆ ಬರದಂತೆ ಸಂಗತಿಗಳನ್ನು, ವಿವರಗಳನ್ನು ಕೊಡುತ್ತ ಹೋಗುತ್ತಾನೆ. ಅಂದರೆ ಮಂಟೇಸ್ವಾಮಿಯ ಹುಟ್ಟು ಎಲ್ಲಿಂದ ಬಂದವನು ಅವನ ಪರಿಸರ, ಕುರಿತಂತೆ ಹಾಡುತ್ತಾನೆ. ಮತ್ತೊಂದು ಕಲಾವಿದ ಮಂಟೇಸ್ವಾಮಿಯ ಭೌಗೋಳಿಕ ಪರಿಸರವನ್ನು ಕುರಿತಂತೆ ಬೇರೆ ರೀತಿಯ ವರ್ಣನೆಯನ್ನು ಮಾಡುತ್ತಾನೆ. ಮಂಟೇಸ್ವಾಮಿ ಉತ್ತರ ದೇಶದವನ್ನು. ಅವನ ಕಾಲ, ಯಾವ ಯಾವ ಸ್ಥಳದಲ್ಲಿ ನೆಲೆಸಿದ ಎಂಬುದರ ವರ್ಣನೆಯನ್ನು ಕೊಡುತ್ತಾನೆ. ಆದರೆ ಇಬ್ಬರು ಕಲಾವಿದರೂ ಒಂದೇ ನೆಲೆಯಲ್ಲಿ ಕಾವ್ಯವನ್ನು ಬೆಳೆಸುತ್ತಾರೆ. ವರ್ಣನೆಗಳು ಮಾತ್ರ ಬೇರೆಬೇರೆ ರೀತಿಯಲ್ಲಿ ಇರುತ್ತವೆ. ಇದನ್ನು ನಾವು ತಪ್ಪು ಸರಿ ಎಂಬುದಾಗಿ ಹೇಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಕಲಾವಿದರು ಇರುವ ಪರಿಸರ ಮತ್ತು ಅವರು ಹಾಡುವ ಪರಿಸರ ಮುಖ್ಯವಾಗಿರುತ್ತದೆ. ಒಬ್ಬ ವ್ಯಕ್ತಿಯು ಹಾಡಿ ಕಾವ್ಯ ಶ್ರೇಷ್ಠ ಎಂದು ಮತ್ತೊಬ್ಬ ಹಾಡಿದ ಕನಿಷ್ಠ ಎಂದು ತೀರ್ಮಾನವನ್ನು ಮಾಡಲು ಸಾಧ್ಯವಿಲ್ಲ. ಎಲ್ಲಾ ಪಠ್ಯಗಳು ಸಹ ಪ್ರಮುಖವಾದ ಪಠ್ಯಗಳೇ ಆಗಿರುತ್ತದೆ.

ಜನಪದ ಮಹಾಕಾವ್ಯ ಸಾಮಾನ್ಯವಾಗಿ ಜಗತ್ತಿನ ಎಲ್ಲ ಸಮುದಾಯ ಕಥನಗಳ ವಿಶ್ವ ಅಥವಾ ಬ್ರಹ್ಮಾಂಡ ಸೃಷ್ಟಿಯ ವರ್ಣನೆಯಿಂದ ಆರಂಭವಾಗುತ್ತದೆ. ಉದಾಹರಣೆಗೆ ಮಂಟೇಸ್ವಾಮಿ ಕಾವ್ಯದಲ್ಲಿ 'ಧರೆಗೆ ದೊಡ್ಡವರು' ಎಂಬುದರ ಮೂಲಕ ಕಾವ್ಯವನ್ನು ಹೇಳುವಂತಹ ಪರಿಪಾಟವಿದೆ. ಜನಪದ ರಚನೆಯಲ್ಲಿ ಬಹುತೇಕ ಧರ್ಮಗಳ ಧಾರ್ಮಿಕ ಪಠ್ಯಗಳು ಕೂಡ ಭೂಮಿಯ ಸೃಷ್ಟಿಯ ವರ್ಣನೆಯ ಮೂಲಕವೇ ಶುರುವಾಗುತ್ತದೆ. ಈ ವರ್ಣನೆಗಳಲ್ಲಿ ಸಮುದಾಯಗಳ ಅವರ ಹುಟ್ಟು ಮತ್ತು ಮೂಲ ಪೂರ್ವಿಕರ ಕಲ್ಪನೆ, ಅನುಭವಗಳು ಇರುತ್ತವೆ. ಪ್ರಮುಖವಾಗಿ ಭೂಮಿ ಅಥವಾ ವಿಶ್ವವು ಹೇಗೆ ಸೃಷ್ಟಿಯಾಯಿತು ಅದಕ್ಕೆ ವಿನಾಶವಿದೆ ಇದರ ಒಡೆಯನು ಯಾರು ಎಂಬ ಪ್ರಶ್ನೆಗಳು ಪಠ್ಯದಲ್ಲಿ ರಚನೆಯಾಗುತ್ತದೆ. ಇಂತಹ ತಂತ್ರಜ್ಞಾನವು ಮನುಷ್ಯನ ಬುದ್ಧಿ, ಶಕ್ತಿಗಿಂತ ಹೆಚ್ಚಾಗಿ ಕಾರ್ಯನಿರ್ವಹಿಸುತ್ತಿರುವ ಕಾಲದಲ್ಲಿ ಹೊಸ ಸಂಪಾದನೆಯಲ್ಲಿ ತೊಡಗಿದಂತಹ ಸಂಪಾದಕರಿಗೆ ಹೆಚ್ಚಿನ ಆಸಕ್ತಿಯನ್ನು ಮೂಡಿಸುತ್ತದೆ. ಜನಪದ ಕಾವ್ಯಗಳಲ್ಲಿ ಭೂಮಿಯ ಅಥವಾ ಪ್ರಪಂಚ ರೂಪುಗೊಂಡಂತಹ ವಿನ್ಯಾಸವನ್ನು ಕಾವ್ಯದಲ್ಲಿ ನೀಡುತ್ತಾರೆ. ಸಮುದಾಯಗಳು ತಮ್ಮ ಹಿಂದಿನ ಸಂಸ್ಕೃತಿಯನ್ನು ತಿಳಿವಳಿಕೆಯನ್ನು ಒಳಗೊಂಡಿರುವ

ಕಾರಣದಿಂದ, ಈ ಸಮುದಾಯ ದೇವರು, ಧರ್ಮ ಎಂಬಂತಹ ಕಲ್ಪನೆಗೆ ಮಾರು ಹೋಗಿ ಬೀಡುತ್ತಾರೆ. ಹೀಗೆ ಜನಪದ ಪಾರಂಪರಿಕ ಕಾವ್ಯದ ಜ್ಞಾನವನ್ನು ತಿಳಿಯಬಹುದು.

ಕನ್ನಡ ಜನಪದ ಮೌಖಿಕ ಪರಂಪರೆಯ ಕಾವ್ಯಗಳನ್ನು ವಿಂಗಡಿಸುವುದಾದರೆ ಎರಡು ಮುಖ್ಯ ನೆಲೆಗಳಲಿ ವಿಂಗಡಿಸಿ ಗುರುತಿಸಬಹುದು. "ಚರಿತ್ರೆ ಪೂರ್ವದ ಕಥನಗಳು, ಮತ್ತೊಂದು ಚಾರಿತ್ರಿಕ ಕಾಲಘಟ್ಟದಲ್ಲಿ ನಡೆದಿರುವಂತಹ ಸನ್ನಿವೇಶಗಳನ್ನು ಗುರುತಿಸಬಹುದು. ಎಲ್ಲಮ್ಮ, ಮೈಲಾರ, ಜುಂಜಪ್ಪ, ಬೀರಪ್ಪ ಮುಂತಾದವು ಚರಿತ್ರೆ ಪೂರ್ವದ ಕತೆಗಳಾಗಿವೆ."೧ ಚರಿತ್ರೆಯನ್ನು ಗಮನಿಸಿಕೊಂಡು ಹೋದರೆ ಪುರಾಣ ದೈವಗಳ ಕತೆಗಳಾಗಿವೆ. ನಂತರದಲ್ಲಿ ಮುಖ್ಯವಾಗಿ ಹನ್ನೆರಡನೆಯ ಶತಮಾನದಲ್ಲಿ ನಡೆದಿರುವಂತಹ ಕಲ್ಯಾಣದ ಕ್ರಾಂತಿಯ(ವಚನ ಚಳವಳಿಯ) ನಂತರ ಕಾಣಿಸಿಕೊಂಡ ಚಾರಿತ್ರಿಕ ಕಾಲಘಟ್ಟದಲ್ಲಿ ಬದುಕಿದ್ದ ಪವಾಡ ಪುರುಷರು ಎಂದು ಕೆಲವು ಸಂಪಾದಕರು ಮಂಟೇಸ್ವಾಮಿ ಮಾದೇಶ್ವರ ಮುಂತಾದವರು ಜನಪದ ಕಾವ್ಯದಲ್ಲಿ ಸಾಂಸ್ಕೃತಿಕ ನಾಯಕರು ಎಂಬುದಾಗಿ ತೋರಿಸಿಕೊಟ್ಟಿದ್ದಾರೆ. ಈ ನೆಲೆಯಲ್ಲಿ ಜುಂಜಪ್ಪ ಮತ್ತು ಮೈಲಾರಲಿಂಗ ಕಾವ್ಯವನ್ನು ನೋಡಬಹುದು.

ಜನಪದ ಕಾವ್ಯಗಳ ಸಂಪಾದನೆಗಳ ಹಿಂದೆ ಅನೇಕ ತಾತ್ತ್ವಿಕತೆಗಳು ಮತ್ತು ವಿವಿಧ ವಿಧಾನಗಳು ತಿಳಿಯುವುದಕ್ಕಿಂತ ಮೊದಲು ಮೌಖಿಕ ಕಾವ್ಯ ಪರಂಪರೆಯನ್ನು ಗಮನಿಸಿದಾಗ ವಿವಿಧ ಅವಲೋಕನಗಳು ಕಂಡುಬರುತ್ತವೆ. ಜೊತೆಯಲ್ಲಿ ಸಂಪಾದನೆಯ ಸಾಂಪ್ರದಾಯಿಕ ಪ್ರಕ್ರಿಯೆಗಳು ಇವು ಕಾಲದಿಂದ ಕಾಲಕ್ಕೆ ಬದಲಾಗುತ್ತ ಸಂಪಾದನೆಯಲ್ಲಿ ವಿವಿಧ ಕ್ರಮಗಳು ಸಂಗ್ರಹಣೆಯಲ್ಲಿ ನಡೆಯುತ್ತಿದೆ. ಒಬ್ಬ ಜನಪದ ಕಾವ್ಯವನ್ನು ಹಾಡುವಂತಹ ಮೌಖಿಕ ಪರಂಪರೆಯಿಂದ ಬಂದಿರುವ ಕಲಾವಿದ ಒಂದು ಕಾವ್ಯವನ್ನು ಕಟ್ಟುವ ಜೊತೆಯಲ್ಲಿ ತನ್ನ ಬದುಕಿನ ಎಲ್ಲಾ ವಿಶಿಷ್ಟತೆಯನ್ನು ಲೋಕದೃಷ್ಟಿಯ ತನ್ನ ಕಾವ್ಯದಲ್ಲಿ ವಿವೇಚನೆ ಮಾಡುತ್ತಾನೆ. ಯಾವುದೇ ಒಂದು ಜನಪದ ಕಾವ್ಯ ಸಂಪಾದಕನಿಗೆ ಕಾವ್ಯದ ಮೌಖಿಕ ಪಠ್ಯವನ್ನು ಸಂಗ್ರಹಿಸುವುದೇ ಪ್ರಮುಖ ಗುರಿಯಾಗಿರುತ್ತದೆ. ಕಾವ್ಯವು ಎಷ್ಟು ದೊಡ್ಡದಾಗಿದ್ದರು. ಕೂಡ ಅದನ್ನು ದಾಖಲಿಸಿಕೊಂಡು ಆ ನಂತರ ಕಾವ್ಯವನ್ನು ಪರಿಷ್ಕರಿಸಿ ನಂತರ ಕ್ರಮಬದ್ಧವಾಗಿ ಒಂದು ಪಠ್ಯವನ್ನಾಗಿ ರಚನೆಯನ್ನು ಸಂಪಾದಕನು ಮಾಡುತ್ತಾನೆ. ಗ್ರಂಥಸ್ಥ ರೂಪವನ್ನು ಪಡೆದ ಕಾವ್ಯ ಹಲವಾರು ದೃಷ್ಟಿಕೋನಗಳಲ್ಲಿ ಹೊಸ ಓದಿನ ಮೂಲಕ ಹೊಸ ಆಲೋಚನೆಗಳು ಪ್ರತಿಕ್ರಿಯೆಗಳು ಪಠ್ಯದ ಮೇಲೆ ಬರಲು ಪ್ರಾರಂಭವಾಗುತ್ತದೆ.

ಆಧುನಿಕ ಜನಪದ ಪರಿಕಲ್ಪನೆಯಲ್ಲಿ ಹೊಸ ಓದಿನಲ್ಲಿ ಹೊರತಂದ ಜಾನಪದ ಕೆಲವೊಂದು ಪರಿಭಾಷೆಗಳನ್ನು ಮೊದಲಿಗೆ ಪುನರ್ ಬಳಕೆಯನ್ನು ಮಾಡಬೇಕಾಗುತ್ತದೆ. ಜನಪದ ಅಧ್ಯಯದಲ್ಲಿ

ಪಠ್ಯ ಎಂಬುದರ ಬಗ್ಗೆ ಅದರ ಸ್ವರೂಪದ ಬಗೆಗೆ ಪ್ರಥಮವಾಗಿ ತಿಳಿದುಕೊಳ್ಳಬೇಕು. ಹೊಸ ಓದಿನ ಪರಿಣಾಮವಾಗಿ ಪಠ್ಯವೆಂದರೆ ಲಿಖಿತ ರೂಪದಲ್ಲಿ ಇರುವಂತಹದ್ದು ಎಂಬ ಕಲ್ಪನೆಯಿದೆ. ಮೌಖಿಕ ಸಂಸ್ಕೃತಿಯನ್ನು ಅಧ್ಯಯನ ಮಾಡಿದ ವಿದ್ವಾಂಸರು ಸಂಗ್ರಹಿಸಿದ ಕಾವ್ಯವನ್ನು ಲಿಖಿತ ರೂಪದಲ್ಲಿ ಒಂದು ಪಠ್ಯವಾಗಿ ನಿರ್ಮಿಸಲಾಗಿದೆ. ಹಿಂದೆ ಚರಿತ್ರೆಯು ಸಂಪಾದನೆಯ ಒಂದು ಪಠ್ಯ ನಿರ್ದಿಷ್ಟವಾದುದೆಂದೂ ಉಳಿದ ಪಠ್ಯಗಳು ಅದರ ಬಹುಪಾಠಗಳೆಂದೂ ತಿಳಿಯಲಾಗಿತ್ತು ಭಿನ್ನರೂಪ ಹೊಂದಿದ ಲಿಖಿತ ರೂಪದಲ್ಲಿ ಇರುವ ಪಠ್ಯದಲ್ಲಿ ಅತ್ಯಂತ ಹಿಂದಿನ ಚರಿತ್ರೆಯ ಪಠ್ಯವೇ ಮೂಲ ಎಂದು ತಿಳಿಯುವುದು ಅಥವಾ ಅದೇ ಪಠ್ಯ ನಿರ್ದಿಷ್ಟ ಎಂದು ಅಭಿಪ್ರಾಯಪಡುವುದು ಸರಿಯಾದ ಮಾರ್ಗವಲ್ಲ. ಮೂಲಪಠ್ಯ ಕಲಾನುಕ್ರಮದಲ್ಲಿ ಜ್ಞಾನಶಿಸ್ತುಗಳು ಬದಲಾದಂತೆ ಪಠ್ಯ ತನ್ನ ನೆಲೆಯಲ್ಲಿ ಪಲ್ಲಟವಾಗುತ್ತದೆ. ಇದರಿಂದ ಮೂಲಪಠ್ಯಕ್ಕೂ ಬದಲಾವಣೆ ಹೊಂದಿರುವಂತಹ ಪಠ್ಯವನ್ನು ಇಟ್ಟುಕೊಂಡು ಈ ಎರಡರ ನಡುವಿನ ಸಾಮ್ಯತೆಯನ್ನು ಗುರುತಿಸಬಹುದು. "ಜಾನಪದ ಕ್ಷೇತ್ರದಲ್ಲಿ ಮೊನ್ನೆ ಮೊನ್ನೆಯ ತನಕ ಪ್ರಾಚೀನ ಕಾಲದ ಶುದ್ಧ ರೂಪದ ಮೂಲ ಜಾನಪದವೊಂದು ಇದ್ದು ಅದು ಕಾಲಕಾಲಕ್ಕೆ ಕೈಗಾರೀಕರಣ, ನಗರೀಕರಣ ಹಾಗೂ ಸಾಂಸ್ಕೃತಿಕ ಮಿಶ್ರರೂಪದ ಮೂಲಕ ಅಪಮೌಲ್ಯೀಕರಣಕ್ಕೆ ಒಳಗಾಗುತ್ತಿದೆ ಎಂಬ ಹಳಹಳಿಕೆ ಚಾಲ್ತಿಯಲ್ಲಿತ್ತು. ಹೀಗಾಗಿ ಗ್ರಂಥಸಂಪಾದನೆಯ ಎಲ್ಲಾ ವಿಧಿವಿಧಾನಗಳನ್ನು ಜಾನಪದಕ್ಕೆ ಅಳವಡಿಸಿ ಅಶಿಕ್ಷಿತರೂ ತಿಳಿವಳಿಕೆ ಇಲ್ಲದವರೂ ಆದ ಜನಪದರು ಕಿವಿಯಿಂದ ಕೇಳಿಸಿಕೊಂಡು ಮಾನಸಿಕ ಸ್ತರದಲ್ಲಿ ಉಳಿಸಿಕೊಂಡು ಮತ್ತೆ ಗಂಟಲ ಮೂಲಕ ಒಪ್ಪಿಸುವಾಗ ವಿಕಾಸಗೊಳಿಸುತ್ತಾರೆಂದು ಅವರ ಜಾನಪದವನ್ನು ತಿದ್ದಿ ತೀಡಿ ಪರಿಷ್ಕರಿಸಿ ಪ್ರಕಟಿಸಬೇಕೆಂದು ಛಂದಸ್ಸಿಗೆ ಹೊಂದಿಸಿ ಪ್ರಕಟಿಸಿದರು."[೨] ಇದು ಪ್ರಸ್ತುತದಲ್ಲಿ ನಡೆಯುತ್ತಿರುವ ಕೆಲಸವಾಗಿದೆ.

ಇತ್ತೀಚೆಗೆ ಜನಪದ ಸಾಹಿತ್ಯದಲ್ಲಿ ಹಿಂದೆ ಇದ್ದಂತಹ ನಿರ್ದಿಷ್ಟ ಪಠ್ಯವನ್ನು ಹೊಸ ತಲೆಮಾರಿನ ವಿದ್ವಾಂಸರ ಜೊತೆ ಮೌಖಿಕವಾಗಿ ಹಾಡುವಂತಹ ಸಂಪ್ರದಾಯದವರು ಲೋಕದ ಕೆಲವು ಪರಿವರ್ತನೆಗೆ, ಹೊಸ ಕಾಲದ ಬದಲಾವಣೆಗೆ, ಕಾವ್ಯದ ಸಂಪಾದನೆಯ ಟೀಕೆಗೆ ಗುರಿಯಾಗುತ್ತಿದ್ದಾರೆ. ಪಠ್ಯ ರೂಪದಲ್ಲಿ ವಿವಿಧ ಪ್ರಕಾರವನ್ನು ಅಳವಡಿಸಿ ಈಗಲೇ ಒಪ್ಪಿರುವಂತಹ ಓದಿನ ಸಮುದಾಯ ಜನಪದರು ಅನಕ್ಷರಸ್ಥರು, ತಿಳುವಳಿಕೆ ಇಲ್ಲದವರು ಎಂಬುದಾಗಿ ಅರಿತಿರುವ ಇವರು ಜನಪದರು. ತಲೆಮಾರಿನಿಂದ ತಲೆಮಾರಿಗೆ ಕಂಠಸ್ಥ ರೂಪದಲ್ಲಿ ಬಂದಿರುವ ಮೌಖಿಕ ಕಾವ್ಯ ಸಂಪ್ರದಾಯ ತನ್ನ ಮೂಲವನ್ನು ಉಳಿಸಿಕೊಂಡು ಮತ್ತೆ ಕಂಠಪಾಠದ ಮೂಲಕ ಹಾಡುವಾಗ ಆಧುನಿಕ ಬೆಳವಣಿಗೆಯಿಂದ ಮೌಖಿಕ ಕಾವ್ಯವೂ ತಿದ್ದಿ ತೀಡಿ ಶುದ್ಧಗೊಳಿಸಿ. ರೂಪಕ, ಉಪಮೆಗಳನ್ನು ಬಳಸಿಕೊಂಡು ಸೌಂದರ್ಯ ನೀಡಿ ಕಾವ್ಯ ಮೀಮಾಂಸೆಯ

ರೂಪದಲ್ಲಿ ಛಂದಸ್ಸಿಗೆ ಒಳಪಡಿಸಿ ಪ್ರಕಟಿಸುತ್ತಿರುವುದು ಹೀಗೆ ಸ್ವೀಕರಿಸುವುದು ಎಂಬುದೇ ಒಂದು ಪ್ರಶ್ನೆಯಾಗಿದೆ.

ಜನಪದ ಕಲಾವಿದರು ತಮ್ಮ ಮೌಖಿಕ ಪರಂಪರೆಯ ಪಠ್ಯದ ರೂಪದಲ್ಲಿ ತಮ್ಮಲ್ಲಿರುವ ಜನಪದ ಪಠ್ಯವನ್ನು ಯಾವುದೇ ಬದಲಾವಣೆ ಇಲ್ಲದ ರೀತಿಯಲ್ಲಿ ಬಂದ ಕಾವ್ಯವನ್ನು ಸರಾಗವಾಗಿ ಒಪ್ಪಿಸುತ್ತಾರೆ. ನಂತರ ಇದೇ ಕಾವ್ಯವನ್ನು ಹಾಡುವಂತಹ ಸಮಯದಲ್ಲಿ ಹಿಂದೆ ಒಪ್ಪಿಸಿದ ರೀತಿಯಲ್ಲಿ ಎರಡನೇ ಬಾರಿಯೂ ಕಾವ್ಯವನ್ನು ಹಾಡುವುದರ ಮೂಲಕ ಯಾವ ಬದಲಾವಣೆಯೂ ಕಂಡುಬರುವುದಿಲ್ಲ. ಒಂದು ವೇಳೆ ಕಂಡುಬಂದಲ್ಲಿ ಪಠ್ಯದಲ್ಲಿ ಬದಲಾವಣೆ ಯನ್ನು ಗುರುತಿಸಬಹುದು. ಕೆಲವು ಸಂದರ್ಭದಲ್ಲಿ ಮಧ್ಯದಲ್ಲಿ ಕೆಲವು ಘಟನೆಗಳು ಮರೆತು ಹೋಗಬಹುದು. ಈ ಸಮಯದಲ್ಲಿ ಹಾಡುವವನ್ನು ತನ್ನ ಮಹತ್ವವನ್ನು ಕಳೆದುಕೊಳ್ಳುತ್ತಾನೆ. ಆದರೆ ಇತ್ತೀಚಿನ ದಿನಗಳಲ್ಲಿ ಈ ಕಲಾವಿದ ಹಾಡುವ ಪಠ್ಯದ ಪರಿಕಲ್ಪನೆಗಳು ಬೇರೆ ಬೇರೆಯಾಗಿವೆ. ಜನಪದ ಕಲಾವಿದ ಕಾವ್ಯವನ್ನು ಮೌಖಿಕ ರೂಪದ್ದಲ್ಲದ ಜನಪದ ಕಾವ್ಯ ಒಂದನ್ನು. ಒಂದು ನಿರ್ದಿಷ್ಟ ಸಮಯದಲ್ಲಿ ಹಾಗೂ ಕೇಳುಂತವರ(ಪ್ರೇಕ್ಷಕರನ್ನು) ಮುಂದೆ ಹಾಡುವಾಗ ಭಿನ್ನ ರೂಪವನ್ನು ಪಡೆಯುತ್ತದೆ. ಒಂದೇ ಕಾವ್ಯ ವಿಭಿನ್ನ ಸಮುದಾಯದ ಪರಂಪರೆಯ ಸಂಸ್ಕೃತಿಯ ಹಿನ್ನೆಲೆಯಿಂದ ಕಲಾವಿದ ಹಾಡುವಾಗ ಒಂದೇ ಕಾವ್ಯವನ್ನು ಬೇರೆ ಬೇರೆ ಸಂದರ್ಭದಲ್ಲಿ ಭಿನ್ನ, ಭಿನ್ನವಾಗಿ ಒಪ್ಪಿಸುವುದರ ಮೂಲಕ ಕಾವ್ಯ ಬದಲಾವಣೆಯನ್ನು ತೋರ್ಪಡಿಸುತ್ತದೆ. ಜನಪದ ಕಾವ್ಯಗಳು ಯಾವಾಗಲೂ ಒಂದೇ ರೀತಿಯಾದ ಪರಿಗ್ರಹಣೆಯನ್ನು ಹೊಂದಿರುತ್ತದೆ. ಚಲನಶೀಲತೆಯನ್ನು ಪಡೆಯುತ್ತದೆ. ಇದರಿಂದ ಕಾವ್ಯ ತನ್ನ ಮೂಲಸತ್ಯವನ್ನು ಕಳೆದುಕೊಳ್ಳುತ್ತದೆ. ಒಬ್ಬ ಕಲಾವಿದನು ಹಾಡುವುದರಲ್ಲಿ ಹೆಚ್ಚು ಪರಿಣತಿಯನ್ನು ಪಡೆಯಬೇಕಾದರೆ ತನ್ನ ಬಾಯಿಯಲ್ಲಿ ಒಂದು ಕಾವ್ಯವನ್ನು ನೆಲೆಸಿಕೊಂಡಿರಬೇಕು. ಇದನ್ನು ವಿವಿಧ ಸಮಯದಲ್ಲಿ ಹಾಡುವ ಮೂಲಕ ಹೆಚ್ಚು ಅಭ್ಯಾಸಿಸುವುದರ ಮೂಲಕ ಪಕ್ವತೆಯನ್ನು ಪಡೆಯುತ್ತಾನೆ. ಒಬ್ಬ ಕಲಾವಿದ ಒಂದು ಕಾವ್ಯವನ್ನು ಕಂಠಪಾಠ ಮಾಡಿ ಅದನ್ನು ಪ್ರದರ್ಶನ ಮಾಡುತ್ತಾನೆ. ಅಂದರೆ ಅದು ಅವನ ನೆನಪಿನಲ್ಲಿ ಇರುತ್ತದೆ. ಇದನ್ನು ನೆನಪಿನಲ್ಲಿರಿಸಿಕೊಳ್ಳುವುದಕ್ಕೆ ಹಲವಾರು ವಿಧಾನವನ್ನು ಅನುಸರಿಸುತ್ತಾನೆ. ಕಾವ್ಯದ ಮದ್ಯ ಉಪಕಥೆಯನ್ನು ಹೇಳುವುದು ನುಡಿಗಟ್ಟುಗಳನ್ನು ಹೇಳುವುದು, ಕಾವ್ಯದ ಪಲ್ಲವಿಯನ್ನು ಆಗಿಂದಾಗೆ ಹಾಡುತ್ತಿರುವುದು ಈ ರೀತಿಯ ವಿಧಾನವನ್ನು ಅರಿತಿರುತ್ತಾನೆ. ಇದು ಕಾವ್ಯವನ್ನು ನೆನಪಿನಲ್ಲಿಟ್ಟುಕೊಳ್ಳಲು ಸಹಾಯಕವಾಗಿದೆ. ಜನಪದ ಕಾವ್ಯ ಸಿದ್ಧಮಾದರಿಯಲ್ಲಿ ದೊರೆಯುವಂತಹ ಗ್ರಂಥವಲ್ಲ ಇದೊಂದು ಪ್ರೀತಿಪೂರ್ವಕವಾದ ಸಮುದಾಯದ ಪರಂಪರೆಯ ಕಲಿಕೆಯಾಗಿದೆ.

ಜನಪದದ ಇತರ ಪ್ರಕಾರಗಳಿಗಿಂತ ಕಾವ್ಯಪ್ರಕಾರವು ಸುದೀರ್ಘವಾಗಿರುವಂತಹದು. ಇದನ್ನು ಸಂಪಾದನೆ ಮಾಡುವುದಕ್ಕಾಗಲಿ, ಕಲಾವಿದ ಅವುಗಳನ್ನು ಹಾಡುವುದಕ್ಕಾಗಲಿ ತುಂಬ ಸಮಯವನ್ನು ತೆಗೆದುಕೊಳ್ಳುತ್ತಾನೆ. ಒಂದು ಮೌಖಿಕ ರೂಪದಲ್ಲಿ ಇರುವ ಪಠ್ಯವು ಕಲಾವಿದನ ರಚನೆಯನ್ನು ಮಾಡಿರುವುದಂತದ್ದಲ್ಲ. ಇದು ಕಲಾವಿದರ ಪರಂಪರೆಯ ಸಾಕಷ್ಟು ಜನರು ಇದ್ದಾರೆ. ಕಾವ್ಯವನ್ನು ಹಾಡುವಂತವರಿಗೆ ಒಂದು ಎಲ್ಲೆಯನ್ನು ನಿರ್ಮಾಣ ಮಾಡಲಾಗಿರುತ್ತದೆ. ಆ ಚೌಕಟ್ಟಿನೊಳಗೆ ಕಲಾವಿದ ಹಾಡಬೇಕು ಇದನ್ನು ಮೀರುವಂತಿಲ್ಲ. ಕಾವ್ಯವನ್ನು ಹಾಡುವಂತಹ ಅಥವಾ ಹೇಳುವಂತಹ ಸಮಯದಲ್ಲಿ ಆಯಾ ಸಮಯಕ್ಕೆ ಬದಲಾವಣೆ ಹೊಂದುವುದು ಕಾವ್ಯದಲ್ಲಿ ಅಲ್ಲ, ಪ್ರೇಕ್ಷಕರ ಗಮನವು ಅತ್ತ ಹೋಗದಂತೆ ಅವರನ್ನು ಹಿಂದೆ ನಿರ್ದಿಷ್ಟ ನೆಲೆಯಲ್ಲಿ ಇರಿಸುವುದಕ್ಕೆ ಕಾವ್ಯದ ಬದಲಾವಣೆ ಪ್ರಮುಖವಾಗುತ್ತದೆ.

ಒಂದು ಉತ್ತಮ ಪಠ್ಯ ತನ್ನ ವ್ಯಾಪ್ತಿಯಲ್ಲಿ ಎಲ್ಲಾ ಸಮಯಕ್ಕೂ ಹೊಂದಿಕೊಳ್ಳುವಂತಹ ಸಮರ್ಥ ಕಾವ್ಯ ಪಡೆದುಕೊಂಡಿರುತ್ತದೆ. ಯಾವುದೇ ಸಮಯದಲ್ಲಿ ಆಗಲಿ ಕಾವ್ಯ ಆ ಸಮಯಕ್ಕೆ ಅನುಗುಣವಾಗಿ ಹಿಂದಿನ ಪರಂಪರೆಯ ವ್ಯಕ್ತಿಗಳು ನೆನೆಯುತ್ತಾರೆ. ತನ್ನ ಕಾಲದ ಅನೇಕ ವಿಷಯಗಳನ್ನು ಸೇರಿಸುತ್ತಾ ಪಠ್ಯವನ್ನು ಪುನರ್ ರೂಪಿಸುತ್ತಿರುತ್ತಾರೆ. ಇದರಲ್ಲಿ ಕಾವ್ಯದ ಮೌಖಿಕ ಪಾತ್ರ ಮುಖ್ಯವಾದದ್ದು. ಇದು ಕಲಾವಿದನಾಗಲೀ, ಸಂಪಾದಕನಾಗಲೀ ಬದಲಾವಣೆಯನ್ನು ಮಾಡುವುದಕ್ಕೆ ಬರುವುದಿಲ್ಲ. ಜನಪದ ಕಾವ್ಯವು ಒಂದು ಪರಿಸರದಲ್ಲಿ ಕಾಲಕಾಲಕ್ಕೂ ಕಲಾವಿದನ ಬಾಯಲ್ಲಿ ಹೊಂದಿಕೊಳ್ಳುವಂತಹ ಅನಿವಾರ್ಯತೆ ಕಾವ್ಯಕ್ಕೆ ಇರುತ್ತದೆ. ಮಾದೇಶ್ವರ ಕಾವ್ಯವನ್ನು ಹಾಡುವಂತಹ ಒಬ್ಬ ಕಲಾವಿದ-ಕಾವ್ಯವನ್ನು ಹಾಡುವುದಕ್ಕಿಂತ ಮುಂಚಿತವಾಗಿ ದೈವವನ್ನು ನೆನೆದು ಆ ನಂತರ ಕಾವ್ಯಭಾಗಕ್ಕೆ ಪ್ರವೇಶವನ್ನು ಪಡೆಯುತ್ತಾನೆ. ನಂತರ ಕಲಾವಿದ ಯಾವ ಸಮಯದಲ್ಲಿ ಹಾಡುತ್ತಿದ್ದಾನೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ತಮ್ಮ ಪೂರ್ವಜರು ಬಿಟ್ಟುಹೋಗಿರುವಂತಹ ಮೌಖಿಕ ಕಾವ್ಯವನ್ನು, ಇದು ಬೆಳೆದುಬಂದ ದಾರಿಯನ್ನು, ಕಾವ್ಯದಲ್ಲಿ ಅನೇಕ ವಿಷಯಗಳನ್ನು ಸೇರಿಸಿಕೊಂಡು ಕಾವ್ಯದ ಬೆಳವಣಿಗೆಯನ್ನು ಹೆಚ್ಚಿಸುತ್ತಾನೆ. ಇದು ಕಲಾವಿದನ ವೈಯಕ್ತಿ ವಿಷಯವಾಗಿರುವುದಿಲ್ಲ. ತನ್ನ ಹಿರಿಯರು ಕಲಿತು ಹಾಡುವಾಗ ಇವರು ಕಲಿತು ಅದೇ ಧಾಟಿಯನ್ನು ಅನುಸರಿಸುತ್ತಾ ಬರುತ್ತದೆ. ಇದನ್ನು ಬದಲಾವಣೆಯನ್ನು ಮಾಡಲು ಯಾವ ಕಲಾವಿದನಿಂದಲೂ ಸಾಧ್ಯವಾಗುವುದಿಲ್ಲ. ಇದರ ಜೊತೆಯಲ್ಲಿ ಕಾವ್ಯ ಹುಟ್ಟಿರುವಂತಹ ಘಟನೆಗಳನ್ನು ರೂಪಗೊಂಡಿರುವಂತಹ ಪಾತ್ರವನ್ನು ಕೂಡ ಬದಲಾವಣೆಯನ್ನು ಮಾಡಲು ಆಗದು. ಏಕೆಂದರೆ ಯಾವುದೇ ಒಂದು ಕಾವ್ಯ ರಚನೆಯಾಗಿದೆ ಎಂದರೆ ಅದಕ್ಕೆ ಹಲವಾರು ಚಾರಿತ್ರಿಕ ಕಾರಣಗಳು ಕಾವ್ಯದ ಘಟನೆಗೆ ಪೂರಕವಾಗಿರುತ್ತವೆ. ಹನ್ನೆರಡನೇ ಶತಮಾನದಲ್ಲಿ ಬಸವಣ್ಣನನ್ನು ಗುರುತಿಸುತ್ತವೆ. ಇವನ

ನಂತರ ಅಲ್ಲಮಪ್ರಭುವನ್ನು ಗುರುತು ಮಾಡುತ್ತವೆ. ಅದೇ ಕಾಲಕ್ಕೆ ಮಂಟೇಸ್ವಾಮಿಯ ಕಾಲವನ್ನು ಕಾವ್ಯದಲ್ಲಿ ಹೇಳುತ್ತವೆ. ಆದ್ದರಿಂದ ಕಾವ್ಯದ ಘಟನೆ ಮತ್ತು ಪಾತ್ರವನ್ನು ಮಾಡುವುದಕ್ಕೆ ಯಾವುದೇ ನೆಪಗಳು ಇರುವುದಿಲ್ಲ.

ಕಾವ್ಯದ ಪಠ್ಯವನ್ನು ಇಟ್ಟುಕೊಂಡು ಹೊಸ ಕಲಾವಿದರು ಕಾವ್ಯದ ಕಾಲ, ಘಟನೆ ಮತ್ತು ಪಾತ್ರದ ಬದಲಾವಣೆಯನ್ನು ಮಾಡುವುದು ಅಸಾಧ್ಯ. ಈ ಕಲಾವಿದರು ಹಿಂದಿನ ಕಾವ್ಯದ ಧಾಟಿಯನ್ನು ಕಂಠಪಾಠ ಮಾಡಿರುವುದರಿಂದ ಸಾಧ್ಯವಾಗುವುದಿಲ್ಲ. "ಯಾವುದೇ ಜನಪದ ಕಾವ್ಯವಾಗಲೀ ಕಥನಗೀತೆಯಾಗಲೀ ಕಾವ್ಯದ ಸೃಷ್ಟಿಯ ಹಿಂದಿನ ಪರಿಸರದೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿರುತ್ತದೆ."೩ ಮಂಟೇಸ್ವಾಮಿ ಕಾವ್ಯದಲ್ಲಿ ಕಾವೇರಿ ಹೊಳೆಯ ಪಾತ್ರವಿಲ್ಲದೆ ಕತೆಯನ್ನು ಊಹಿಸಲು ಸಾಧ್ಯವಿಲ್ಲ. ಮಾದಪ್ಪನ ಕತೆಯಲ್ಲಿ ಏಳುಮಲೆಗಳ ಪಾತ್ರವಿಲ್ಲದೆ ಕತೆ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಗೋಣಿಬಸಪ್ಪನ ಕಾವ್ಯದಲ್ಲಿ ತುಂಗಭದ್ರಾ ನದಿ ಹಮ್ಮಿಗೆ ಹೊಳೆಯಾಗಿ ಬರುತ್ತದೆ. ಒಮ್ಮೆ ತನ್ನನ್ನೇ ಸೀಳಿಕೊಂಡು ದಾರಿಯಾಗಿ ಬಿಡುತ್ತದೆ. ಗವಿ ತಾಯಮ್ಮ ಮಾತಾಡುತ್ತಾಳೆ. ಅಂದರೆ ಪರಿಸರವೇ ಪಾತ್ರವಾಗಿರುತ್ತದೆ. ಅಂದರೆ ಕಾವ್ಯದ ಸ್ವರೂಪವನ್ನು ಪರಿಸರವು ನಿರ್ಣಯಿಸುತ್ತಿರುತ್ತದೆ. ಇವು ಪಠ್ಯದಲ್ಲಿ ಎಲ್ಲಾ ಕಾಲಕ್ಕೂ ಇರುವ ಅಂಶಗಳು" ಎಂಬುದಾಗಿ ಡಾ.ವೆಂಕಟೇಶ ಇಂದ್ವಾಡಿಯವರು ಅಭಿಪ್ರಾಯಿಸುತ್ತಾರೆ. ಇದರಲ್ಲಿ ಕಾವ್ಯ ಹಾಡುವ ಕಲಾವಿದನಾಗಲೀ, ಕಾವ್ಯವನ್ನು ಸಂಪಾದಿಸುವ ಸಂಪಾದಕನಾಗಲೀ, ಹಾಡುವಾಗಲೀ, ಸಂಗ್ರಹಣೆ ಮಾಡುವಾಗಲೀ, ನೈಜ ಸ್ಥಿತಿಯಲ್ಲಿರುವಂತಹ ಕಾವ್ಯವನ್ನು ಬದಲಾವಣೆಯನ್ನು ಮಾಡಬಾರದು. ಈ ಬದಲಾವಣೆಯಿಂದ ಕಾವ್ಯ ತನ್ನ ಮೂಲಸತ್ವವನ್ನು ಕಳೆದುಕೊಳ್ಳುತ್ತದೆ. ಜೊತೆಗೆ ಸಂಪಾದಕನಿಂದ ಗ್ರಂಥರೂಪಕ್ಕೆ ಬಂದಾಗ ಕೆಲವು ಮಾಹಿತಿಗಳು ಕಾವ್ಯದಿಂದ ದೂರ ಉಳಿಯುತ್ತವೆ. ಆದ್ದರಿಂದ ಕಾವ್ಯ ನೈಜತೆಯಿಂದ ಕೂಡಿರಬೇಕು.

ಕಾವ್ಯಗಳು ರಚನೆಯಾಗಿರುವುದಕ್ಕೆ ಚರಿತ್ರೆಯು ಕಾರಣವಾಗಿದೆ. ಕಾವ್ಯಗಳು ಯಾವುದೇ ಒಂದು ಕಾಲಕ್ಕೆ ಯಾವುದೇ ಒಬ್ಬ ವ್ಯಕ್ತಿ ಕುರಿತಂತೆ ರೂಗೊಂಡಿರುವುದಿಲ್ಲ. ನಮ್ಮ ಪೂರ್ವಿಕರಿಗೆ ಸಮಯ ಮತ್ತು ಪ್ರದೇಶದ ಬಗೆಗೆ ಅವರದೇ ಆದ ಕೆಲವು ನಿರ್ಣಯಗಳಿದ್ದವು. ಈ ಜನಪದರಿಗೆ ಹಿಂದೆ ನಡೆದಿರುವ ಕೆಲವು ಘಟನೆಗಳನ್ನು ಒಂದೊಂದಾಗಿ ಸಂಗ್ರಹಿಸುವವುದು ಪ್ರಮುಖವಾಗಿರಲಿಲ್ಲ. ಅವರ ತಿಳುವಳಿಕೆಗೆ ಅನುಗುಣವಾಗುವಂತೆ ಆ ಸಮಯದಲ್ಲಿ ಅವರ ಅನುಭವವನ್ನು ಕುರಿತಂತೆ ತಮ್ಮಲ್ಲಿರುವ ಕೆಲವು ಜ್ಞಾನವನ್ನು ಇಟ್ಟುಕೊಂಡು ಚರಿತ್ರೆಯನ್ನು ನಿರ್ಮಾಣ ಮಾಡಲಾಗಿದೆ. ಮಾದೇಶ್ವರನು ಎಲ್ಲಿಂದ ಬಂದ? ಅವನ ಮುಖ್ಯ ಗುರು ಏನು ಎಂಬ ಅರಿವು ಜನಪದದಲ್ಲಿ ಮೂಡಿತ್ತು.. ಇದು ಸಮುದಾಯವನ್ನು ಕುರಿತಂತೆ ಚರಿತ್ರೆಯ

ಕೆಲವು ಗುಣ ಸ್ವಭಾವವಾಗಿದೆ. ಚಾರಿತ್ರಿಕವಾದ ಕೆಲವು ವಿಷಯಗಳು ಒಬ್ಬ ವ್ಯಕ್ತಿಯನ್ನು ಕುರಿತು ಮಾತ್ರ ಇರುವುದಿಲ್ಲ. ಅವನ ಸುತ್ತಮುತ್ತ ಇರುವ ಸಾಮಾಜಿಕ ಚರಿತ್ರೆಯು ಮುಖ್ಯವಾಗುತ್ತದೆ. ಅವರ ಸಮಕಾಲೀನರು ಮತ್ತು ಅವನ ಚರಿತ್ರೆಯು ಸಹ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಉದಾಹರಣೆಗೆ ಅಲ್ಲಮನ ಜೊತೆಗೆ ಮಂಟೇಸ್ವಾಮಿಯನ್ನು ಕಾವ್ಯದಲ್ಲಿ ಒಂದೇ ಕಾಲಮಾನದಲ್ಲಿಟ್ಟು ಅವರ ಚರಿತ್ರೆಯನ್ನು ಕಾವ್ಯದಲ್ಲಿ ಹೇಳುತ್ತಾರೆ. ಆದರೆ ಹನ್ನೆರಡನೇ ಶತಮಾನದಲ್ಲಿ ಅಲ್ಲಮನು ತನ್ನ ಚಾರಿತ್ರಿಕ ನಿಲುವನ್ನು ಕಂಡುಕೊಂಡಿದ್ದ. ಜನಪದ ಕಾವ್ಯ ಪ್ರಕಾರದಲ್ಲಿ ಹದಿನೈದನೇ ಶತಮಾನದಲ್ಲಿ ಕೂಡ ಇವನ ಗುರುತುಗಳನ್ನು ಕಾವ್ಯದಲ್ಲಿ ಸೃಷ್ಟಿಸಲಾಗುತ್ತದೆ. ಒಂದು ಜನಪದ ಪಠ್ಯವನ್ನು ಸಮಕಾಲೀನ ಸ್ಥಿತಿಗೆ ಬಳಸಿಕೊಳ್ಳುವ ಜೊತೆಗೆ ಜನಪದರು ಹಾಡುವ ಕಾವ್ಯವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳುವ ವಿಧಾನವೂ ಇರುತ್ತದೆ. ಕಾವ್ಯವನ್ನು ಹಾಡುವ ಕಲಾವಿದ ಘಟನೆಯನ್ನು ಕಾಲಕ್ರಮೇಣವಾಗಿ ಒಂದಾದ ಮೇಲ್ಲೊಂದು ಪದ ಕಟ್ಟಿ ಹಾಡುವಾಗ ಯಾವುದೋ ಒಂದು ಭಾಗವನ್ನು ಮರೆಮಾಡಿ ಹೇಳುವನು. ಏಕೆಂದರೆ ಕಲಾವಿದನ ವೈಯಕ್ತಿಕತೆಯು ಇಲ್ಲಿ ಕೆಲಸ ಮಾಡುತ್ತದೆ. ನಾವು ಯಾವುದೇ ಜನಪದ ಕಾವ್ಯವನ್ನು ತೆಗೆದುಕೊಂಡರೂ, ಸಂಪಾದನೆಯಲ್ಲಾಗಲೀ ಕಾವ್ಯ ಹೇಳುವುದಲ್ಲಾಗಲೀ ಕೆಲವು ಚರಿತ್ರೆಯ ನಾಮದಿಂದಲ್ಲೋ, ಸ್ಥಳದಿಂದಲೋ ಶುರುವಾಗುತ್ತದೆ. ಇವುಗಳನ್ನು ಸಾಂಸ್ಕೃತಿಕ ಲಕ್ಷಣಗಳು ಎಂದು ಕರೆಯಬಹುದು.

ಕನ್ನಡ ಜನಪದ ಸಾಹಿತ್ಯದಲ್ಲಿ ಎಲ್ಲಾ ಮಹಾಕಾವ್ಯಗಳು ಒಂದು ಪ್ರಾದೇಶಿಕ ಪರಂಪರೆಯನ್ನು ಒಳಗೊಂಡಿವೆ. ಇವು ಪ್ರಾದೇಶಿಕವಾಗಿ ಆಯಾಯ ಭಾಗಕ್ಕೆ ಸಂಬಂಧಿಸಿದಂತೆ, ಸಮುದಾಯಕ್ಕೆ ಸಂಬಂಧಿಸಿದಂತೆ ಅವರ ಸಂಸ್ಕೃತಿಗೆ ಸಂಬಂಧಿಸಿದಂತೆ ರಚನೆಗೊಂಡಿರುತ್ತವೆ. ಮಾದೇಶ್ವರ ಮತ್ತು ಮಂಟೇಸ್ವಾಮಿ ಎಂಬ ಎರಡು ಕಾವ್ಯಗಳು ಮೈಸೂರು, ಮಂಡ್ಯ, ಚಾಮರಾಜನಗರ, ಕೊಳ್ಳೇಗಾಲ ಮುಂತಾದ ಪ್ರದೇಶಗಳಲ್ಲಿ ಹೆಚ್ಚು ಕಂಡುಬಂದರೆ ಮೈಲಾರಲಿಂಗ ಕಾವ್ಯ ಬಳ್ಳಾರಿಯ ಕೆಲವು ತಾಲ್ಲೂಕುಗಳಲ್ಲಿ ಹಾವೇರಿ, ರಾಣಿಬೆನ್ನೂರು, ಹುಬ್ಬಳ್ಳಿ ಪ್ರದೇಶದಲ್ಲಿ ಕಂಡುಬರುತ್ತದೆ. ಜುಂಜಪ್ಪನ ಕಾವ್ಯ ಚಿತ್ರದುರ್ಗ, ತುಮಕೂರು, ಶಿರಾ, ಹಿರಿಯೂರು, ಕೆಲವು ಪ್ರದೇಶಗಳಲ್ಲಿ ಕಂಡುಬರುತ್ತದೆ. ಇವು ಅಲ್ಲಿನ ಯಾವುದೊಂದು ಘಟನೆಯಿಂದ ಇರಬಹುದು ಪವಾಡದಿಂದ ಇರಬಹುದು. ಒಬ್ಬ ಸಾಂಸ್ಕೃತಿಕ ನಾಯಕನನ್ನು ಹುಟ್ಟಿ ಹಾಕಿದೆ. ಇದರಿಂದ ಕೆಲವು ಸಮುದಾಯಗಳು ಸೃಷ್ಟಿಗೊಂಡು ಒಂದು ಕಾವ್ಯ ಪರಂಪರೆಯೇ ರಚನೆಗೊಂಡು ತಮ್ಮ ಜೀವನದ ಉದ್ದಕ್ಕೂ ಕಾವ್ಯವನ್ನು ಹಾಡುತ್ತ ಕಲಾವಿದರು ತಮ್ಮ ಸಂಸ್ಕೃತಿಯ ಪ್ರತೀಕವಾದರು. ಈ ನಾಯಕರು ಒಂದು ಚರಿತ್ರೆಯನ್ನು ನಿರ್ದೇಶಿಸುವಲ್ಲಿ ಕಾರಣಕರ್ತರಾಗಿದ್ದಾರೆ. ಜನಪದ ಕಥನಕಾರರು ಚರಿತ್ರೆಯ ಬಹುಪ್ರಮುಖವಾಗಿರುವಂತಹ ಘಟನೆಗಳನ್ನು ತಾವು ಹಾಡುವ

ಕತೆಯಲ್ಲಿ ತಮ್ಮ ಸಾಂಸ್ಕೃತಿಕ ನಾಯಕರ ಕಥೆ ಮತ್ತು ಕಾವ್ಯದ ಜೊತೆಯಲ್ಲಿ ಅವರ ಸಮಕಾಲೀನ ರಾಜರನ್ನು ತರುತ್ತಾರೆ. ಇದರ ಜೊತೆಯಲ್ಲಿ ಕೆಲವು ಪ್ರಮುಖ ಪ್ರದೇಶಗಳನ್ನು, ಊರುಗಳನ್ನು ಚಿತ್ರಿಸುತ್ತಾರೆ. ಉದಾಹರಣೆಗೆ: "ಮಂಟೇಸ್ವಾಮಿ ಕತೆಯಲ್ಲಿ ಮುಟ್ಟಿನಳ್ಳಿ ಎಂಬ ಊರು ಬರುತ್ತದೆ. ಆ ಊರಿಗೆ ಮುಟ್ಟಿನಳ್ಳಿ ಎಂಬ ಹೆಸರು ಮಂಟೇಸ್ವಾಮಿಗಳು ಬರುವುದಕ್ಕಿಂತ ಪೂರ್ವದಲ್ಲೇ ಇತ್ತು. ಆದರೆ ಕಲಾವಿದ ಅದನ್ನು ಮಂಟೇಸ್ವಾಮಿಗಳಿಗೆ ಸಮೀಕರಿಸಿರಬೇಕು. ಅದಕ್ಕೆ ಒಂದು ತಂತ್ರವನ್ನು ಬಳಸುತ್ತಾರೆ. ದೊಡ್ಡಮ್ಮ ತಾಯಿ ಅಲ್ಲಿ ಮುಟ್ಟಾದಳು ಆದ್ದರಿಂದ ಅದಕ್ಕೆ ಮುಟ್ಟಿನಳ್ಳಿ ಎಂಬ ಹೆಸರು ಬಂತು ಎಂದು ಹೇಳಿಬಿಡುತ್ತಾನೆ."[೪]

ಈ ರೀತಿ ಜನಪದ ಕಾವ್ಯಪಠ್ಯಗಳಲ್ಲಿ ಮಾತ್ರ ಪ್ರದೇಶವನ್ನು ಕುರಿತು ಊರುಗಳನ್ನು ಕುರಿತಂತೆ ಇರುತ್ತದೆ. ಹೀಗೆ ಪಠ್ಯರೂಪವಾಗುವುದಕ್ಕೆ ನಾನಾ ಕಾರಣಗಳು ಇರುತ್ತವೆ. ಕೇವಲ ಚರಿತ್ರೆಯನ್ನು ಆಧರಿಸಿ ಕಾವ್ಯವನ್ನು ಕಟ್ಟುವುದಕ್ಕೆ ಸಾಧ್ಯವಿಲ್ಲ. ಸಮುದಾಯಕ್ಕೆ ತಕ್ಕಂತೆ ಕಾವ್ಯಗಳು ರಚನೆಯಾಗುತ್ತವೆ. ಯಾವುದೋ ಒಂದು ಸಮುದಾಯ ಒಂದು ಕಾವ್ಯವನ್ನು ಮೌಖಿಕ ಪರಂಪರೆಯಿಂದ ಕಂಠಪಾಠ ಮಾಡಿಕೊಂಡು ಹಾಡುತ್ತಿದೆ ಎಂದರೇ ಈ ಕಾವ್ಯದ ಸುತ್ತ ಬಹುಪಠ್ಯಕ್ರಮ ನಿರ್ಮಾಣವಾಗಿರುತ್ತದೆ. ಇದು ಶಿಷ್ಟ ಜನಪದ ಕಾವ್ಯ ಪ್ರಕಾರದ ಅಧ್ಯಯನದಲ್ಲಿ ಕಂಡುಬರುತ್ತದೆ. ಒಂದು ದೇವರ ಬಗ್ಗೆಯಾಗಲೀ ಒಬ್ಬ ವ್ಯಕ್ತಿಯಬಗ್ಗೆಯಾಗಲೀ ಒಂದೇ ರೀತಿಯ ಅಭಿಪ್ರಾಯ ಇರುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಹೊಸ ಓದು ಮತ್ತು ದೃಷ್ಟಿಕೋನಗಳು ಬದಲಾವಣೆಯನ್ನು ಬಯಸುತ್ತವೆ. ಶಿವನ ಬಗ್ಗೆ ಹಿಂದೂಧರ್ಮದಲ್ಲಿ ಎಲ್ಲಾ ಜಾತಿಗಳು ಪೂಜನೀಯ ಮನೋಭಾವವನ್ನು ಹೊಂದಿರುವುದರಿಂದ ಎಲ್ಲಾ ಜಾತಿಗೆ ಸೇರಿದವನು ಎಂಬುದನ್ನು ಹೇಳುವಂತಿಲ್ಲ. ಯಾವುದಾದರೂ ಒಂದು ಜಾತಿಗೆ ಹೇಳಬೇಕಾಗುತ್ತದೆ. ಇದೇ ರೀತಿ ಒಂದು ಕಾವ್ಯ ನಿರ್ಮಾಣವಾಗಿದೆ ಎಂದರೆ ವಿವಿಧ ಸಮುದಾಯಗಳು ಅವರದೇ ಆದ ಪಾಪರಂಪರಿಕ ಕಾವ್ಯವನ್ನು ಕಟ್ಟಿಕೊಂಡಿರುತ್ತವೆ. ಸೋಲಿಗರು ಕೂಡ ಮಾದಪ್ಪನ ಚರಿತ್ರೆಯನ್ನು ಕುರಿತ ಕಾವ್ಯವನ್ನು ಕಟ್ಟಿಕೊಂಡಿದ್ದಾರೆ. ಬೇಡಗಂಪಣರಾಯರ ಮಾದಪ್ಪನನ್ನು ಕುರಿತು ಅವರದೇ ಆದ ಚರಿತ್ರೆಯನ್ನು ಕಾವ್ಯದಲ್ಲಿ ರಚನೆ ಮಾಡಿರುತ್ತಾರೆ. ವೀರಶೈವ ಮಠಗಳು ಮಾದಪ್ಪನನ್ನು ತಮ್ಮ ಸಾಮುದಾಯಿಕ ಒಲವಿನಿಂದ ಕಾವ್ಯ ರೂಪಿಸಿರುತ್ತವೆ. ದಲಿತ ಸಮುದಾಯವು ಮಾದಪ್ಪನನ್ನು ಕುರಿತು ಒಂದು ಚರಿತ್ರೆಯನ್ನು ನಿರ್ಮಿಸಿಕೊಂಡಿರುವುದರಿಂದ ಒಂದೊಂದು ಸಮುದಾಯದ ಪಠ್ಯವನ್ನು ಸಂಗ್ರಹಿಸಬೇಕಾಗುತ್ತದೆ. ಇದರಲ್ಲಿ ಎಲ್ಲಾ ಪಠ್ಯವನ್ನು ಪ್ರಮುಖವಾಗಿ ಪರಿಗಣಿಸಬೇಕಾಗುತ್ತದೆ.

ಕನ್ನಡ ಜನಪದ ಕಾವ್ಯ ಸಮುದಾಯ ಕಥನಗಳಲ್ಲಿ ವಿಶಿಷ್ಟ ಮತ್ತು ವ್ಯಕ್ತಿಯ ವರ್ಣನೆಗಳು ಪರಸ್ಪರ ಸಾಮ್ಯತೆ ಹೊಂದಿರುವ ಹಾಗೆಯೇ ಭಿನ್ನತೆಯನ್ನು ಹೊಂದಿವೆ ಇದಕ್ಕೆ ಪಠ್ಯದಲ್ಲಿರುವ

ಹಲವು ದೃಷ್ಟಿಕೋನವನ್ನು ನೋಡಬಹುದು. ಇದರ ಹಿಂದಿನ ಪ್ರತಿಯೊಂದು ಪರಿಕಲ್ಪನೆಯೂ ವಿಶಿಷ್ಟವಾಗಿದೆ. ಈ ವಿಶಿಷ್ಟತೆಯು ಆಯಾ ಕಾವ್ಯದ ಪಠ್ಯಗಳನ್ನು ಕಟ್ಟಿ ಹಾಡುವ ಮತ್ತು ಕೇಳುವ ಜನಸಮುದಾಯಗಳಿಗೂ ಅವು ಬದುಕುವ ಪ್ರದೇಶದ ಸ್ಥಳೀಯ ಸಾಮಾಜಿಕ, ಸಾಂಸ್ಕೃತಿಕ, ಲೋಕಗಳಿಗೂ ಸಂಬಂಧವನ್ನು ಹೊಂದಿರುತ್ತವೆ. ಜನಪದ ಕಾವ್ಯಸಮುದಾಯದಲ್ಲಿ ಇರುವ ಪಠ್ಯದ ಜ್ಞಾನವು ಕೆಲವು ಸಂಪಾದನೆಗೆ ಮತ್ತು ವಿವಿಧ ದೃಷ್ಟಿಕೋನ, ಆಲೋಚನೆಗೆ ಕಾರಣವಾಗುತ್ತದೆ. ಈ ವಲಯದಲ್ಲಿ ಕೆಲಸ ಮಾಡುವವರು ಅಥವಾ ಸಂಪಾದನೆಯ ಕಾರ್ಯದಲ್ಲಿ ತೊಡಗುವವರು ವಾಸ್ತವಿಕ ಜ್ಞಾನದ ಜೊತೆಯಲ್ಲಿ ಸಮಕಾಲೀನ ಅಧ್ಯಯನವನ್ನು ತಿಳಿದು ಪಠ್ಯದ ದೃಷ್ಟಿಕೋನವನ್ನು ಅರಿಯಬೇಕು.

ಒಟ್ಟಿನಲ್ಲಿ ಜನಪದ ಮಹಾಕಾವ್ಯದಲ್ಲಿ ಪಠ್ಯಗಳಲ್ಲಿ ಇರುವಂತಹ ಏಕಪಠ್ಯ ಮತ್ತು ಬಹುಪಠ್ಯಕ್ಕೆ ಇರುವ ದೃಷ್ಟಿಕೋನದಲ್ಲಿ ಸಂಪಾದನೆಯು ವಿವಿಧ ನೆಲೆಯನ್ನು ಕುರಿತು ಚರ್ಚೆ ಮಾಡಲಾಗಿದೆ.ಜನಪದ ಮಹಾಕಾವ್ಯಗಳಲ್ಲಿ ಏಕರೂಪದ ಪಠ್ಯ ದೊರಕಿರುವುದಕ್ಕೆ ಸಾಧ್ಯವಾಗುವುದಿಲ್ಲ. ಜನಪದ ಕಾವ್ಯಗಳಲ್ಲಿ ಬಹುಪಠ್ಯದ ಪ್ರಕ್ರಿಯೆಯು ನಿರಂತರವಾಗಿ ರೂಪುಗೊಂಡಿರುತ್ತದೆ. ಇಂದು ಆಧುನಿಕ ಓದಿನಿಂದ ಮಾತ್ರ ಸಾಧ್ಯವಾಗುವಂತಹದ್ದು ಪಠ್ಯದ ದೃಷ್ಟಿಕೋನವಾಗಿದೆ.

ಕೊನೆ ಟಿಪ್ಪಣಿ

೧. ಸಿರಿ ಜನಪದ ಕಾವ್ಯ, ಪು.೩

೨. ಅದೇ, ಪು.೧೬೦

೩. ಗೋಣಿ ಬಸಪ್ಪನ ಕಾವ್ಯ, ಪು.೩೯

೪. ಅದೇ, ಪು.೪೧

ಅಧ್ಯಾಯ ಏಳು

ಸಂವಾದಕರ ದೃಷ್ಟಿಕೋನ

ಅಧ್ಯಾಯ ಏಳು

ಸಂವಾದಕರ ದೃಷ್ಟಿಕೋನ

ಪರಂಪರೆ ಮತ್ತು ಜಾನಪದದ ಬಗೆಗೆ ನಮಗೆ ವಿದ್ವತ್ತು ಬೆಳೆದದ್ದು ಆಧುನಿಕ ಕಾಲದಲ್ಲಿ ಎಂಬುದು ಗಮನಿಸಬೇಕಾದ ವಿಚಾರ. 'ಆಧುನಿಕತೆ' ಎಂಬುದನ್ನು ವಸಾಹತು ಕಾಲದ ನಂತರದ ಬೆಳವಣಿಗೆ ಎಂದು ಭಾವಿಸಿದರೆ ಜಾನಪದ ಅಧ್ಯಯನವು ಆಧುನಿಕತೆಗೆ ವಿರುದ್ಧವಾಗಿ ಕಾಣಿಸಿಕೊಂಡಿತು. ಕೈಗಾರಿಕೀಕರಣ, ಊಳಿಗಮಾನ್ಯ ಪದ್ಧತಿ, ಹೊಸ ಅರಿವಿನ ಉಗಮ, ಹೊಸ ಶಿಕ್ಷಣದ ಕಲಿಕೆ ಇವು ಆಧುನಿಕತೆಯ ಮುಖ್ಯ ಗುಣಗಳಾಗಿದ್ದರೆ ಇವುಗಳಿಗೆ ವಿರೋಧ ನೆಲೆಯಲ್ಲಿ ಹೊಸ ತಲೆಮಾರಿನ ಜನಪದ ವಿದ್ವಾಂಸರು ಹಳೆಯ ಸಂಪಾದನೆಯ ಕಾರ್ಯವನ್ನು ಕೈಬಿಟ್ಟು ಹೊಸ ರೀತಿಯ ಅಧ್ಯಯನದಲ್ಲಿ ತೊಡಗಿದ್ದಾರೆ. ಇಂದು ಸಮಕಾಲೀನ ಜನಪದ ಅಧ್ಯಯನದ ದೃಷ್ಟಿಕೋನಗಳಿಗೆ ಅನುಗುಣವಾಗಿ ಸಂಗ್ರಹಣೆ ಕಾರ್ಯ ನಡೆದಿದೆ. ಹೊಸ ರೀತಿಯಲ್ಲಿ ಜಾನಪದ ಕಾವ್ಯಗಳನ್ನು ಸಂಪಾದನೆ ಮಾಡವುದಕ್ಕೆ ವಿವಿಧ ಬಗೆಯ ದೃಷ್ಟಿಕೋನವನ್ನು ಅಳವಡಿಸಿಕೊಳ್ಳವುದು ಎಪ್ಪತ್ತು ಮತ್ತು ಎಂಬತ್ತರ ದಶಕದಲ್ಲಿ ಆರಂಭವಾಯಿತು.

ಕ್ರಿ.ಶ.೧೮೦೦ರ ಅವಧಿಯಲ್ಲಿ ಸರ್ ವಾಟ್ಸನ್' ಶಿಷ್ಯನಾಂದ ಜಾನ್ ಲೇಡನ್‌ನಿಂದ ಆರಂಭಗೊಂಡ ಕನ್ನಡ ಜನಪದ ಸಂಗ್ರಹ ಮತ್ತು ಸಂಪಾದನ ಕಾರ್ಯ ನಿರಂತರವಾಗಿ ನಡೆಯುತ್ತಾ ಬಂದಿದೆ. ಸಂಪಾದನೆ ಕಾರ್ಯ ಅಡೆತಡೆಯಿಲ್ಲದೆ ನಡೆದಿದೆ. ಆರಂಭದ ದಿನಗಳಲ್ಲಿ ಸಂಪಾದನೆಯ ಕಾರ್ಯದಲ್ಲಿ ಅಥವಾ ಸಂಗ್ರಹಕರಿಗೆ ತೋರಿದಂತೆ ಸಂಪಾದನೆ ಮಾಡಲಾಗುತ್ತಿತ್ತು. ಆದರೆ ಜನಪದ ಒಂದು ಶಿಸ್ತುಬದ್ಧ ಅಧ್ಯಯನಕ್ಕೆ ಒಳಪಟ್ಟ ಮೇಲೆ ಜೊತೆಗೆ ಪಾಶ್ಚಾತ್ಯ ಸಂಪಾದನಾ ರೀತಿ ನೀತಿ ಪರಿಚಯವಾದ ಮೇಲೆ ಸಂಗ್ರಹಿತ ವಸ್ತುವನ್ನು ನಿಯಮಬದ್ಧವಾಗಿ ಅದರ ಕ್ರಮವರಿತು ಸಂಪಾದಿಸಲು ಆರಂಭಿಸಿದರು. ಹಾಗಿದ್ದರೂ ಒಂದು ಜನಪದ ಕೃತಿಯನ್ನು ಹೀಗೆಯೇ ಸಂಪಾದಿಸಬೇಕೆಂಬ ಕಟ್ಟುಪಾಡಿಗೆ ಒಳಪಟ್ಟು ಯಾವ ಸಂಗ್ರಹಕರೂ

ಸಂಪಾದಿಸಿಲ್ಲವೆಂಬುದುನ್ನು ತಿಳಿಯಬಹುದು. ಈ ಸಂಪಾದನೆಯಲ್ಲಿ ವಿದ್ವಾಂಸರ ವೈಯಕ್ತಿಕ ಅಭಿಪ್ರಾಯಗಳು ಕಡಿಮೆ ಇದ್ದವೂ. ಹೀಗೆಯೇ ಸಂಪಾದಿಸಬೇಕೆಂಬ ಕಟ್ಟುಪಾಡು ಕೂಡ ಇರಲಿಲ್ಲ. ಆದರೆ ಜಾಗತಿಕ ಮಟ್ಟದಲ್ಲಿ ಒಂದು ಜನಪದ ಕೃತಿ ನಿಂತುಕೊಳ್ಳಬೇಕಾದರೆ ಅದಕ್ಕೆ ಒಂದು ಸಾರ್ವತ್ರಿಕ ಚೌಕಟ್ಟಿನ ಬದ್ಧತೆಯ ಅಗತ್ಯವಿರುತ್ತದೆ. ಈ ಹಿನ್ನೆಲೆಯಲ್ಲಿ ಇಂದು ನಾವು ಜನಪದ ಕೃತಿಗಳ ಸಂಪಾದನಾ ವಿಧಾನದ ದೃಷ್ಟಿಕೋನವನ್ನು ತಿಳಿಯಬೇಕಾಗುತ್ತದೆ. ಇದನ್ನು ಭಿನ್ನ ಭಿನ್ನ ನೆಲೆಯಲ್ಲಿ ಅಧ್ಯಯನ ಮಾಡಬೇಕು. ಜನಪದ ಮಹಾಕಾವ್ಯಗಳನ್ನು ಆಯಾ ಸಮಾಜಕ್ಕೆ ತಕ್ಕಂತೆ ಕಾಲಕ್ಕೆ ತಕ್ಕಂತೆ ಸಂಪಾದನೆಯ ಹಿಂದಿನ ಮೂಲದಿಂದ ಹಿಡಿದು ಇಂದಿನ ವರೆಗೂ ಅದರ ಸ್ವರೂಪವನ್ನು ಅಧ್ಯಯನ ಮಾಡಬೇಕಾದ ಅಗತ್ಯವಿದೆ.

ಕರ್ನಾಟಕದಲ್ಲಿ ಈವರೆಗೆ ನಡೆದಿರುವ ಸಂಪಾದನೆಯ ಕಾರ್ಯ ಮೌಖಿಕ ಕಾವ್ಯಗಳ ಹಿನ್ನೆಲೆಯಲ್ಲಿ ಸಂಗ್ರಹಣೆಗೊಂಡಿವೆ. ಈ ಮೌಖಿಕ ಕಾವ್ಯಗಳು ಕೇವಲ ರಂಜನೆಯ ಕಾರಣಕ್ಕಾಗಿ ಹುಟ್ಟಿದ್ದಲ್ಲ. ಆಚರಣೆ, ನಂಬಿಕೆ, ಕಲೆ ಎಲ್ಲವನ್ನೂ ಒಳಗೊಂಡಿವೆ. ಇದರ ಜೊತೆಯಲ್ಲಿ ದೈವದ ಕಲ್ಪನೆಯೊಡನೆ ಬೆರೆತುಕೊಂಡಿದೆ. ಮೊದಲಘಟ್ಟದ ಅಧ್ಯಯನ ಮತ್ತು ಎರಡನೇ ಹಂತದ ಅಧ್ಯಯನಗಳಲ್ಲಿ ಈ ದೈವದ ನೆಲೆಯೂ ಕಂಡುಬರುವುದಿಲ್ಲ. ಹೊಸ ತಲೆಮಾರಿನ ಸಂಪಾದನೆಯಲ್ಲಿ ಇದು ಹೆಚ್ಚಾಗಿ ಕಂಡುಬರುತ್ತದೆ. ಎರಡನೆಯೇ ಹಂತದ ಸಂಗ್ರಹಣೆಯಲ್ಲಿ ಕೆಲವೇ ಜನರು ಮಾತ್ರ ಈ ರೀತಿ ಅಧ್ಯಯನದಲ್ಲಿ ತೊಡಗಿದವರು. ಹೀಗೆ ಇನ್ನೂ ಹತ್ತಾರು ಆಚರಣೆಗಳು ಅದರ ಹಿನ್ನೆಲೆಯಲ್ಲಿ ಸೃಷ್ಟಿಯಾದ ಕಾವ್ಯಗಳು ಇನ್ನೂ ಜೀವಂತವಾಗಿವೆ. ಇವುಗಳನ್ನು ಸಮುದಾಯಗಳು ಆಚರಣೆಯ ರೂಪದಲ್ಲಿ ಮುಂದುವರೆಸಿಕೊಂಡು ಬರುತ್ತಿವೆ.

ಜನಪದ ಸಾಹಿತ್ಯ ಸಂಪಾದನೆ ಕುರಿತಂತೆ ಅನೇಕ ಸಂಗ್ರಹಣೆಯ ಕಾರ್ಯ ನಡೆದಿದ್ದು, ವಿಭಾಗೀಕರಣದಲ್ಲಿ ಕೆಲವು ಸಮಸ್ಯೆಗಳಿ ಇವೆ. ನಮ್ಮ ಆದಿಮ ಕಾವ್ಯಗಳು ಮತ್ತು ಚಾರಿತ್ರಿಕ ಕಾವ್ಯಗಳು ಎಂಬ ವಿಭಾಗ ಮಾಡಿದಂತೆ ಆಧುನಿಕ ಎನ್ನುವಂತಹ ಜನಪದ ಕಾವ್ಯಗಳು ಈಗ ಹುಟ್ಟಿಲ್ಲ. ಇದರಿಂದ ಜನಪದವೆಂದರೆ ಪ್ರಾಚೀನ ವಸ್ತುವನ್ನು ಒಳಗೊಂಡದ್ದು ಎಂಬ ನಿಲುವಿಗೆ ಬರುವುದು ಆಧುನಿಕತೆಯಿಂದ ಉಂಟು ಮಾಡಿದ ಬಿಕ್ಕಟ್ಟು ಎನ್ನಬಹುದು. "ಸಂಗೊಳ್ಳಿರಾಯಣ್ಣ ಮತ್ತು ಟಿಪ್ಪುವನ್ನು ಲಾವಣಿಗಳ ಮೂಲಕ ಹೇಳಿದ ನಂತರ ನಮಗೆ ಪೂರ್ಣ ಪ್ರಮಾಣವೆನ್ನುವ ಯಾವ ಜನಪದ ರಚನೆಗಳು ದೊರೆಯುವುದಿಲ್ಲ. ಕೆಲವು ಪಠ್ಯಗಳಲ್ಲಿ ಕಲಿ, ಕಾಲಜ್ಞಾನಗಳನ್ನು ಹೇಳುವ ಭಾಗದಲ್ಲಿ ಆಧುನಿಕ ವಿದ್ಯಮಾನಗಳು ಕಂಡುಬಂದರೂ ಅವು ಆಂಶಿಕವಾಗಿ ಬಂದವು ಅಷ್ಟೆ. ಪೂರ್ಣಪ್ರಮಾಣದಲ್ಲಿ ಆಧುನಿಕತೆಯನ್ನೇ ವಸ್ತುವಾಗಿಸಿಕೊಂಡ ಕಥನಗಳು ಇಲ್ಲ. ಇದನ್ನು ಒಪ್ಪುವುದಾದರೆ ಆಧುನಿಕ ಕಾಲದಲ್ಲಿ ಜನಪದವಿಲ್ಲವೆಂದೇ ಅರ್ಥ."[೧] ವಸಾಹತುಶಾಹಿಯ

ನಂತರ ಜನಪದ ಯಾವ ರೂಪಾಂತರಗಳಲ್ಲಿ ತನ್ನ ಚಲನೆಯನ್ನು ಮುಂದುವರಿಸಿದೆಯೋ ಅದನ್ನು ನಾವು ಜನಪದ ಎಂದು ಕರೆಯಲು ಸಿದ್ಧರಿಲ್ಲ. ಇದಕ್ಕೆ ಮುಖ್ಯ ಕಾರಣ ಜನಪದವನ್ನು ನಿರ್ವಚಿಸುವಲ್ಲಿ ಅನೇಕ ತೊಡಕುಗಳಿವೆ. ಮೊದಲ ಘಟ್ಟದಲ್ಲಿ ಜನಪದವೆಂದರೆ ಅದು ಅನಕ್ಷರಸ್ಥರ ಸೃಷ್ಟಿ ಎಂದು ಕೆಲವು ವ್ಯಾಖ್ಯಾನಿಗಳಿದ್ದು ಇವುಗಳನ್ನು ಶಿಷ್ಟ–ಪರಿಶಿಷ್ಟ ಎಂದು ಎರಡು ಗುಂಪಗಳಾಗಿ ಮಾಡಲಾಗಿದೆ. ಅದಕ್ಕೆ ಹಿಂದಿನಿಂದ ಇದುವರೆಗೆ ಸಂಪಾದನೆ ಮಾಡಿರುವ ಎಲ್ಲ ಜನಪದ ಕಾವ್ಯಗಳು ನಮ್ಮ ಅನಕ್ಷರಸ್ಥರ ಕೊಡುಗೆಯೇ ಆಗಿವೆ. ನಂತರ ಹೊಸ ತಲೆಮಾರಿನ ಸಂಪಾದನೆಯ ವಿಭಿನ್ನ ನೆಲೆಯಿಂದ ಸೃಜನಶೀಲ ಸಂಗ್ರಹಣೆ ಕಾರ್ಯವು ನಡೆಯಿತು.

ಸಂಪಾದಕನು ಕ್ಷೇತ್ರಕಾರ್ಯದಲ್ಲಿ ತೊಡಗಿದಾಗ ಅವನದೆಯಾದ ಒಂದು ಆಲೋಚನೆಯ ಕ್ರಮವನ್ನು ಅಥವಾ ಅರಿವಿನ ಕ್ರಮವನ್ನು ಅನುಸರಿಸಿಕೊಂಡು ಸಂಪಾದನೆಯನ್ನು ಮಾಡುತ್ತಾ ಹೋಗುತ್ತಾನೆ. ಒಬ್ಬ ಸಂಪಾದಕನಿರಬಹುದು ಅಥವಾ ಒಬ್ಬ ಕಲಾವಿದನಿರಬಹುದು ಕಾವ್ಯದಲ್ಲಿ ಯಾವುದೇ ಒಂದು ಭಾಗವನ್ನು ವರ್ಣಿಸಲು ಇಷ್ಟವಾಗುವುದಿಲ್ಲವೋ ಆಗ ಆ ಭಾಗವನ್ನು ತನ್ನ ಅನುಕೂಲಕ್ಕೆ ಮತ್ತು ಸಂದರ್ಭಕ್ಕೆ ತಕ್ಕಂತೆ ಕಾವ್ಯದ ಸ್ವರೂಪದಲ್ಲಿ ಬದಲಾವಣೆ ಮಾಡಲಾಗುತ್ತದೆ. ಈ ರೀತಿಯ ಪಠ್ಯಗಳಲ್ಲಿ ಸಂಪಾದಕ ತನ್ನ ದೃಷ್ಟಿಕೋನಕ್ಕೆ ಅನುಗುಣವಾಗಿ ಪಠ್ಯವನ್ನು ಸಂಪಾದಿಸುವ ಅಲೋಚನೆಗಳು ಕಂಡುಬರುತ್ತವೆ. ಏಕಪಠ್ಯ ಸಂಗ್ರಹಣೆಯನ್ನು ಮಾಡುವಾಗ ಕಾವ್ಯದಲ್ಲಿ ಪ್ರದರ್ಶನ ಸಿದ್ಧಾಂತದ ನೆಲೆಯಲ್ಲಿ ಜನಪದ ಪಠ್ಯವನ್ನು ಹಾಡು ವಂತಹದ್ದಾಗಿರುತ್ತದೆ. ಒಬ್ಬ ಕಲಾವಿದ ಒಂದು ಕಾವ್ಯವನ್ನು ಒಂದು ರೀತಿಯಾಗಿ ಹಾಡಿದರೆ ಮತ್ತೊಬ್ಬ ಅದೇ ಕಾವ್ಯವನ್ನು ಮತ್ತೊಂದು ರೀತಿಯಲ್ಲಿ ಹಾಡುತ್ತಾನೆ. ಹೀಗೆ ಬೇರೆ ಬೇರೆ ರೀತಿಯಲ್ಲಿ ಹಾಡುವ ಪ್ರದರ್ಶನಗಳು ನಮಗೆ ಮುಖ್ಯವಾಗುತ್ತದೆ. ಏಕೆಂದರೆ ಇದರಿಂದ ಹೊಸ ಕಾವ್ಯದ ಚಿಂತನೆಯು ಶುರುವಾಗುತ್ತದೆ. ಈ ರೀತಿಯಾಗಿಯೇ ಪಠ್ಯವನ್ನು ಅರ್ಥ ಮಾಡಿಕೊಳ್ಳಬೇಕು. ಇದರಿಂದ ಒಂದೇ ಕಾವ್ಯದಲ್ಲಿ ಇರುವ ಹಲವು ಭಿನ್ನತೆಗಳನ್ನು ಗುರುತಿಸಬಹುದು. ಇದು ಹೊಸ ತಲೆಮಾರಿನ ಸಂಪಾದನೆಯ ದೃಷ್ಟಿಕೋನದ ನೆಲೆಯಾಗಿದೆ.

ಕಲಾವಿದನೊಬ್ಬ ಕಾವ್ಯವನ್ನು ಹೇಳುವಾಗ ಪ್ರೇಕ್ಷಕರಿಗೆ ಬೇಸರವಾಗದಂತೆ ಅವರಿಗೆ ತಿಳಿಯುವಂತೆ ಹೇಳುತ್ತಾನೆ. ಆದರೆ ಅದೇ ಕಲಾವಿದ ಒಂದು ಸಮುದಾಯದ ಒಳಗಡೆ ಹಾಡುವಾಗ ಹಲಹು ಬದಲಾವಣೆ ಮಾಡಿಕೊಳ್ಳುತ್ತಾನೆ. ಅಂದರೆ ಒಂದೊಂದು ಪ್ರದರ್ಶನದಲ್ಲೂ ಒಂದೊಂದು ಪಠ್ಯ ನಿರ್ಮಾಣವಾಗುತ್ತದೆ. ಅದು ಕಲಾವಿದ ಮತ್ತು ಪಠ್ಯಕ್ಕೆ ಇರುವ ಸಂಬಂಧವಾಗಿದೆ. ಈ ಹಿನ್ನೆಲೆಯಲ್ಲಿ ಸಂಪಾದಕರು ಆಲೋಚನೆಗಳ ಸಂಪಾದನೆಯ ಮೇಲೆ ಪ್ರಭಾವ ಬೀರಿದೆ.

ಮೊದಲ ಘಟ್ಟದ ಸಂಪಾದಕರಲ್ಲಿ ಈ ಹಿಂದಿನ ದೃಷ್ಟಿಕೋನ ಕೆಲಸ ಮಾಡಿದೆ. ಏಕೆಂದರೆ ಪದಗಳ ಉಚ್ಚಾರಣೆ ಬರುವುದಿಲ್ಲ ಎಂಬ ನಿಲುವು ನಮ್ಮ ಮೊದಲ ಘಟ್ಟದ ಸಂಪಾದಕರ ಕೃಷ್ಣ ಎಂಬುದನ್ನು ಕಿಷ್ಣ ಎಂಬುದಾಗಿ ಕರೆಯುವುದು. ಹೀಗೆ ಜನಪದರು ತಮ್ಮ ಆಡುಮಾತಿನ ಮೂಲಕ ಕಾವ್ಯವನ್ನು ರಚನೆ ಮಾಡಿದರು. ಇವುಗಳನ್ನು ತಿದ್ದುವ ಕೆಲಸದಲ್ಲಿ ತೊಡಗಿದರು. ಇವರ ಅರ್ಥದಲ್ಲಿ ಉಚ್ಚಾರಗಳು ಶುದ್ಧವಾಗಿರಬೇಕು ಅಶುದ್ಧವಾಗಿರಬಾರದು ಎಂಬುದಾಗಿ ತಿಳಿಸಿ ಓದುಗರಿಗೆ ಅರ್ಥವಾಗುವ ರೀತಿಯಲ್ಲಿ ಇರಬೇಕು ಎಂಬುದಾಗಿ ತಿಳಿಸಿದರು. ಈ ರೀತಿಯ ತಿದ್ದುವ ಕೆಲಸವನ್ನು ಮಾಡಿದವರಲ್ಲಿ ಗೊರೂರು ಅವರು ಪ್ರಮುಖರು ಸಂಪಾದನೆಯ ಕಾರ್ಯದಲ್ಲಿ ತೊಡಗಿರುವಾಗ ಜನಪದರು ಹಾಡುವಂತಹ ಸಮಯದಲ್ಲಿ ಮಧ್ಯ ಹಾಡುವುದನ್ನು ಅನಿವಾರ್ಯ ಕಾರಣಕ್ಕೆ ನಿಲ್ಲಿಸಿದಾಗ ಆ ಕಲಿಯದ ಜಾಗಕ್ಕೆ ನಾವು ನಮ್ಮದೆಯಾದ ಕಲ್ಪನೆಯನ್ನು ಅಲ್ಲಿಗೆ ಸೇರಿಸುತ್ತಿದ್ದೆವು. ಏಕೆಂದರೆ ಜನಪದ ಕಾವ್ಯದಲ್ಲಿ ಮೌಖಿಕ ಪ್ರಧಾನವಾಗಿರುವುದರಿಂದ ಮಾತಿನಲ್ಲಿ ಹಾಡುವಂತಹ ಭಾಷೆಯನ್ನು ಬಳಸುವುದರಿಂದ ಭಾಷೆಯಲ್ಲಿ ಶ್ರೇಷ್ಠ–ಕನಿಷ್ಠ ಎಂಬುದನ್ನು ತಿಳಿದು ಆ ಕಾವ್ಯ ಭಾಗವನ್ನು ತಿದ್ದುತ್ತಿದ್ದರು. ಇದು ಅವರು ಭಾಷಿಕ ಅಭಿವ್ಯಕ್ತಿಯಲ್ಲಿ ಇರುತ್ತಿದ್ದ ಕಾವ್ಯ ಭಾಷೆಯ ರಚನೆಯಲ್ಲಿ ಮಾರ್ಪಟ್ಟಿತು. ಶೀಲ ಮತ್ತು ಅಶ್ಲೀಲ ಕಲ್ಪನೆಗಳು ರೂಪಗೊಂಡವು. ಈ ರೀತಿಯ ಕಾರ್ಯ ಮೊದಲ ಘಟ್ಟದಲ್ಲಿ ನಡೆಯಿತು.

ಎರಡನೇ ಹಂತದಲ್ಲಿ ಸಂಪಾದನೆಯ ದೃಷ್ಟಿಕೋನ ಬದಲಾದವು. ಈ ಜಗತ್ತು ಅನ್ನುವಂತದ್ದು ಬರೀ ಜನಪದ ಮಾತ್ರವಲ್ಲ, ಹಲವು ವಾಙ್ಮಯದಲ್ಲಿ ಸೇರಿಕೊಂಡಿದೆ. ಕಥೆ, ಗಾದೆ, ಒಗಟು, ಮಹಾಕಾವ್ಯ ಒಡಪು ಮುಂತಾದ ಅನೇಕ ಪ್ರಕಾರಗಳಿವೆವೆ. ಇವುಗಳನ್ನು ನೋಡುವ ಕ್ರಮದಲ್ಲಿ ಬದಲಾವಣೆ ಮಾಡಿಕೊಂಡರು ಹಾಗೂ ವ್ಯಾಪ್ತಿಯು ಕೂಡ ದೊಡ್ಡದಾಯಿತು. ಒಂದೊಂದು ಪಠ್ಯವನ್ನು ಬೇರೆ ಬೇರೆ ಹಿನ್ನೆಲೆಯಲ್ಲಿ ನೋಡುವ ಕ್ರಮವನ್ನು ಎರಡನೇ ಹಂತದಲ್ಲಿ ಮಾಡಿದ್ದು ಈ ಸಮಯದಲ್ಲಿ ಧಾರವಾಡ, ಮೈಸೂರು ವಿಶ್ವವಿದ್ಯಾಲನಿಯಗಳ ಮಟ್ಟದಲ್ಲಿ ಅಧ್ಯಯನಗಳು ಆರಂಭವಾದವು. ಜೊತೆಗೆ ಜಾನಪದ ಅಕಾಡೆಮಿಗಳು ಸಂಗ್ರಹ ಕಾರ್ಯವನ್ನುಮುಂದುವರಿಸಿದವು.

ನಂತರ ಹೊಸ ಕಾಲದಲ್ಲಿ ಅಂದರೆ ಆಧುನಿಕತೆಯು ದಿನ ದಿನ ಬೆಳೆದಂತೆ ಸಂಪಾದಕರ ಆಲೋಚನೆಗಳು ಬದಲಾದವು. ಶ್ರೇಷ್ಠಕನಿಷ್ಠ ಎಂಬ ತಾರತಮ್ಯವನ್ನು ಬಿಟ್ಟು ಎಲ್ಲಾ ಪಠ್ಯಗಳು ಕೂಡ ಶ್ರೇಷ್ಠ ಎಂಬ ನಿಲುವಿಗೆ ಬಂದರು. ಒಬ್ಬ ಕಲಾವಿದ ಒಂದೇ ಕಾವ್ಯವನ್ನು ಹಲವಾರು ಬಗೆಯಲ್ಲಿ ಹಾಡುತ್ತಾನೆ. ಆ ಎಲ್ಲಾ ಪಠ್ಯಗಳು ಶ್ರೇಷ್ಠ ಎಂಬ ನಿರ್ಧಾರಕ್ಕೆ ಬರಲಾಯಿತು. ಜಾಗತೀಕರಣದ ಪ್ರಭಾವದಿಂದ ನಗರ ಕೇಂದ್ರಿತ ಜೀವನ ಕ್ರಮ ಹೆಚ್ಚಾದಂತೆ ಹಳ್ಳಿ ಮತ್ತು

ನಗರ ಎನ್ನುವ ಬಿರುಕು ಉಂಟಾದಾಗ ಜನಪದದ ರೂಪಾಂತರಗಳು ಹುಟ್ಟಿಕೊಂಡಿವೆ. ಭಾಷಿಕ ರಚನೆ ಮತ್ತು ಸಂವಹನದಲ್ಲೂ ಈ ಬಿರುಕು ಉಂಟಾದಾಗ ಒಂದು ಪಠ್ಯದ ಸಂವಹನಕ್ಕೆ ಎರಡು ಮಾದರಿಗಳು ಬೇಕಾದವು."[೨] ಅವುಗಳಲ್ಲಿ ಮೌಖಿಕ ಪಠ್ಯವೊಂದು ಮತ್ತೊಂದು ವ್ಯಕ್ತಿಯಿಂದ ಲಿಖಿತ ಪಠ್ಯವಾಗಿ ಮೂಡುವ ಲಕ್ಷಣ ಯಾವುದೋ ಅದೇ ಗೌಣವಾಗಿರುವಂತಹ ಸಂದರ್ಭವನ್ನು ಕಾವ್ಯದಲ್ಲಿ ಗಮನಿಸುತ್ತೇವೆ. ಇದು ನಮ್ಮ ಈ ಕಾಲದ ಸಂಪಾದನೆಯಲ್ಲಿ ಸಕಷ್ಟು ಅಧ್ಯಯನಗಳು ನಡೆದಿದೆ. ಶಿಷ್ಟಪಠ್ಯಗಳು ಹೇಗೆ ಸಂಪಾದಕನೆಂಬ ಒಬ್ಬ ಸಂಗ್ರಾಹಕನನ್ನು ಹುಟ್ಟಿಸಿಕೊಂಡಂತೆ ಜನಪದದಲ್ಲೂ ಕೂಡ ಸಂಪಾದಕನು ಇರುತ್ತಾನೆ. ಕರ್ನಾಟಕದಲ್ಲಿ ಜನಪದ ಪಠ್ಯಗಳ ಸಂಪಾದನೆಗೆ ನೂರು ವರ್ಷಗಳ ಚರಿತ್ರೆ ಇದ್ದರೂ ಇದರ ತಾತ್ವಿಕಾಂಶಗಳ ಬಗೆಗೆ ಜನಪದ ವಿದ್ವಾಂಸರು ಚರ್ಚೆಗೆ ಎತ್ತುಕೊಂಡಿಲ್ಲ. ಮೊದಲಘಟ್ಟದ ಸಂಗ್ರಹಕಾರರು ಗ್ರಂಥ ಸಂಪಾದನೆಯ ಕ್ರಮವನೆ ಅನುಸರಿಸಿಒಂದು ಉತ್ತಮ ಪಠ್ಯ ಎಂದು ಗುರುತಿಸಿಕೊಂಡು ಇತರೆ ಕಲಾವಿದರು ಹಾಡುವ ಪಠ್ಯಗಳನ್ನು ಪೂರಕಪಠ್ಯಗಳೆಂದು ಕರೆದು ಸಂಗ್ರಹಕಾರ್ಯ ಮಾಡಿದರು. ಆದರೆ ಜನಪದದಲ್ಲಿ ಒಬ್ಬ ಕಲಾವಿದ ಉತ್ತಮ ಎನ್ನುವಲ್ಲಿ ಅನೇಕ ಸಮಸ್ಯೆಗಳಿವೆ. ಕಲಾವಿದ ಯಾವುದೇ ಕಾವ್ಯವನ್ನು ಹಾಡುವಲ್ಲಿ ಅವನ ವೈಯಕ್ತಿಕ ಮತ್ತು ಪ್ರಾದೇಶಿಕತೆ ಪರಿಣಾಮ ಬಿರುತ್ತ. "ಜನಪದದಲ್ಲಿ ಮೂಲ ಪಠ್ಯ ಎನ್ನುವುದು ಇಲ್ಲ. ಶ್ರೇಷ್ಠ ಎನ್ನುವುದೂ ಇಲ್ಲ. ಎಲ್ಲ ಪಠ್ಯಗಳು ಶ್ರೇಷ್ಠವೇ ಆಗಿದೆ. ಇಲ್ಲಿ ಪ್ರತಿಪಠ್ಯಗಳು ಏಕೆ ಹುಟ್ಟಿವೆ ಎನ್ನುವ ತಾತ್ವಿಕ ಚರ್ಚೆ ಅಷ್ಟೇ ಮುಖ್ಯ"[೩] ಎಂಬುದಾಗಿ ಪಠ್ಯದ ಸಂಪಾದನೆಯಲ್ಲಿ ಗುರುತಿಸಬಹುದು.

ಎರಡನೇ ಘಟ್ಟದ ಸಂಗ್ರಹಗಳಲ್ಲಿ ಏಕವ್ಯಕ್ತಿ ಪಠ್ಯಗಳು(ಏಕವ್ಯಕ್ತಿ ಹಾಡಿದ್ದು) ನಿಕರ ಎಂದು ಸಂಗ್ರಹಗಳು ನಡೆದಿವೆ. ಈ ಸಂಪಾದನೆಯ ಕ್ರಮದಲ್ಲೂ ಅನೇಕ ತೊಡಕುಗಳಿವೆ. ಅದು ಬರಹ ಮತ್ತು ಮೌಖಿಕ ಎಂಬ ಮೂಲಭೂತ ಸಮಸ್ಯೆಗಳು. ಬರಹ ಯಾವುದಾದರೂ ಒಂದು ಸಂಪಾದನೆಯ ದೃಷ್ಟಿಕೋನವನ್ನು ತಿಳಿಸುತ್ತದೆ. ಆದರೆ ಮೌಖಿಕ ಪರಂಪರೆಗೆ ಅಧಿಕೃತತೆಯ ನೆಲೆಯಿಲ್ಲ. ಅದು ಚಲನಶೀಲವಾಗಿರುತ್ತದೆ. ಒಬ್ಬ ಕಲಾವಿದನಿಂದ ಒಂದು ಕಾವ್ಯವನ್ನು ಹಾಡಿಸಿ ಅವನ ಹೆಸರನ್ನು ದಾಖಲಿಸುತ್ತೇವೆ. ಪರಂಪರೆಯಿಂದ ಪರಂಪರೆಗೆ ವರ್ಗವಾಗಿರುವುದು ಶಿಷ್ಟ ಸಾಹಿತ್ಯದ ಕೃತಿಯಲ್ಲಿ ಒಂದು ಕಾವ್ಯ ಅಥವಾ ಕೃತಿಗೆ ಒಬ್ಬನೇ ಸಂಪಾದಕನಾಗಿದ್ದರೆ ಜನಪದ ಮೌಖಿಕ ಪರಂಪರೆಯಲ್ಲಿ ಏಕ ವ್ಯಕ್ತಿ ಇರುವುದಿಲ್ಲ. ಒಬ್ಬ ವ್ಯಕ್ತಿಗೆ ಸೀಮಿತಗೊಂಡಿರುವುದಿಲ್ಲ.

ಒಂದು ಮೌಖಿಕ ಪಠ್ಯವೊಂದನ್ನು ಓದಿನ ಪಠ್ಯವಾಗಿ ಮಾಡುವುದು ಸಂಪಾದಕನ ಕೆಲಸವಾಗಿರುತ್ತದೆ. ಈ ಮೌಖಿಕ ಪಠ್ಯವನ್ನು ಸಂಪಾದನೆಯನ್ನು ಮಾಡುವುದಕ್ಕೆ ವಿವಿಧ

ದೃಷ್ಟಿಕೋನಗಳು ಕೆಲಸ ಮಾಡಿರುತ್ತವೆ. ಆದರೆ ಇದು ಸ್ವಾತಂತ್ರ್ಯದಿಂದ ಕೂಡಿರುವುದಿಲ್ಲ. ಏಕೆಂದರೆ ಒಬ್ಬ ಕಲಾವಿದ ಹೇಗೆ ತನ್ನ ಹಿರಿಯ ತಲೆಮಾರಿಗೆ ಋಣಿಯಾಗಿರುತ್ತಾನೋ ಹಾಗೆ ಇಲ್ಲಿ ಸಂಪಾದಕ ಕಲಾವಿದನಿಂದ ಸಂಗ್ರಹಣೆ ಮಾಡಿರುವುರಿಂದ ಇವನಿಗೆ ಕೃತಜ್ಞನಾಗಿರುತ್ತಾನೆ. ಆದರೆ ಕಾವ್ಯವನ್ನು ಅದಲುಬದಲು ಮಾಡುವಂತಹ ಕೆಲಸದಲ್ಲಿ ಮುಂದಾಗಬಾರದು. ಈ ಮೊದಲೇ ಹೇಳಿದಂತೆ ಸಂಪಾದಕನು ಮೌಖಿಕ ಪಠ್ಯವನ್ನು ಸಂಪಾದಿಸುವುದು ಒಂದು ದೊಡ್ಡ ಸವಾಲಾಗಿರುತ್ತದೆ. ಕಾವ್ಯದ ಲಯ, ತಾಳ, ಪಲ್ಲವಿಗಳ ಮೇಲೆ ಹೆಚ್ಚಿನ ಗಮನವಿರಬೇಕು ಅಥವಾ ಕೇಳುತ್ತಿರುವಾಗಲೇ ಕಾವ್ಯದ ನೆಲೆಯನ್ನು ತಿಳಿಯಬೇಕು. ಒಂದು ಕಾವ್ಯದ "ಓದಿನ ಪಠ್ಯದಲ್ಲಿ ಭಾಷಿಕವಾಗಿ ಮೂಡಿಸುವ ಸ್ವಾತಂತ್ರ್ಯ ಸಂಪಾದನೆಗೆ ಇಲ್ಲ. ಆದರೂ ಕಾವ್ಯವನ್ನು ವಿಭಾಗೀಕರಿಸುವಲ್ಲಿ ಪಠ್ಯದ ವಿವರಗಳಲ್ಲೇ ಇರುವ ಸಾಲುಗಳನ್ನು ತೆಗೆದು ಕಾವ್ಯಾತ್ಮಕ ಶೀರ್ಷಿಕೆಗಳನ್ನು ಕೊಡುವಲ್ಲಿ ಆ ಪಠ್ಯದ ಕೇಂದ್ರಪ್ರಜ್ಞೆಯನ್ನು ಭಾಷಿಕವಾಗಿ ಮಾಡಬೇಕಾಗುತ್ತದೆ. ಶ್ರವ್ಯದಲ್ಲಿ ಪುನರಾವರ್ತನೆ ನಡೆಯುತ್ತದೆ. ಆದರೆ ಓದಿನಲ್ಲಿ ಇದು ನಡೆಯುವುದಿಲ್ಲ. ಸಂಪಾದಕ ಪುನರಾವರ್ತನೆಯನ್ನು ತೆಗೆಯಬೇಕು. ಗಾತ್ರವನ್ನು ಹಿಗ್ಗಿಸಿ ಮಹಾಕಾವ್ಯವೆಂದು ಕರೆಯುವ ಅಭ್ಯಾಸ ನಮ್ಮಲ್ಲಿ ಇದೆ."[೪] ಈ ರೀತಿಯ ಪರಿವರ್ತನೆಗಳು ಕಾವ್ಯದಲ್ಲಿ ಕಂಡುಬರುತ್ತವೆ. ಕಾವ್ಯವನ್ನು ಹಿಗ್ಗಿಸುವ ಮತ್ತು ಕುಗ್ಗಿಸುವ ಕೌಶಲ್ಯವನ್ನು ಕಲಾವಿದನು ಪಡೆದುಕೊಂಡಿರುತ್ತಾನೆ. ಏಕೆಂದರೆ ಒಬ್ಬ ಕಲಾವಿದ ಒಂದು ಮೌಖಿಕ ಕಾವ್ಯವನ್ನು ಕಲಿಯುವಾಗ ವಿವಿಧ ಭಂಗಿಗಳಿಂದ ಕಲಿತಿರುತ್ತಾನೆ. ಸಮಯಕ್ಕೆ ತಕ್ಕಂತೆ ಕಥೆಯನ್ನು ಮಾರ್ಪಾಟು ಮಾಡುವ ಚಾಣಾಕ್ಷತೆಯನ್ನು ಹೊಂದಿರುತ್ತಾನೆ. ಉದಾಹರಣೆಗೆ ಕಲಾವಿದನೊಬ್ಬ ಮಾದೇಶ್ವರನ ಕಥೆಯನ್ನು ಹೇಳುತ್ತಿದ್ದಾನೆಂದರೆ ಆ ಕಥೆಯನ್ನು ಹಾಡುವಾಗ ಅಥವಾ ಕೇಳುವಾಗ ಘಟನೆಯನ್ನು ನೇರವಾಗಿ ಹೇಳುವುದಿಲ್ಲ. ಅದಕ್ಕೆ ಹಾಡಿನ ಮೂಲಕ ಕಥೆಯನ್ನು ಕಟ್ಟಿ ಹಾಡುತ್ತಾನೆ. ಎಲ್ಲ ಕತೆಗೂ ಬಳಸಬಹುದಾದ ಕೆಲವು ಸಿದ್ಧವರ್ಣನೆಗಳು ಇರುತ್ತವೆ. ಒಂದು ಕತೆಯನ್ನು ಹಿಗ್ಗಿಸಬೇಕೆಂದಾಗ ಕೆಲವು ತಂತ್ರಗಳನ್ನು ಬಳಸುತ್ತಾನೆ. ಈ ರೀತಿಯ ಕಾವ್ಯವನ್ನು ಓದಿನ ಪಠ್ಯವನ್ನಾಗಿ ರೂಪಿಸುವ ಸಂಪಾದಕನಿಗೆ ತಾನು ಸಂಪಾದಿಸುತ್ತಿರುವ ಈ ಪಠ್ಯಕ್ಕೆ ಕೆಲವು ವರ್ಣನೆಗಳು ಅವಶ್ಯಕವೋ ಅಥವಾ ಬೇಡವೋ ಎಂಬುದು ತಿಳಿದಿರಬೇಕು. ಆದ್ದರಿಂದ ಕಲಾವಿದರು ಹಾಡುವಂತಹ ಹಲವು ಪಠ್ಯಗಳ ಪರಿಚಯವು ಸಂಪಾದಕನಿಗೆ ಇರಬೇಕು.

ಯಾವುದೇ ಜನಪದ ಮಹಾಕಾವ್ಯಗಳನ್ನು ಸಂಪಾದಕನು ಚರಿತ್ರೆಯ ಮಾದರಿಯಲ್ಲೇ ಸಂಪಾದನೆ ಮಾಡಬೇಕು. ಆಗ ಮಾತ್ರ ಹಂತಹಂತವಾಗಿ ಕಾವ್ಯದ ಪರಿಧಿಯು ಅರ್ಥವಾಗುವುದು. ವಾಸ್ತವದಲ್ಲಿ ಒಂದು ಕಾವ್ಯ ಸಂಪಾದನೆ ಕಾರ್ಯಕ್ಕೆ ಒಳಪಟ್ಟಿದೆ ಎಂದರೆ ಆ ಕಾವ್ಯದ ನಾಯಕ ಹಿಂದಿನ ಯಾವುದೋ ಒಂದು ಕಾಲದಲ್ಲಿ ಅವನ್ನು ಗುರುತಿಸಲಾಗುತ್ತದೆ ಉದಾಹರಣೆಗೆ

ಮಂಟೇಸ್ವಾಮಿಯ ವಚನ ಸಾಹಿತ್ಯ ಗುರುತಿಸುವಂತದ್ದು. ಅಲ್ಲಮ ಪ್ರಭುವಿನ ಅವತಾರ ಎಂಬುದಾಗಿ ಹೇಳುವಂತಹ ಆಚರಣೆಗಳು ಕಾವ್ಯದಲ್ಲಿ ಇರುತ್ತದೆ. ಆದ್ದರಿಂದ ಕೆಲವು ದಾಖಲೆಗಳು ಕೆಲವು ಸಂಪ್ರದಾಯಗಳು ಹುಟ್ಟಿಕೊಂಡಿರುತ್ತವೆ. ಉದಾಹರಣೆಗೆ ಮಾದಪ್ಪನ ವ್ಯಕ್ತಿತ್ವ ಒಂದು ಸಮುದಾಯದಲ್ಲಿ ವಿಕಾಸಗೊಂಡಂತೆ, ಮಾದಪ್ಪ ಬದುಕಿದ್ದಾಗ ಕಟ್ಟಿಕೊಂಡ ಶಿಷ್ಯರು ಅಥವಾ ಗುಡ್ಡರ ಸಮುದಾಯದ ಪ್ರತೀಕವಾಗಿ ತಮ್ಮ ಸಂಸ್ಕೃತಿಯನ್ನು ಮುನ್ನಡೆಸಿಕೊಂಡು ಹೋಗುವುದು. ಶಿಶುಮಕ್ಕಳೆಂದು ಶಿಷ್ಯರನ್ನಾಗಿ ಮಾಡಿಕೊಳ್ಳುವ ಮೂಲಕ ತನ್ನ ಪಡೆಯನ್ನು ಕಟ್ಟಿಕೊಳ್ಳುವುದು. ಇದು ಮುಂದುವರೆಯುತ್ತಾ ಸಂಸ್ಕೃತಿಯು ರವಾನೆಯಾಗುತ್ತದೆ. ಇದರಿಂದ ಸಂಪಾದಕನಿಗೆ ಚರಿತ್ರೆಯ ಕೆಲವು ಅಂಶಗಳು ಮತ್ತು ಸಾಂಪ್ರದಾಯಿಕ ಕೆಲವು ಆಚರಣೆಗಳನ್ನು ತಿಳಿಯುವುದರ ಮೂಲಕ ಕಾವ್ಯದ ಸಂಪಾದನೆಗೆ ನೆರವಾಗುತ್ತದೆ. ಈ ದೃಷ್ಟಿಯಿಂದ ವಿದ್ವಾಂಸರು ಸಂಪಾದನೆಗೆ ತೊಡಗಿದರು.

ನವೋದಯ ಕಾಲಘಟ್ಟದಲ್ಲಿ ಶಿಷ್ಟಸಾಹಿತ್ಯದ ವಿದ್ವಾಂಸರು ಪ್ರಕೃತಿಯ ಆರಾಧಕರಾದರು. ನೆಲ, ಜಲದಂತೆ ಹೆಣ್ಣನ್ನು ಕೂಡ ದೇವತೆಯ ಸ್ಥಾನಕ್ಕೆ ಹೋಲಿಕೆಯಾದಳು. ಬೇರೆ ಎಲ್ಲ ಸಾಹಿತ್ಯ ಪ್ರಕಾರಗಳಿಗಿಂತ ಕನ್ನಡ ಸಾಹಿತ್ಯವು ಭಾರತೀಯ ಮಟ್ಟದಲ್ಲಿ ಬೆಳೆಯಿತು. ಆದರೆ ಸಾಹಿತ್ಯದಲ್ಲಿ ಶೀಲ ಮತ್ತು ಅಶ್ಲೀಲಗಳ ಪ್ರಶ್ನೆಗಳು ಒಂದಾಗಿ ವಿದ್ವಾಂಸರು ಮರೆಮಾಚುವ ಕೆಲಸವನ್ನು ಮಾಡಿದರು. ಶಿಷ್ಟ ಸಾಹಿತ್ಯದಲ್ಲಿ ಒಂದು ಸಾಹಿತ್ಯದ ಪರಿಭಾಷೆ ರೂಪಿತವಾಗಿತ್ತು. ಆ ಭಾಷೆಯ ನೆಲೆಯಲ್ಲಿಯೇ ಸಾಹಿತ್ಯಗಳೂ ರಚನೆಯಾಗಬೇಕು ಎಂಬ ನಮ್ಮ ಶಿಷ್ಟಸಾಹಿತ್ಯದ ನಿಲುವನ್ನು ಆಧುನಿಕ ಸಂಪಾದನೆಯ ಆಲೋಚನೆಗಳು ಒಡೆದು ಹಾಕಿದವು. ಜನಪದ ಸಾಹಿತ್ಯವು ಮೌಖಿಕ ಅಭಿವ್ಯಕ್ತಿಯಾಗಿರುವುದರಿಂದ ಅವರ ಬಾಯಿಯಿಂದ ಬಂದ ಮಾತುಗಳು ಕೂಡ ಕಾವ್ಯದ ಬೆಳವಣಿಗೆಗೆ ಸ್ಫೂರ್ತಿ ಎಂಬುದನ್ನು ಹೊಸ ಸಂಪಾದನೆಯ ದೃಷ್ಟಿಕೋನಗಳ ಅರಿವನ್ನು ಮೂಡಿಸಿದವು. ಇದರ ಜೊತೆಯಲ್ಲಿ ದೇಸಿಯ ಸಂಸ್ಕೃತಿಯನ್ನು ಇಟ್ಟುಕೊಂಡು ಬೇರೊಂದು ಸಂಸ್ಕೃತಿಯೊಡನೆ ಸಮೀಕರಿಸುವ ಕಾರ್ಯ ನಡೆಯಿತು. ಇದರಿಂದ ಬೇರೆ ಸಾಹಿತ್ಯಕ್ಕೆ ಒಲಿಸಿಕೊಂಡತೆ ಜನಪದ ಎಲ್ಲ ರೀತಿಯಲ್ಲೂ ಸರಿ ಹೊಂದುತ್ತದೆ ಎಂದು ಇದರ ವಿಭಿನ್ನ ನೆಲೆಯನ್ನು ಅಧ್ಯಯನ ಮಾಡಲು ಆಸಕ್ತಿಯನ್ನು ತೋರಲಾಯಿತು.

ನಮ್ಮ ಮೌಖಿಕ ಪರಂಪರೆಯ ದೃಷ್ಟಿಯಿಂದ ಸಮಕಾಲೀನ ಸಂದರ್ಭ ಒಂದು ಬದಲಾವಣೆಯ ಕಾಲಘಟ್ಟ. ಮೌಖಿಕ ಪರಂಪರೆಯನ್ನು ತಲೆಮಾರಿನಿಂದ ತಲೆಮಾರಿಗೆ ಉಳಿಸಿಕೊಂಡು ಬಂದಿರುವ ಜನಪದ ಕಲಾವಿದರು ತಮ್ಮ ವೈಯಕ್ತಿಕ ಮತ್ತು ಜೀವನದ ಬೇಡಿಕೆ ಈಡೇರಿಸಿಕೊಳ್ಳಲು ತಮ್ಮ ಬದುಕಿನ ಶೈಲಿಯನ್ನು ಆಧುನಿಕತೆಯ ಪರಿಣಾಮದಿಂದ ಬದಲಾಯಿಸುತ್ತಿದ್ದಾರೆ. ಜನಪದ ಕಲೆ, ನಂಬಿಕೆ, ಆಚರಣೆಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳು

ವಂತಹ ಕಾಲ ಹತ್ತಿರ ಬರುತ್ತಿರುವುದನ್ನು ಗಮನಿಸಬಹುದು. ಆದರೆ ತನ್ನಲ್ಲಿ ಉಳಿಸಿಕೊಳ್ಳಲು ಪ್ರಯತ್ನಪಟ್ಟರೂ ತನ್ನೊಳಗೆ ಒಂದು ರೀತಿಯ ಮರು ಉತ್ಪಾದನೆಯ ನೆಲೆಯನ್ನು ಕಂಡುಕೊಳ್ಳುವ ಸ್ಥಿತಿ ಬಂದಿರುವುದನ್ನು ತಿಳಿಯಬಹುದಾಗಿದೆ.

ಹೊಸ ಕಾಲದ ಸಂಪಾದನೆಯಲ್ಲಿ ವಿದ್ವಾಂಸರ ಕೆಲವು ದೃಷ್ಟಿಕೋನಗಳು ಕೆಲಸ ಮಾಡಿವೆ. ಅಂದರೆ ಪ್ರತಿ ಪಠ್ಯಗಳೂ ಶ್ರೇಷ್ಠ ಮತ್ತೊಂದು ಶ್ರೇಷ್ಠವಲ್ಲ ಎನ್ನುವ ತಿಳುವಳಿಕೆಯನ್ನು ದೂರ ಮಾಡಿ ಏಕರೂಪದ ಪಠ್ಯ ಸಂಗ್ರಹಣೆಯು ನಡೆಯುತ್ತಿಲ್ಲ. ಉದಾಹರಣೆಗೆ ಮಲೆಮಾದೇಶ್ವರ ಕಾವ್ಯ ಮತ್ತು ಮಂಟೇಸ್ವಾಮಿ ಕಾವ್ಯವನ್ನು ಒಬ್ಬೊಬ್ಬ ಕಲಾವಿದ ಒಂದೊಂದು ರೀತಿಯ ಧಾಟಿಯಲ್ಲಿ ಹಾಡುತ್ತಾರೆ. ಆದರೆ ಇದರಲ್ಲಿ ಯಾವುದು ಮೂಲಪಠ್ಯ, ಯಾವುದು ಸರಿ, ಯಾವುದು ತಪ್ಪು ಎನ್ನುವ ತೀರ್ಮಾನವನ್ನು ನೀಡುವಂತಿಲ್ಲ. ಏಕೆಂದರೆ ಎಲ್ಲಾ ಪಠ್ಯಗಳು ಅಥವಾ ಕಾವ್ಯಗಳು ಶ್ರೇಷ್ಠವಾಗಿರುತ್ತವೆ. ಜನಪದವನ್ನು ಮತ್ತು ಸಂಸ್ಕೃತಿಯನ್ನು ಅಧ್ಯಯನ ಮಾಡಬೇಕಾದರೆ ನಾವು ಯಾವುದೇ ಒಂದು ಎಳೆಯನ್ನು ಇಟ್ಟುಕೊಂಡು ಅಧ್ಯಯನವನ್ನೂ ಮಾಡಲು ಸಾಧ್ಯವಿಲ್ಲ. ಆಯಾಯ ಸಮುದಾಯ ಸಂಸ್ಕೃತಿಗೆ ತಕ್ಕಂತೆ ವಿಸ್ತಾರವಾಗಿರುತ್ತವೆ. ಕೆಲವು ಸಮಯದಲ್ಲಿ ಸಂಪಾದಕರ ವೈಯಕ್ತಿಕತೆ ಮತ್ತು ಪ್ರಾದೇಶಿಕ ನೆಲೆಗಳು ಕೆಲಸ ಮಾಡುತ್ತದೆ. ಸಂಗ್ರಹಕಾರನೊಬ್ಬ ತನಗೆ ತಿಳಿದಿರುವ ಪ್ರದೇಶದಲ್ಲಿ ಮಾತ್ರ ಸಂಪಾದನೆಯನ್ನು ಮಾಡುತ್ತಾನೆ. ಒಂದು ವೇಳೆ ಆ ಪ್ರದೇಶದ ಮೇಲೆ ಮಾಹಿತಿಯನ್ನು ಪಡೆದು ಸಂಪಾದನೆಯ ಕಾರ್ಯದಲ್ಲಿ ತೊಡಗುವಂತಹ ಪರಿಸ್ಥಿತಿಗಳು ಹೆಚ್ಚಾಗಿರುತ್ತವೆ. ಆದೇ ಪ್ರದೇಶದಲ್ಲಿ ಹತ್ತಿರವಾದ ಪರಿಚಯವಿದ್ದರೆ ಸಂಪಾದನೆಗೆ ಹೆಚ್ಚು ಉಪಯುಕ್ತವಾಗುತ್ತದೆ. ಆ ವಲಯದಲ್ಲಿ ಹೆಚ್ಚಿನ ಆಸಕ್ತಿಯು ಮೂಡಿ ಸಂಪಾದನೆಯ ಕಾರ್ಯ ಯಶಸ್ವಿಯಾಗುತ್ತದೆ.

ಹೀಗೆ ಜನಪದ ಸಂಗ್ರಹಣೆಯಲ್ಲಿ ತೊಡಗುವಂತಹ ಸಂಪಾದಕರ ವಿಭಿನ್ನ ಆಲೋಚನೆಯ ಮೂಲಸಂಗ್ರಹಣೆಯಲ್ಲಿ ತೊಡಗುತ್ತದೆ. ಇದರಲ್ಲಿ ಕೆಲವು ದೃಷ್ಟಿಕೋನಗಳು ಒಳಪಟ್ಟಿರುತ್ತವೆ.

ಕೊನೆ ಟಿಪ್ಪಣಿ

೧. ಗೋಣಿ ಬಸಪ್ಪನ ಕಾವ್ಯ, ಪು.೩೩

೨. ಅದೇ, ಪು.೪೧

೩. ಅದೇ, ಪು.೪೨

೪. ಅದೇ, ಪು.೪೩

ಅಧ್ಯಾಯ ಎಂಟು

ಸಮಾರೋಪ

ಅಧ್ಯಾಯ ಎಂಟು

ಸಮಾರೋಪ

ಜನಪದ ಕಾವ್ಯಗಳ ಸಂಪಾದನೆಯ ಕಾರ್ಯವು ನವೋದಯ ಸಾಹಿತ್ಯ ಕಾಲದಿಂದ ಪ್ರಾರಂಭವಾಯಿತು. ಅಲ್ಲಿಂದ ಇಲ್ಲಿಯವರೆಗೆ ನೂರಾರೂ ಜನಪದ ವಿದ್ವಾಂಸರು ಸಂಪಾದನೆಯ ಕಾರ್ಯವನ್ನು ಕೈಗೊಂಡು ಅನೇಕ ಜನಪದ ಕಾವ್ಯಗಳನ್ನು ಸಂಗ್ರಹಣೆ ಮಾಡಿ ಅವುಗಳನ್ನು ಲೋಕಾರ್ಪಣೆ ಮಾಡಿದ್ದಾರೆ. ಈ ಅವಧಿಯಲ್ಲಿ ನಾನಾ ಜಾನಪದ ಸಾಹಿತ್ಯ ಪ್ರಕಾರಗಳಾದ ಕಥೆ, ಗಾದೆ, ಒಗಟು, ಜನಪದಗೀತೆ, ಕಥನ ಗೀತೆ, ಜನಪದ ಕಾವ್ಯಗಳನ್ನು ಗುರುತಿಸಿ ಅವುಗಳನ್ನು ವಿಭಾಗಗಳನ್ನಾಗಿ ಮಾಡಿ ಬಿಡಿ ಬಿಡಿಯಾಗಿ ಅಧ್ಯಯನ ಮಾಡುತ್ತಾ ಬಂದಿದ್ದಾರೆ. ಈ ಅವಧಿಯಲ್ಲಿ ಕನ್ನಡ ಸಾಹಿತ್ಯದಲ್ಲಿ ಜನಪದವನ್ನು ಮುಖ್ಯ ಪ್ರಕಾರವಾಗಿ ಪರಿಭಾವಿಸಲಾಗಿದೆ.

ನವೋದಯ ಸಾಹಿತ್ಯ ತನ್ನ ಅಸ್ತಿತ್ವವನ್ನು ಗುರುತಿಸಿಕೊಂಡು ಹೊಸ ಕಾವ್ಯ ಪ್ರಕಾರವಾಗಿ ಬೆಳೆಯುತ್ತಾ ಸಾಗಿದೆ. ಇದರ ಜೊತೆಯಲ್ಲಿ ಜಾನಪದ ಸಾಹಿತ್ಯವು ತನ್ನ ಅಧ್ಯಯನದ ನೆಲೆಯನ್ನು ಗುರುತಿಸಿಕೊಂಡಿದ್ದು, ನವೋದಯ ಸಾಹಿತ್ಯ ಪ್ರಕಾರವು ತನ್ನ ಅಭಿವ್ಯಕ್ತಿಯನ್ನು ವ್ಯಕ್ತಪಡಿಸಿ ನೆಲೆ ಕಂಡುಕೊಳ್ಳುವ ಸಂದರ್ಭದಲ್ಲಿ ಜಾನಪದ ಸಾಹಿತ್ಯವನ್ನು ಕುರಿತು ಸಂಪಾದನಾ ಕಾರ್ಯವು ಪ್ರಾರಂಭವಾಯಿತು. ಈ ಅವಧಿಯಲ್ಲಿ ಬಿ.ಎಂ.ಶ್ರೀಕಂಠಯ್ಯ ಅವರು ಮೊದಲ ಬಾರಿಗೆ 'ಗರತಿಯ ಹಾಡು' ಕೃತಿಗೆ ಮುನ್ನುಡಿಯನ್ನು ಬರೆಯುವ ಮೂಲಕ ಜನಪದ ಸಂಸ್ಕೃತಿಯನ್ನು ಪರಿಚಯಿಸಿದರು. ಆ ಮುನ್ನುಡಿಯಲ್ಲಿ ಬಿ.ಎಂ.ಶ್ರೀಕಂಠಯ್ಯ ಅವರು ಹಲಸಂಗಿ ಗೆಳೆಯರ ಸಂಪಾದನೆಯಲ್ಲಿ ಅನುಸರಿಸಿದ ವಿಧಾನದ ಜೊತೆಗೆ ಜಾನಪದ ಸಾಹಿತ್ಯ ಅಧ್ಯಯನ ಅಥವಾ ಸಂಪದನಾ ಕಾರ್ಯದ ಪ್ರಾಮುಖ್ಯತೆಯನ್ನು ಗುರುತಿಸದರು. ಈ ಮುನ್ನುಡಿ ಜಾನಪದ ಸಾಹಿತ್ಯ ಸಂಪಾದನೆಯಲ್ಲಿ ಹೊಸ ರೀತಿಯ ದಾರಿಯನ್ನು ತೋರಿಸಿತು.

ನಂತರ ಕರ್ನಾಟಕದಾದ್ಯಂತ ವಿದ್ವಾಂಸರು ಜಾನಪದ ಸಾಹಿತ್ಯದ ಕುರಿತು ಅಪಾರವಾದ ಆಸಕ್ತಿಯಿಂದ ಸಂಪಾದನೆಯ ಕಾರ್ಯದಲ್ಲಿ ತೊಡಗಿದರು. ಈ ನಿಟ್ಟಿನಲ್ಲಿ ಜನಪದವೂ ಕನ್ನಡ

ಸಾಹಿತ್ಯದ ಒಂದು ಭಾಗ ಎಂಬುದಾಗಿ ತಿಳಿಯುವಂತಾಯಿತು. ಇದರಿಂದ ಹಲಸಂಗಿ ಗೆಳೆಯರು, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಮತಿಘಟ್ಟ ಕೃಷ್ಣಮೂರ್ತಿ, ಅರ್ಚಕ ರಂಗಸ್ವಾಮಿ, ಕ.ರಾ.ಕೃಷ್ಣಸ್ವಾಮಿ, ಕಾಪಸೆ ರೇವಪ್ಪ ಇನ್ನು ಮುಂತಾದ ವಿದ್ವಾಂಸರು ಜನಪದ ಕಾವ್ಯಗಳ ಸಂಪಾದನೆಯಲ್ಲಿ ತೊಡಗಿ ಅನೇಕ ಕಾವ್ಯಗಳನ್ನು ಸಂಗ್ರಹಿಸಿದರು. ಇಲ್ಲಿಂದ ಜಾನಪದ ಸಾಹಿತ್ಯವು ಕನ್ನಡ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರವಾಗಿ ಗುರುತಿಸಲ್ಪಟ್ಟಿತು.

ಮಾನವರು ಹುಟ್ಟಿನಿಂದ ಜನಪದವನ್ನು ತನ್ನ ಜೊತೆಯಲ್ಲಿ ಇಂದಿನವರೆಗೂ ಬೆಳೆಸಿಕೊಂಡು ಬಂದಿದ್ದಾರೆ. ಅಂದರೆ ಜನಪದವು ಮನುಷ್ಯ ಜೀವನದ ಒಂದು ಭಾಗವಾಗಿದೆ. ಮೊದಲ ಬಾರಿಗೆ ಜನಪದವು ಕಾವ್ಯ ಪ್ರಕಾರದಲ್ಲಿ ಆರಂಭವಾಗಿ ನಂತರ ವಿವಿಧ ಪ್ರಕಾರವಾಗಿ ವಿಸ್ತಾರ ಪಡೆದುಕೊಂಡಿದೆ. ಈ ಎಲ್ಲಾ ಪ್ರಕಾರಗಳನ್ನು ಕುರಿತು ವಿದ್ವಾಂಸರು ಸಂಪಾದನೆ ಅಥವಾ ಅಧ್ಯಯನ ಮಾಡಲು ಪ್ರಾರಂಭಿಸಿದರು. ಮೊದಲ ಘಟ್ಟದ ಸಂಪಾದನೆಯ ಕಾರ್ಯದಲ್ಲಿ ಜನಪದ ಗೀತೆಗಳು, ಜನಪದ ಕಥನ ಗೀತೆಗಳು, ಮೌಖಿಕ ಜಾನಪದ ಅಭಿವ್ಯಕ್ತಿಯನ್ನು ಸಂಗ್ರಹ ಮಾಡ ತೊಡಗಿದರು. ಇದರಲ್ಲಿ ಪ್ರಮುಖವಾಗಿ ಗುರುತಿಸಬಹುದಾದಂತಹ ವ್ಯಕ್ತಿಗಳೆಂದರೆ ಹಲಸಂಗಿ ಗೆಳೆಯರು, ನಂತರ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಜನಪದ ಸಂಪಾದನೆಯ ಕಾರ್ಯದಲ್ಲಿ ತೊಡಗಿ ಸಂಗ್ರಹಣೆ ಕಾರ್ಯವನ್ನು ಮೊದಲ ಘಟ್ಟದಲ್ಲಿ ಯಶಸ್ವಿಯಾಗಿ ನಡೆಸಿದ್ದಾರೆ.

ನವೋದಯ ಕಾಲಘಟ್ಟದಲ್ಲಿ ನಡೆದ ಜನಪದ ಸಂಗ್ರಹಣೆಯ ಕಾರ್ಯ ಕೇವಲ ಜನಪದದ ಮೌಖಿಕ ಅಭಿವ್ಯಕ್ತಿಯ ಕ್ರಮಕ್ಕೆ ಮಾತ್ರ ಸೀಮಿತವಾಗಿತ್ತು. ಆದರೆ ಎರಡನೆಯ ಘಟ್ಟದ ಸಂಪಾದನೆಯ ಕಾರ್ಯದಲ್ಲಿ ಜನಪದ ಕೇವಲ ಮೌಖಿಕ ಅಭಿವ್ಯಕ್ತಿಯಲ್ಲ. ಜನಪದದ ಜೀವನ, ಅದರ ಆಚರಣೆ, ಕಲೆ ಅವರ ಆಹಾರ ಮತ್ತು ಸಂಸ್ಕೃತಿಯ ಜೀವನ ಜನಪದ ಎಂಬುದಾಗಿ ತಿಳಿದ ವಿದ್ವಾಂಸರು ಜನಪದವನ್ನು ವಿಭಾಗವಾಗಿ ಮಾಡಿಕೊಂಡು ಸಂಗ್ರಹಣೆಯ ಕಾರ್ಯದಲ್ಲಿ ತೊಡಗಿದರು. ಇದರಲ್ಲಿ ಜೀ.ಶಂ.ಪರಮಶಿವಯ್ಯ, ಬಿ.ಎಸ್.ಗದ್ದಗಿಮಠ, ದೇ.ಜವರೇಗೌಡ, ಎಚ್.ಎಲ್.ನಾಗೇಗೌಡ, ಸಿ.ಪಿ.ಕೃಷ್ಣಕುಮಾರ, ಸಿಂಪಿಲಿಮಗಣ್ಣ, ಪುರುಷೋತ್ತಮ ಬಿಳಿಮಲೆ ಜನಪದ ವಿವಿಧ ಪ್ರಕಾರವಾದ ಕಥೆ, ಗೀತೆ, ಒಗಟು, ಗಾದೆ, ಅಧ್ಯಯನದಲ್ಲಿ ತೊಡಗಿ ಸಂಗ್ರಹಿಸಿದ್ದಾರೆ. ಇದೇ ಸಂದರ್ಭದಲ್ಲಿ ವಿಶ್ವವಿದ್ಯಾಲಯಗಳು ಮತ್ತು ಜಾನಪದ ಅಕಾಡೆಮಿಗಳು ಜಾನಪದ ಅಧ್ಯಯನಕ್ಕೆ ಮುಂದಾದವು. ಇಂತಹ ವಿಶ್ವವಿದ್ಯಲಯಗಳಲ್ಲಿ ಪ್ರಮುಖ ವಾದವುಗಳು ಧಾರವಾಡ ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾನಿಲಯ, ಜಾನಪದ ಅಕಾಡೆಮಿಗಳು ಸಂಗ್ರಹಣೆಯ ಕಾರ್ಯದಲ್ಲಿ ತೊಡಗಿದವು. ಇದಕ್ಕೆ ಸರ್ಕಾರವೂ ಕೂಡ

ನೆರವು ನೀಡಲು ಪ್ರಾರಂಭಿಸಿತು. ಸರ್ಕಾರವು ಅನುದಾನಗಳನ್ನು ಬಿಡುಗಡೆ ಮಾಡುವುದರ ಮೂಲಕ ಜಾನಪದ ಸಂಪಾದನೆಯ ಕಾರ್ಯಕ್ಕೆ ಹೆಚ್ಚು ಅನುಕೂಲವನ್ನು ಮಾಡಿಕೊಟ್ಟಿದೆ. ಇದು ಜಾನಪದ ಸಂಗ್ರಹಣೆಗೆ ಪ್ರೇರಣೆಯಾಗಿವೆ.

ಎಪ್ಪತ್ತು ಎಂಬತ್ತರ ದಶಕದಲ್ಲಿ ಜಾನಪದ ಅಧ್ಯಯನ ನೆಲೆಯೇ ಬದಲಾದ ಕಾಲಘಟ್ಟ ಎಂದು ಹೇಳಬಹುದು. ಈ ಅವಧಿಯಲ್ಲಿ ಹೊಸ ಒಲವಿನತ್ತ ವಿದ್ವಾಂಸರು ಮುಂದಾದರು. ಇವರು ಸಮುದಾಯದ ಬಗೆಗೆ ಹೆಚ್ಚಿನ ಒಲವನ್ನು ಗುರುತಿಸುವುದರ ಮೂಲಕ ವ್ಯಕ್ತಿಗಾಯಕರನ್ನು ಇಟ್ಟುಕೊಂಡು ಸಂಗ್ರಹಣೆಯನ್ನು ಮಾಡಲು ಆರಂಭಿಸಿದರು. ಸಂಶೋಧನೆಗೆ ಜನಪದರ ಎಲ್ಲ ಸಂಪ್ರದಾಯಗಳು ಆಕರಗಳಾಗುತ್ತವೆ ಎಂಬುದನ್ನು ಅರಿತರು. ಇದರಿಂದ ಅನೇಕ ಜನಪದ ಮಹಾಕಾವ್ಯಗಳು ಸಂಗ್ರಹಣೆಯಾದವು. ಇದರ ನಂತರ ಸಂಗ್ರಹಣೆಯಾದ ಜನಪದಕಾವ್ಯ ಪಠ್ಯಗಳು ವಿವಿಧ ದೃಷ್ಟಿಕೋನಗಳಿಗೆ ಒಳಪಟ್ಟಿವೆ. ಇದರಿಂದ ಜನಪದ ಪಠ್ಯಗಳು ಪರಿಷ್ಕರಣೆಗೊಳಲು ಪ್ರಾರಂಭವಾಗಿವೆ.

ಹೊಸತಲೆಮಾರಿನ ಜಾನಪದ ಸಾಹಿತ್ಯವನ್ನು ಸಂಗ್ರಹಣೆ ಮಾಡುವ ವಿದ್ವಾಂಸರು ಒಂದು ಕಾವ್ಯವನ್ನು ಅನ್ಯಶಿಸ್ತುಗಳಿಗೆ ಒಳಪಡಿಸಿ ಅದರ ಭಿನ್ನ ಸ್ವರೂಪವನ್ನು ಅಧ್ಯಯನ ಮಾಡುವಲ್ಲಿ ಆಸಕ್ತಿ ತೋರಿದರು. ಒಂದೇ ಪಠ್ಯ ಶ್ರೇಷ್ಠವಲ್ಲ ಎಂಬ ವಿಚಾರವನ್ನು ಹೊಸ ತಲೆಮಾರಿನ ವಿದ್ವಾಂಸರು ಪರಿಚಯಿಸಿದ್ದಾರೆ. ಇಂಥವರಲ್ಲಿ ಜೀ.ಶಂ.ಪರಮಶಿವಯ್ಯ ಅವರು. ನಂತರ ಬಂದಂತಹ ಪಿ.ಕೆ.ರಾಜಶೇಖರ್ ಇವರು ಮಾದೇಶ್ವರ ಕಾವ್ಯವನ್ನು ಸಂಗ್ರಹಿಸಿದರು. ನಂತರ ಇದೇ ಕಾವ್ಯವನ್ನು ಡಾ.ಕೇಶವನ್ ಪ್ರಸಾದ್, ಡಾ.ವೆಂಕಟೇಶ ಇಂದ್ವಾಡಿ, ಡಾ.ಹಿ.ಚಿ.ಬೋರಲಿಂಗಯ್ಯ ಅವರುಗಳು ಒಂದು ಕಾವ್ಯದ ಭಿನ್ನ ಭಿನ್ನ ನೆಲೆಯ ಸಂಪಾದನೆಯ ಮಹತ್ವವನ್ನು ತಾವು ಸಂಪಾದಿಸಿದ ಕಾವ್ಯಕ್ಕೆ ವಿಸ್ತಾರವಾದ ಪ್ರಸ್ತಾವನೆಯನ್ನು ಬರೆಯುವ ಮೂಲಕ ಅದರ ಮಹತ್ವವನ್ನು ಪರಿಚಯಿಸಿದ್ದಾರೆ.

ಯಾವುದೇ ಜನಪದ ಸಂಪಾದನಾ ಕಾರ್ಯದಲ್ಲಿ ಪಠ್ಯ ಮತ್ತು ಸಂಪಾದಕರ ನಡುವೆ ಒಂದು ಅಂತರ್ ಸಂಬಂಧ ಒಳಗೊಂಡಿದೆ. ಒಂದು ಪಠ್ಯದ ಸಂಪಾದನೆಯಲ್ಲಿ ಸಂಪಾದಕರ ವೈಯಕ್ತಿಕತೆ ಮತ್ತು ಪ್ರಾದೇಶಿಕತೆಯು ಮುಖ್ಯವಾಗಿರುತ್ತದೆ. ಈ ರೀತಿಯ ಪಠ್ಯ ಸಂಪಾದನೆಯನ್ನು ದಕ್ಷಿಣ ಕರ್ನಾಟಕದ ಭಾಗದಲ್ಲಿ ವಿಶಿಷ್ಟತೆ ಹೆಚ್ಚಾಗಿ ಗುರುತಿಸಬಹುದು. ಈ ಭಾಗದಲ್ಲಿ ಒಬ್ಬ ಕಲಾವಿದ ಹಾಡಿದ ಪಠ್ಯವನ್ನು ಇಟ್ಟುಕೊಂಡು ಉತ್ತಮ ಪಠ್ಯ ಎಂದು ಗುರುತಿಸುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಇಲ್ಲಿ ನೂರಾರು ಕಲಾವಿದರು ಇಂತಹ ಪಠ್ಯಗಳನ್ನು ಬೇರೆ ಬೇರೆ

ನೆಲೆಯಲ್ಲಿ ಹಾಡುವುದರಿಂದ ಎಲ್ಲಾ ಪಠ್ಯಗಳು ಮುಖ್ಯವಾಗುತ್ತದೆ. ಇದನ್ನು ಸಂಪಾದಕರ ಆಲೋಚನೆ ಮತ್ತು ಅವರ ದೃಷ್ಟಿಕೋನಗಳು ಗಮನಿಸಿವೆ. ಇದೇ ರೀತಿಯಲ್ಲಿ ಉತ್ತರ ಕರ್ನಾಟಕದಲ್ಲಿ ಮೈಲಾರಲಿಂಗನ ಕಾವ್ಯ, ಜುಂಜಪ್ಪನ ಕಾವ್ಯಗಳು ಪ್ರಮುಖವಾಗಿ ಸಂಪಾದನೆಯಾದವು.

ಒಟ್ಟಾರೆಯಾಗಿ ಜನಪದ ಕಾವ್ಯಗಳ ಸಂಪಾದನೆಯ ಹಿಂದಿನ ತಾತ್ವಿಕತೆಯಲ್ಲಿ ನವೋದಯ ಕಾಲಘಟ್ಟದಿಂದ ಹಿಡಿದು ಪ್ರಸ್ತುತ ಕಾಲದವರೆಗೆ ಸಂಪಾದನೆಯಾಗಿರುವ ಜನಪದ ಕಾವ್ಯಗಳು ಸಂಪಾದಕರ ವಿವಿಧ ಜ್ಞಾನಶಿಸ್ತಿಗೆ ಮತ್ತು ದೃಷ್ಟಿಕೋನಗಳಿಂದ ಹೊರಬಂದ ಸಂಗ್ರಹಗಳಾಗಿವೆ. ಸಂಪಾದನೆಯ ಕಾರ್ಯಕ್ಕೆ ೨೦೨೦ರ ವೇಳೆಗೆ ಒಂದು ಶತಮಾನವನ್ನು ಜನಪದ ಸಂಗ್ರಹಣೆ ಕಾರ್ಯ ಪೂರೈಸುತ್ತದೆ.

ಗ್ರಂಥಋಣ

೧. ಕರೀಂ ಖಾನ್ ಎಸ್.ಕೆ., ೧೯೯೪, **ಕನ್ನಡ ಜನಪದ ಗೀತೆಗಳು,** ರೂಪಾ ಮುದ್ರಣಾಲಯ, ಬೆಂಗಳೂರು

೨. ಕ.ರಾ.ಕೃ., **ಹೆಣ್ಣು ಕೊಟ್ಟೇವು,** ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು

೩. ಕಾಪಸೆ ರೇವಪ್ಪ, ೧೯೯೦, **ಮಲ್ಲಿಗೆ ದಂಡೆ,** ಸಮಾಜ ಪುಸ್ತಕಾಲಯ, ಧಾರವಾಡ

೪. ಕ್ಯಾತನಹಳ್ಳಿ ರಾಮಣ್ಣ, ೧೯೯೧, **ಫ್ಲೀಟರು ಸಂಗ್ರಹಿಸಿದ ಲಾವಣಿಗಳು,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು

೫. ಕೃಷ್ಣಮೂರ್ತಿ ಮತಿಘಟ್ಟ, **ಹೊನ್ನ ಹೊತ್ತಿಗೆ,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೬. ಕೇಶವನ್ ಪ್ರಸಾದ್ ಕೆ., ೧೯೯೭, **ಮಲೆಯ ಮಾದೇಶ್ವರ ಕಾವ್ಯ,** ಕನ್ನಡ ವಿಶ್ವವಿದ್ಯಾಲಯ, ಹಂಪಿ

೭. ಗದ್ದಗಿಮಠ, ೧೯೬೭, **ಕನ್ನಡ ಜಾನಪದ ಗೀತೆಗಳು,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೮. ಗೋಪಾಲನ್ ಎಂ.ಎಸ್., **ಹಳ್ಳಿಯ ಹಾಡು,** ಗಂಗತರಾಗ ಪ್ರತಿಷ್ಠಾನ, ಮೈಸೂರು

೯. ಗೋರೂರು ರಾಮಸ್ವಾಮಿ ಅಯ್ಯಂಗಾರ್, ೧೯೮೧, **ಹಳ್ಳಿಯ ಬಾಳು,** ಕಾವ್ಯಾಲಯ ಪ್ರಕಾಶನ, ಮೈಸೂರು

೧೦. ಚಕ್ಕರೆ ಶಿವಶಂಕರ್, ೧೯೮೭, **ಮೈಲಾರಲಿಂಗನ ಕಾವ್ಯ,** ಕರ್ನಾಟಕ ಜಾನಪದ ಟ್ರಸ್ಟ್, ಬೆಂಗಳೂರು

೧೧. ನಾಗೇಗೌಡ ಎಚ್.ಎಲ್., ೨೦೦೭, **ಕನ್ನಡ ಜನಪದ ಕಥನ ಕಾವ್ಯ,** ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು

೧೨. ಪರಮಶಿವಯ್ಯ ಜೀ.ಶಂ., ೨೦೧೨, **ಕನ್ನಡ ವೃತ್ತಿಗಾಯಕ ಕಾವ್ಯಗಳು,** ಸಾಗರ ಪ್ರಕಾಶನ, ಬೆಂಗಳೂರು

೧೩. ಪರಮಶಿವಯ್ಯ ಜೀ.ಶಂ., ೧೯೭೯, **ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು,** ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೧೪. ಪರಮಶಿವಯ್ಯ ಜೀ.ಶಂ., ೨೦೧೨, **ಜಾನಪದ ಕೆಲವು ಮುಖಗಳು,** ಸಾಗರ ಪ್ರಕಾಶನ, ಬೆಂಗಳೂರು

೧೫. ಪರಮಶಿವಯ್ಯ ಜೀ.ಶಂ., ೨೦೧೨, **ಜಾನಪದ ಬರಹಗಳು,** ಸಾಗರ ಪ್ರಕಾಶನ, ಬೆಂಗಳೂರು

೧೬. ಬೋರಲಿಂಗಯ್ಯ ಹಿ.ಚಿ., ೧೯೯೭, **ಮಂಟೇಸ್ವಾಮಿ ಕಾವ್ಯ,** ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೭. ರಾಜಶೇಖರ ಪಿ.ಕೆ., ೨೦೦೬, **ಮಲೆಯಮಾದೇಶ್ವರ ಕಾವ್ಯ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

೧೮. ಲಕ್ಕಪ್ಪಗೌಡ ಎಚ್.ಜೆ., ೧೯೯೮, **ಸುವರ್ಣ ಜಾನಪದ(ಸಂಪುಟ ೨),** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೧೯. ಲಕ್ಕಪ್ಪಗೌಡ ಎಚ್.ಜೆ., ೧೯೯೦, **ಸುವರ್ಣ ಜಾನಪದ(ಸಂಪುಟ ೧),** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೨೦. ವೆಂಕಟೇಶ ಇಂದ್ವಾಡಿ, ೨೦೦೬, **ಗೋಣಿಬಸಪ್ಪನ ಕಾವ್ಯ,** ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೧. ವೆಂಕಟೇಶ ಇಂದ್ವಾಡಿ, ೨೦೦೮, **ಮಲೆಯ ಮಾದಪ್ಪನ ಮಹಾಕಾವ್ಯ: ಸಾಂಸ್ಕೃತಿಕ ಮುಖಾಮುಖಿ,** ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೨. ವೆಂಕಟೇಶ ಇಂದ್ವಾಡಿ, ೨೦೧೦, **ಸಿರಿ ಜಾನಪದ ಕಾವ್ಯ: ಸಾಂಸ್ಕೃತಿಕ ಮುಖಾಮುಖಿ,** ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೩. ವೆಂಕಟೇಶ ಇಂದ್ವಾಡಿ, ೨೦೧೨, **ಮಂಟೇಸ್ವಾಮಿ ಕಾವ್ಯ,** ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೪. ಸಂಧ್ಯಾರೆಡ್ಡಿ, ೨೦೦೬, **ಸುವರ್ಣ ಜನಪದ ಕಾವ್ಯ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

೨೫. ಸಂಧ್ಯಾರೆಡ್ಡಿ, ೨೦೦೭, **ಸಮಗ್ರ ಜನಪದ ಸಂಪುಟ** ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೬. ಸಿದ್ದಗಂಗಯ್ಯ ಬಿ., ೧೯೯೬, **ಜುಂಜಪ್ಪನ ಕಾವ್ಯ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೨೭. ಹಲಸಂಗಿ ಗೆಳೆಯರು, ೨೦೦೦, **ಹಲಸಂಗಿ ಹಾಡು,** ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೮. **ಹೊನ್ನ ಬಿತ್ತೇವು ಹೂಲಕೆಲ್ಲ,** ೧೯೬೭, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು